ಬುಧವಾರ, ಜೂನ್ 16, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 167 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕಡಿಮೆ ಮೆಮೊರಿ ಹಾಗೂ ಪ್ರೊಸೆಸರ್ ಶಕ್ತಿ, ಗೌಪ್ಯತೆಗೆ ಹೆಚ್ಚು ಆದ್ಯತೆ ನೀಡುವ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮೈಕ್ರೊಸಾಫ್ಟ್ 'ಎಡ್ಜ್' ಬ್ರೌಸರ್ ಅಭಿವೃದ್ಧಿಪಡಿಸಲಾಗಿದೆ.

ಸೆನ್ಸೆಕ್ಸ್	ನಿಫ್ಟಿ	₹/$
52,773 ▲	15,869 ▲	73.31 ▼

ಬೀದರ್‌ನಲ್ಲಿ ಅಪರೂಪದ ನೀಲಗಾಯ್‌ಗಳ ಸಂಚಾರ


ಬೀದರ್ ಜಿಲ್ಲೆಯ ನಂದಿ ಬಿಜಲಗಾಂವ್‌ದಲ್ಲಿ ಕಂಡು ಬಂದ ನೀಲಗಾಯ್‌ಗಳು
ಚಿತ್ರ: ಜ್ಯೋತಿ ಬಿರಾದಾರ

• ಚಂದ್ರಕಾಂತ ಮಸಾನಿ

ಪ್ರಜಾವಾಣಿ ವಿಶೇಷ

ಬೀದರ್: ಜಿಲ್ಲೆಯಲ್ಲಿ ಒಂದೂವರೆ ತಿಂಗಳಿಂದ ಆಗಾಗ್ಗೆ ಸುರಿದ ಮಳೆಯಿಂದಾಗಿ ಭೂಮಿ ಹಸಿರಾಗುತ್ತಿದೆ. ಕುರುಚಲು ಅರಣ್ಯದಲ್ಲಿ ಚೆನ್ನಾಗಿ ಹುಲ್ಲು ಬೆಳೆದಿರುವುದರಿಂದ ನೆರೆಯ ರಾಜ್ಯಗಳಿಂದ ನೀಲಗಾಯ್‌ಗಳು ಆಹಾರ ಹುಡುಕಿಕೊಂಡು ಜಿಲ್ಲೆಯ ಔರಾದ್ ಹಾಗೂ ಕಮಲನಗರ ತಾಲ್ಲೂಕಿನತ್ತ ಬರುತ್ತಿವೆ.

ಗದ್ದೆಗಳಲ್ಲಿ ನೀಲಗಾಯ್‌ಗಳನ್ನು ಕಂಡು ಕೆಲವರು ಭಯದಿಂದ ಊರು ಸೇರಿದ್ದು, ಅರಣ್ಯ ಇಲಾಖೆಗೆ ಸುದ್ದಿ ಮುಟ್ಟಿಸಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ಒಂದು ತಿಂಗಳಿಂದ ಪರಿಶೀಲನೆ ನಡೆಸಿ 'ಅವು ಹುಲ್ಲುಗಾವಲು ಪ್ರದೇಶದಲ್ಲಿ ಕಂಡು ಬರುವ ನೀಲಗಾಯ್‌ಗಳು, ಆತಂಕ ಬೇಡ' ಎಂದು ಖಚಿತ ಪಡಿಸಿದ ನಂತರ ನಿಟ್ಟುಸಿರು ಬಿಟ್ಟಿದ್ದಾರೆ.

ಹದಿನೈದು ದಿನಗಳ ಅವಧಿಯಲ್ಲಿ ಎರಡು ಹಿಂಡುಗಳಲ್ಲಿ ಒಟ್ಟಾರೆ 33 ನೀಲಗಾಯ್‌ಗಳು ಕಾಣಿಸಿಕೊಂಡಿವೆ. ಒಂದು ಹಿಂಡಿನಲ್ಲಿ ಎರಡು ಗಂಡು, 11 ಹೆಣ್ಣು ಹಾಗೂ ಎರಡು ಮರಿಗಳು ಇದ್ದರೆ, ಇನ್ನೊಂದು ಹಿಂಡಿನಲ್ಲಿ 9 ಗಂಡು, 10 ಹೆಣ್ಣು ಹಾಗೂ ಮೂರು ಮರಿಗಳು ಇವೆ. ಹವ್ಯಾಸಿ ಛಾಯಾಗ್ರಾಹಕರಾದ ವಿವೇಕ ಹಾಗೂ ಜ್ಯೋತಿ ಬಿರಾದಾರ ಅವರು ಎರಡೂ ಹಿಂಡುಗಳ ಚಿತ್ರಗಳನ್ನು ಸೆರೆ ಹಿಡಿದಿದ್ದಾರೆ.

'ಮಧ್ಯಪ್ರದೇಶ, ಉತ್ತರಪ್ರದೇಶ ಹಾಗೂ ಗುಜರಾತ್‌ಗಳಲ್ಲಿ ಹೆಚ್ಚಾಗಿ ಕಂಡು ಬರುವ ನೀಲಗಾಯ್‌ಗಳು ಹುಲ್ಲುಗಾವಲು ಪ್ರದೇಶದಲ್ಲಿ ವಾಸ ಮಾಡುತ್ತವೆ. ಒಂದು ಪ್ರದೇಶದಲ್ಲಿ ಸ್ಥಿರವಾಗಿ ನಿಲ್ಲುವುದಿಲ್ಲ. ಆಹಾರ ಸೇವಿಸುತ್ತ, ಅರಸುತ್ತ ಮುಂದೆ ಸಾಗುತ್ತವೆ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಪೆರ್ನಲ್ ಶಿವಶಂಕರ ಎಸ್. ತಿಳಿಸಿದರು.

'ಮೈಸೂರು, ಬೆಳಗಾವಿ ಸೇರಿದಂತೆ ಕೆಲ ಮೃಗಾಲಯಗಳಲ್ಲಿ ನೀಲಗಾಯ್‌ಗಳು ಇವೆ. ಚಿಂಚೋಳಿಯ ಅರಣ್ಯದಲ್ಲಿ ಎರಡು ನೀಲಗಾಯ್‌ಗಳು ಇರುವ ಮಾಹಿತಿ ಇದೆ. ಸದ್ಯ ರಾಜ್ಯದಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ನೀಲಗಾಯ್‌ಗಳು ಕಂಡು ಬಂದಿರುವುದು ಬೀದರ್ ಜಿಲ್ಲೆಯಲ್ಲಿಯೇ' ಎಂದು ಹೇಳಿದರು.

> **ಜಿಲ್ಲೆಯಲ್ಲಿ ಕೃಷ್ಣ ಮೃಗಗಳ ಸಂಖ್ಯೆ ಹೆಚ್ಚಾಗಿದೆ. ಇದೀಗ ನೀಲಗಾಯ್‌ಗಳೂ ಸೇರಿಕೊಂಡಿದ್ದು, ವನ್ಯಜೀವಿಗಳ ಸಮೀಕ್ಷೆ ನಡೆಸಬೇಕಿದೆ**
> **ಪೆರ್ನಲ್ ಶಿವಶಂಕರ ಎಸ್.**
> ಅರಣ್ಯ ಉಪ ಸಂರಕ್ಷಣಾಧಿಕಾರಿ

ಜಿಲ್ಲೆಯಲ್ಲಿ 2012ರಲ್ಲಿ ಎರಡು ನೀಲಗಾಯ್‌ಗಳು ಕಂಡುಬಂದಿದ್ದವು. 2014ರಲ್ಲಿ ಅಪಘಾತದಲ್ಲಿ ಪೆಟ್ಟುಬಿದ್ದಿದ್ದ ನೀಲಗಾಯ್‌ಗೆ ಪಶುವೈದ್ಯರು ಚಿಕಿತ್ಸೆ ನೀಡಿದ್ದರು ಎನ್ನಲಾಗಿದೆ. ಆದರೆ, ಅರಣ್ಯ ಇಲಾಖೆಯಲ್ಲಿ ಈ ಕುರಿತ ದಾಖಲೆಗಳಿಲ್ಲ.

'ಗಂಡು ನೀಲಗಾಯ್ ನೋಡಿದ ನಂದಿ ಬಿಜಲಗಾಂವ್ ಗ್ರಾಮಸ್ಥರೊಬ್ಬರು ಕಾಡಿನಲ್ಲಿ ಹುಲಿ ಬಂದಿದೆ ಎಂದು ತಿಳಿಸಿದ್ದರು. ಪೊಲೀಸರಿಗೂ ಮಾಹಿತಿ ಮುಟ್ಟಿಸಿದರು. ಕೆಲವರು ವಿಚಿತ್ರ ಪ್ರಾಣಿಯೊಂದು ಬಂದಿದೆ ಎಂದು ಸುದ್ದಿ ಹಬ್ಬಿಸಿದರು. ನೀಲಗಾಯ್ ಇರುವುದು ಗೊತ್ತಿದ್ದ ಕಾರಣ ಅವರಿಗೆ ತಿಳಿವಳಿಕೆ ನೀಡಿದೆ' ಎಂದು ಆರ್‌ಎಫ್‌ಒ ಪ್ರೇಮಶೇಖರ ಹೇಳಿದರು.

'ನೀಲಗಾಯ್ ಹಿಂಡುಗಳು ನೆರೆಯ ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ಗಡಿಯೊಳಗೂ ಸಂಚರಿಸುತ್ತಿವೆ. ಉದಗಿರ ಹಾಗೂ ಚೊಂಡಿಮುಖೇಡ ಪರಿಸರದಲ್ಲಿ ಸಂಚರಿಸಿದ ಮಾಹಿತಿ ಇದೆ. ಇವು ಸಾಧುಪ್ರಾಣಿ. ಮನುಷ್ಯರಿಗೆ ಅದರಿಂದ ಅಪಾಯ ಇಲ್ಲ. ಗ್ರಾಮ ಪಂಚಾಯಿತಿಗಳ ಮೂಲಕ ಜನರಿಗೆ ತಿಳಿವಳಿಕೆ ನೀಡಲಾಗುತ್ತಿದೆ' ಎಂದು ತಿಳಿಸಿದರು.

ಮೂರು ದಿನಗಳ ಭೇಟಿಗಾಗಿ ಅರುಣ್ ಸಿಂಗ್ ರಾಜ್ಯಕ್ಕೆ • ಪರ–ವಿರೋಧದ ಅಹವಾಲು ಆಲಿಕೆ

ಬಿಜೆಪಿ ಗುದ್ದಾಟ: ತೆರೆಮರೆಯಾಟ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕತ್ವ ಬದಲಾವಣೆ, ಆಡಳಿತದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರ ಮಗನ ಹಸ್ತಕ್ಷೇಪ, ಸರ್ಕಾರದ ಕಾರ್ಯವೈಖರಿ ಕುರಿತ ಅಸಮಾಧಾನಕ್ಕೆ ಸಂಬಂಧಿಸಿ ಬಿಜೆಪಿಯ ಎರಡು ಬಣಗಳ ಮಧ್ಯೆ ನಡೆದಿರುವ ಗುದ್ದಾಟದ ಬಗ್ಗೆ ಇಬ್ಬಣಗಳ ಅಹವಾಲು ಆಲಿಕೆಗೆ ಪಕ್ಷದ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ರಾಜ್ಯಕ್ಕೆ ಬರಲಿದ್ದು, ಮುಂದೇನಾಗುವುದೆಂಬ ಕುತೂಹಲ ಆಡಳಿತ ಪಕ್ಷದ ಪಾಳೆಯದಲ್ಲಿ ಮನೆ ಮಾಡಿದೆ.

ಬುಧವಾರದಿಂದ (ಜೂ.16) ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ಬೀಡು ಬಿಡಲಿರುವ ಅರುಣ್ ಸಿಂಗ್, ಸಚಿವರು, ಶಾಸಕರು ಮತ್ತು ಸಂಸದರ ಅಹವಾಲುಗಳನ್ನು ಆಲಿಸಿ, ವರಿಷ್ಠರಿಗೆ ಮಾಹಿತಿ ನೀಡಲು ನಿರ್ಧರಿಸಿದ್ದಾರೆ. ಈ ಮಧ್ಯೆ, ನಾಯಕತ್ವದ ಬದಲಾವಣೆಯ ಪರ ಮತ್ತು ವಿರುದ್ಧ ಇರುವವರೂ ದೂರುಗಳನ್ನು ಸಲ್ಲಿಸಲು ತಯಾರಿ ನಡೆಸಿದ್ದಾರೆ.

ಕಳೆದ ಎರಡು ತಿಂಗಳಿಂದ ಕೆಲವು ಬಿಜೆಪಿ ಶಾಸಕರು ಮತ್ತು ಸಚಿವರು ದೆಹಲಿಗೆ ಭೇಟಿ ನೀಡಿ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಅಹವಾಲು ಸಲ್ಲಿಸಲು ಪ್ರಯತ್ನಿಸಿದ್ದರು. ಯಾರಿಗೂ ವರಿಷ್ಠರ ಭೇಟಿಗೆ ಅವಕಾಶ ಸಿಕ್ಕಿರಲಿಲ್ಲ. ಆದರೆ, ಮುಖ್ಯಮಂತ್ರಿ ಯಡಿಯೂರಪ್ಪ ಅವರೇ 'ವರಿಷ್ಠರು ಬಯಸಿದರೆ ತಾವು ರಾಜೀನಾಮೆ ನೀಡಲು ಸಿದ್ಧ' ಎಂದು ಹೇಳಿದ್ದು, ದೊಡ್ಡ ಚರ್ಚೆಗೆ ಕಾರಣವಾಗಿತ್ತು. ಈ ಎಲ್ಲ ಬೆಳವಣಿಗೆಯಿಂದಾಗಿ ಅರುಣ್‌ಸಿಂಗ್ ಭೇಟಿ ನಿಗದಿಯಾಗಿದೆ.

'ಅರುಣ್‌ಸಿಂಗ್ ಅವರು ಮುಖ್ಯಮಂತ್ರಿ ಯಡಿಯೂರಪ್ಪ ಅವರ ಪರ ಇದ್ದಾರೆ. ಆದ್ದರಿಂದ ಅವರ ಜತೆಗೆ ಯಾರಾದರೂ ಒಬ್ಬ ವೀಕ್ಷಕರನ್ನು ಕಳಿಸಬೇಕು' ಎಂದು ವಿರೋಧಿ ಬಣ ವರಿಷ್ಠರ ಮೇಲೆ ಒತ್ತಡ ಹೇರಿತ್ತು. ಅದನ್ನು ವರಿಷ್ಠರು ಒಪ್ಪಿಲ್ಲ ಎಂದು ಯಡಿಯೂರಪ್ಪ ಬಣದ ಮೂಲಗಳು ಹೇಳಿವೆ.

ನಾಯಕತ್ವ ಬದಲಿಸಬೇಕು ಎಂದು ಪಟ್ಟು ಹಿಡಿದಿರುವ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಅರವಿಂದ್ ಬೆಲ್ಲದ ಅವರ ಗುಂಪು ಅದಕ್ಕೆ ಪೂರಕವಾಗಿ ವಾದ ಮುಂದಿಡಲಿದೆ. ಯಾವುದೇ ಕಾರಣಕ್ಕೂ ನಾಯಕತ್ವ ಬದಲಿಸಬಾರದು ಎಂದು ಯಡಿಯೂರಪ್ಪ ಬೆಂಬಲಿಗರ ಗುಂಪು ಒತ್ತಡ ಹೇರಲಿದೆ. ಆದರೆ, ಪಕ್ಷದಲ್ಲಿ ಮೌನವಾಗಿರುವ ನಿಷ್ಠಾವಂತರ ಮಾತುಗಳಿಗೂ ಬೆಲೆ ಕೊಡಬೇಕು ಎಂದು ಮುಖ್ಯ ಸಚೇತಕ ವಿ.ಸುನಿಲ್‌ಕುಮಾರ್ ಮತ್ತು ಸಮಾನಮನಸ್ಕರು ತಮ್ಮ ವಿಚಾರಗಳನ್ನು ಹೇಳಿಕೊಳ್ಳಲು ಸಿದ್ಧತೆ ನಡೆಸಿದ್ದಾರೆ.

ಕಾರ್ಯವೈಖರಿ ಬಗ್ಗೆ ಮಾಹಿತಿ: ಪ್ರತಿಯೊಬ್ಬ ಸಚಿವರ ಕಾರ್ಯ ವೈಖರಿ, ಆಡಳಿತ, ಸಾಧನೆಗಳ ಬಗ್ಗೆ ಮಾಹಿತಿ ಪಡೆಯಲಿದ್ದಾರೆ. ಸಚಿವರ ಕ್ರಿಯಾಶೀಲತೆ ಜತೆಗೆ ಅವರು ಪಕ್ಷವನ್ನು ಬಲಪಡಿಸುವಲ್ಲಿ ಎಷ್ಟರ ಮಟ್ಟಿಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂಬ ಮಾಹಿತಿಯನ್ನೂ ಅರುಣ್ ಸಿಂಗ್ ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಮತ್ತು ಸಚಿವರು, ಸಚಿವರು ಮತ್ತು ಶಾಸಕರು, ಸಚಿವರು ಮತ್ತು ಸಂಪುಟ ಸಹೋದ್ಯೋಗಿಗಳ ನಡುವೆ ಸಂಬಂಧ ಮತ್ತು ವಿಶ್ವಾಸಗಳ ಬಗ್ಗೆ ಮಾಹಿತಿ ಕಲೆ ಹಾಕುವುದರ ಜತೆಗೆ ಮುಖ್ಯಮಂತ್ರಿಯವರ ಬಗ್ಗೆಯೂ ಅಭಿಪ್ರಾಯ ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶಾಸಕರಿಗಾಗಿ ಒಂದು ದಿನ ಮೀಸಲು: ಎಲ್ಲ ಶಾಸಕರು, ಸಂಸದರು ಮತ್ತು ವಿಧಾನಪರಿಷತ್ ಸದಸ್ಯರಿಂದ ಅಹವಾಲು ಕೇಳಲು ಇದೇ 17 ರಂದು ಪೂರ್ತಿ ದಿನ ಮೀಸಲಿಟ್ಟಿದ್ದಾರೆ.

'ನಾಯಕತ್ವದ ಬಗ್ಗೆ ಗೊಂದಲ ಇಲ್ಲ'



'ನಾಯಕತ್ವದ ಬಗ್ಗೆ ಯಾವುದೇ ಗೊಂದಲ ಇಲ್ಲ. ಎಲ್ಲರೂ ಒಗ್ಗಟ್ಟಾಗಿದ್ದೇವೆ. ಸಣ್ಣಪುಟ್ಟ ಗೊಂದಲಗಳನ್ನು ಅರುಣ್‌ಸಿಂಗ್ ಬಗೆಹರಿಸುತ್ತಾರೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. 'ಅರುಣ್‌ಸಿಂಗ್ ಅವರಿಗೆ ಎಲ್ಲ ರೀತಿಯ ಸಹಕಾರ ನೀಡುತ್ತೇನೆ. ಯಾರೋ ಒಂದಿಬ್ಬರಿಗೆ ಬೇಸರ ಆಗಿರಬಹುದು. ಅವರನ್ನು ಮಾತನಾಡಿಸಿ ಸರಿಪಡಿಸಲಾಗುವುದು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ರಾಜ್ಯದ ಮಾಹಿತಿ ಪಡೆದ ಮೋದಿ?

ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಬಿ.ಎಲ್.ಸಂತೋಷ್ ಅವರು ಮಂಗಳವಾರ ಸಭೆ ನಡೆಸಿದ್ದು, ಉತ್ತರಪ್ರದೇಶ ಬೆಳವಣಿಗೆಯ ಜತೆಗೆ, ಕರ್ನಾಟಕದ ಪಕ್ಷದ ಬೆಳವಣಿಗೆಯ ಬಗ್ಗೆಯೂ ಚರ್ಚೆ ನಡೆದಿದೆ ಎಂದು ತಿಳಿದು ಬಂದಿದೆ.

ಬಲ ಪ್ರದರ್ಶನಕ್ಕೆ ಅವಕಾಶ ಇಲ್ಲ

ಶಾಸಕರು ಗುಂಪಿನಲ್ಲಿ ಬಂದು ಬಲ ಪ್ರದರ್ಶನಕ್ಕೆ ಪ್ರಯತ್ನ ನಡೆಸಬಾರದು ಎಂದು ಅರುಣ್‌ಸಿಂಗ್ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಅವರು ಕೆಲವು ಶಾಸಕರ ಗುಂಪಿನೊಂದಿಗೆ ಭೇಟಿ ಮಾಡಲು ಉದ್ದೇಶಿಸಿದ್ದರು, ಅದಕ್ಕೆ ಅವಕಾಶ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ ಎನ್ನಲಾಗಿದೆ.

ಮುಖ್ಯಮಂತ್ರಿ ಯಡಿಯೂರಪ್ಪ ಅವರೂ ಕೂಡ ರೇಣುಕಾಚಾರ್ಯ ಮತ್ತು ಇತರರು ಯಾವುದೇ ಅಹವಾಲು ಸಲ್ಲಿಸಬಾರದು ಎಂದು ಸೂಚಿಸಿರುವುದಾಗಿ ಮೂಲಗಳು ತಿಳಿಸಿವೆ.


ಅರುಣ್ ಸಿಂಗ್ ಸಭೆಗಳು

ಜೂ.16: ಸಚಿವರ ಜತೆ ಸಭೆ, ಜಗನ್ನಾಥ ಭವನ, ಸಂಜೆ 5
ಜೂ.17: ಶಾಸಕರು, ಸಂಸದರು, ವಿಧಾನಪರಿಷತ್ ಸದಸ್ಯರ ಜತೆ ಭೇಟಿ, ಕುಮಾರಕೃಪಾ ಅತಿಥಿ ಗೃಹ, ಬೆಳಿಗ್ಗೆ 9 ರಿಂದ
ಜೂ.18: ಪದಾಧಿಕಾರಿಗಳ ಸಭೆ, ಜಗನ್ನಾಥ ಭವನ, ಬೆಳಿಗ್ಗೆ 9
• ಪಕ್ಷದ ಪ್ರಮುಖ ನಾಯಕರ ಸಭೆ(ಕೋರ್ ಕಮಿಟಿ), ಸಂಜೆ 5

ಈ ಬಾರಿಯೇ 4 ವರ್ಷದ ಪದವಿ

ಅಕ್ಟೋಬರ್‌ಗೆ ಶೈಕ್ಷಣಿಕ ವರ್ಷಾರಂಭ: ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಶಿಫಾರಸಿನಂತೆ ಈ ಶೈಕ್ಷಣಿಕ ವರ್ಷದಿಂದಲೇ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ನಾಲ್ಕು ವರ್ಷದ ಪದವಿ ಕೋರ್ಸ್‌ಗಳನ್ನು ಆರಂಭಿಸುವಂತೆ ಕುಲಪತಿಗಳಿಗೆ ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಸಲಹೆ ನೀಡಿದ್ದಾರೆ.

2021-22ನೇ ಸಾಲಿನ ಶೈಕ್ಷಣಿಕ ಚಟುವಟಿಕೆಯ ಬಗ್ಗೆ ರಾಜ್ಯದ ಎಲ್ಲ ಕುಲಪತಿಗಳ ಜತೆ ಮಂಗಳವಾರ ಅವರು ವರ್ಚುಯಲ್ ಸಭೆ ನಡೆಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅಕ್ಟೋಬರ್ ಮೊದಲ ವಾರದಲ್ಲಿ ಈ ವರ್ಷದ ಶೈಕ್ಷಣಿಕ ವರ್ಷದ ಚಟುವಟಿಕೆ ಆರಂಭವಾಗುತ್ತವೆ. ಮೊದಲ ವರ್ಷದ ಪದವಿಗೆ ಅಕ್ಟೋಬರ್ ಮೊದಲ ವಾರದಿಂದಲೇ ದಾಖಲಾತಿ ಆರಂಭ ಮಾಡುವಂತೆ ಕುಲಪತಿಗಳಿಗೆ ತಿಳಿಸಲಾಗಿದೆ' ಎಂದರು.

'ಕೋವಿಡ್ ಕಾರಣಕ್ಕೆ ಪ್ರಸಕ್ತ ವರ್ಷದಲ್ಲಿ ಪಿಯುಸಿ ವಿದ್ಯಾರ್ಥಿಗಳೆಲ್ಲರೂ ಪಾಸಾಗಿದ್ದಾರೆ. ವಿವಿಧ ಕೋರ್ಸ್‌ಗಳಿಗೆ ಬೇಡಿಕೆ ಬರುತ್ತಿದೆ. ನಾಲ್ಕು ವರ್ಷದ ಪದವಿ ತರಗತಿಗಳನ್ನು ಆರಂಭಿಸುವ ಮೂಲಕ ವಿಶ್ವವಿದ್ಯಾಲಯಗಳು ಪದವಿ ವ್ಯಾಸಂಗದ ಅಭಿಲಾಶೆಯುಳ್ಳ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಕುಲಪತಿಗಳಿಗೆ ಸೂಚಿಸಲಾಗಿದೆ' ಎಂದು ಹೇಳಿದರು.

ಜುಲೈ 15ರಿಂದ ದ್ವಿತೀಯ ಪಿಯುಸಿ ದಾಖಲಾತಿ

ಬೆಂಗಳೂರು: 2021–22ನೇ ಸಾಲಿಗೆ ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗಳ ಶೈಕ್ಷಣಿಕ ಚಟುವಟಿಕೆ ಆರಂಭಿಸುವ ಕುರಿತು ಪದವಿ ಪೂರ್ವ ಶಿಕ್ಷಣ ಇಲಾಖೆ ತಾತ್ಕಾಲಿಕ ವೇಳಾಪಟ್ಟಿ ಪ್ರಕಟಿಸಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡ ಒಂದು ವಾರದ ಬಳಿಕ ಪ್ರಥಮ ಪಿಯುಸಿ ದಾಖಲಾತಿ ಆರಂಭವಾಗಲಿದೆ. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ದಾಖಲಾತಿಗೆ ದಂಡ ಶುಲ್ಕವಿಲ್ಲದೆ ಜುಲೈ 15ರಿಂದ ಆಗಸ್ಟ್ 13ರವರೆಗೆ, ₹ 670 ದಂಡ ಸಹಿತ ಆಗಸ್ಟ್ 16ರಿಂದ 27ರವರೆಗೆ ಹಾಗೂ ₹ 2,890 ದಂಡ ಸಹಿತ ಆಗಸ್ಟ್ 30ರಿಂದ ಸೆ. 9ರವರೆಗೆ ದಾಖಲಾತಿಗೆ ಅವಕಾಶ ನೀಡಲಾಗಿದೆ.

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಜುಲೈ 15ರಿಂದ ಆನ್‌ಲೈನ್ ತರಗತಿ ಆರಂಭವಾಗಲಿದೆ. ಪ್ರಥಮ ಮತ್ತು ದ್ವಿತೀಯ ಪಿಯುಸಿಗೆ 2019–20 ಹಾಗೂ 2020–21ನೇ ನೇ ಸಾಲಿನಲ್ಲಿ ನಿಗದಿಪಡಿಸಿದ ಶುಲ್ಕ ಸಂಗ್ರಹಿಸಬೇಕು ಎಂದೂ ಇಲಾಖೆ ಸ್ಪಷ್ಟಪಡಿಸಿದೆ.

ಬಿ.ಎಸ್ಸಿಗೆ ಸಿಇಟಿ ಇಲ್ಲ

ಬಿ.ಎಸ್ಸಿಗೆ ಸಿಇಟಿ (ಸಾಮಾನ್ಯ ಪ್ರವೇಶ ಪರೀಕ್ಷೆ) ಮೂಲಕ ಪ್ರವೇಶ ನೀಡುವ ಚಿಂತನೆಯನ್ನು ಸರ್ಕಾರ ಕೈಬಿಟ್ಟಿದೆ ಎಂದು ಡಾ.ಅಶ್ವತ್ಥನಾರಾಯಣ ತಿಳಿಸಿದರು.

ವಿಜ್ಞಾನ ಬೋಧನೆ ಮತ್ತು ಕಲಿಕೆಯಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ಪದವಿ ವಿಜ್ಞಾನ ಪ್ರವೇಶಕ್ಕೂ ಸಿಇಟಿ ತರುವ ಯೋಚನೆ ಇತ್ತು. ಆದರೆ, ಸದ್ಯಕ್ಕೆ ಕೈಬಿಡಲಾಗಿದೆ ಎಂದರು.

ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಮೂಲಕ ಈ ವರ್ಷದಿಂದಲೇ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಪ್ರತ್ಯೇಕ ಡಿಜಿಟಲ್ ಪೋರ್ಟಲ್ ಸಿದ್ಧವಾಗುತ್ತಿದೆ. ಅದನ್ನು ಇ- ಆಡಳಿತ ಇಲಾಖೆ ಅಭಿವೃದ್ಧಿಪಡಿಸುತ್ತಿದೆ. ಇದೇ 25 ರಿಂದ ಪ್ರಾಯೋಗಿಕವಾಗಿ ಬಳಸಲು ಸರ್ಕಾರ ಅನುಮತಿ ನೀಡಿದೆ. ಜುಲೈ 15ಕ್ಕೆ ಲೋಕಾರ್ಪಣೆ ಆಗಲಿದೆ. ದಾಖಲಾತಿಗೆ ನಿಗದಿ ಮಾಡಿರುವ ದಿನಾಂಕಕ್ಕೆ ಮೊದಲೇ ಎಲ್ಲ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಈ ಪೋರ್ಟಲ್ ಬಳಕೆಗೆ ಸಿದ್ಧವಾಗಿರಬೇಕು ಎಂದು ಕುಲಪತಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

27,77,010 ▲ ಒಟ್ಟು ಸೋಂಕಿತರು (27,71,969 ನಿನ್ನೆಯ ವಿವರ)
1,62,282 ▼ ಸಕ್ರಿಯ ಪ್ರಕರಣಗಳು
25,81,559 ▲ ಗುಣಮುಖರಾದವರು
33,148 ಒಟ್ಟು ಸಾವು ▲

ದಿನದ ಏರಿಕೆ		
ಹೊಸ ಪ್ರಕರಣ	5,041	▼
ಗುಣಮುಖ	14,785	▼
ಸಾವು	115	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ
ಪ್ರಕಾಶ್ ಶೆಟ್ಟಿ



ಹಣ ಜಪ್ತಿ • ಆರೋಪಿಗಳ ಜಾಮೀನಿಗೆ ಸಿಐಡಿ ಆಕ್ಷೇಪಣೆ

ವಂಚಕ ಕಂಪನಿ ಖಾತೆಗಳಲ್ಲಿ ₹ 130 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪವರ್ ಬ್ಯಾಂಕ್' ಆ್ಯಪ್ ಮೂಲಕ ಜನರಿಂದ ಹಣ ಸಂಗ್ರಹಿಸಿ ವಂಚಿಸಿರುವ ಕಂಪನಿಗಳ ವಿವಿಧ ಬ್ಯಾಂಕ್ ಖಾತೆಗಳಲ್ಲಿ ಜಮೆಯಾಗಿದ್ದ ₹ 130 ಕೋಟಿಯನ್ನು ಸಿಐಡಿ ಸೈಬರ್ ಕ್ರೈಂ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ಕೇರಳದ ಅನಸ್ ಅಹ್ಮದ್ ತಲೆಮರೆಸಿಕೊಂಡಿದ್ದು, ನಿರೀಕ್ಷಣಾ ಜಾಮೀನು ಕೋರಿ ನಗರದ ಸಿಸಿಎಚ್ –64ನೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾನೆ. ಅರ್ಜಿಗೆ ಮಂಗಳವಾರ ಆಕ್ಷೇಪಣೆ ಸಲ್ಲಿಸಿರುವ ಸಿಐಡಿ ಅಧಿಕಾರಿಗಳು, ಆರೋಪಿಗೆ ಜಾಮೀನು ನೀಡದಂತೆ ಕೋರಿದರು.

ಸಿಐಡಿ ಪರ ವಾದ ಮಂಡಿಸಿದ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎಸ್.ಪಾಟೀಲ, 'ಉದ್ಯೋಗಿಗಳನ್ನೇ ನಿರ್ದೇಶಕರನ್ನಾಗಿ ಮಾಡಿಕೊಂಡು ಅಕ್ರಮವಾಗಿ ಕಂಪನಿಗಳನ್ನು ಸೃಷ್ಟಿಸಿಕೊಂಡಿರುವ 13 ಆರೋಪಿಗಳು, ಲಾಭದ ಆಮಿಷವೊಡ್ಡಿ ಜನರನ್ನು ವಂಚಿಸಿದ್ದಾರೆ. ನಿರೀಕ್ಷಣಾ ಜಾಮೀನು ಕೋರಿರುವ ಆರೋಪಿ ಸುಳ್ಳು ವಿಳಾಸ ನೀಡಿದ್ದು, ತನಿಖೆಯಿಂದ ತಪ್ಪಿಸಿಕೊಳ್ಳುವ ಉದ್ದೇಶ ಅವರದ್ದಾಗಿದೆ' ಎಂದು ಹೇಳಿದರು.

'ಭಾರತದಲ್ಲಿ ಆ್ಯಪ್‌ಗಳು ಚಾಲ್ತಿಯಲ್ಲಿದ್ದರೂ, ನಿರ್ವಹಣೆಯನ್ನು ಚೀನಾದಿಂದ ಮಾಡಲಾಗುತ್ತಿತ್ತು. ಪ್ರಕರಣದಲ್ಲಿ ಚೀನಾ ಪ್ರಜೆಗಳೇ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರನ್ನೂ ಪತ್ತೆ ಮಾಡಬೇಕಿದೆ. ಪ್ರಮುಖ ಆರೋಪಿ ಅನಸ್ ಅಹ್ಮದ್ ಹಾಗೂ ಇತರರು ಜನರನ್ನು ವಂಚಿಸಿ ಗಳಿಸಿದ ಹಣವನ್ನು ಜಮೆ ಮಾಡಲೆಂದು ಐಸಿಐಸಿಐ ಬ್ಯಾಂಕ್ ಸೇರಿ ಹಲವು ಬ್ಯಾಂಕ್‌ಗಳಲ್ಲಿ 600 ಖಾತೆಗಳನ್ನು ತೆರೆದಿದ್ದರು. ಅದೇ ಖಾತೆಗಳನ್ನು ಸಿಐಡಿ ಇದೀಗ ಜಪ್ತಿ ಮಾಡಿದೆ' ಎಂದರು.

'13 ಕಂಪನಿಗಳಲ್ಲಿ 90 ಸಾವಿರ ವ್ಯವಹಾರಗಳಿಂದ ₹ 290 ಕೋಟಿ ಸಂಗ್ರಹಿಸಲಾಗಿತ್ತು. ಅದಕ್ಕಾಗಿ ಜೆಕಾ ಬೈಟ್ಸ್ ಹಾಗೂ ರೇಜೋರ್‌ಪೇ ಹಣ ವರ್ಗಾವಣೆ ಕಂಪನಿಗಳನ್ನು ಮಧ್ಯವರ್ತಿಗಳಾಗಿ ಬಳಸಿಕೊಳ್ಳಲಾಗಿದೆ. ಜನರಿಂದ ಕಟ್ಟಿಸಿಕೊಂಡ ಹಣಕ್ಕೆ ಯಾವುದೇ ಬಡ್ಡಿ ನೀಡಿಲ್ಲ. ಹಣವನ್ನೂ ವಾಪಸು ಕೊಟ್ಟಿಲ್ಲ. ಈ ಸಂಬಂಧ 29 ಸಾವಿರ ಗ್ರಾಹಕರು, ರೇಜೋರ್‌ಪೇ ಕಂಪನಿ ಮೂಲಕ ಸಿಐಡಿಗೆ ದೂರು ನೀಡಿದ್ದಾರೆ' ಎಂದೂ ಪಾಟೀಲ ವಾದಿಸಿದರು.

ಅಕ್ರಮವಾಗಿ ವಾಸವಿರುವ ಚೀನಾ ಪ್ರಜೆ: 'ಆರೋಪಿ ಅನಸ್ ಅಹ್ಮದ್ ಪತ್ನಿ ಹು ಕಕ್ಸಿಯೋಲಿನ್ ಚೀನಾ ಪ್ರಜೆಯಾಗಿದ್ದು, ವೀಸಾ ಅವಧಿ ಮುಗಿದರೂ ನಗರದಲ್ಲಿ ವಾಸವಿದ್ದಾರೆ. ಈ ಬಗ್ಗೆ ವಿವಿಧ ಠಾಣೆಗಳಲ್ಲಿ ಅವರ ವಿರುದ್ಧ ಪ್ರಕರಣಗಳು ದಾಖಲಾಗಿವೆ' ಎಂದೂ ಪಾಟೀಲ ಹೇಳಿದರು. 'ಕೋವಿಡ್ ಬಿಕ್ಕಟ್ಟಿನ ಸಮಯದಲ್ಲೂ ಚೀನಾ ಪ್ರಜೆಗಳ ಜೊತೆ ಕೈಜೋಡಿಸಿ ಅನಸ್ ಅಹ್ಮದ್ ಜನರಿಗೆ ಕೋಟ್ಯಂತರ ರೂಪಾಯಿ ವಂಚಿಸಿದ್ದಾನೆ. ಈತನ ಹಾಗೂ ಇತರರ ಜಾಮೀನು ಅರ್ಜಿಗಳನ್ನು ತಿರಸ್ಕರಿಸಬೇಕು' ಎಂದೂ ಕೋರಿದರು.

ಆರೋಪಿಗಳ ಪರ ವಕೀಲರು, 'ನಮ್ಮ ಕಕ್ಷಿದಾರರು ಕಾನೂನು ಅನ್ವಯವೇ ಕಂಪನಿಗಳನ್ನು ತೆರೆದಿದ್ದಾರೆ. ಸಿಐಡಿ ತನಿಖೆಗೆ ಸಹಕರಿಸಲಿದ್ದಾರೆ. ಹೀಗಾಗಿ, ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದರು.

ನ್ಯಾಯಾಲಯ, ಜಾಮೀನು ಅರ್ಜಿ ಕುರಿತಂತೆ ತೀರ್ಪು ಕಾಯ್ದಿರಿಸಿತು.

ಬೀದಿಬದಿ ವ್ಯಾಪಾರಿಗಳ ₹ 2 ಸಾವಿರಕ್ಕೆ ಬ್ಯಾಂಕ್‌ನಿಂದ ಕತ್ತರಿ

'ಪಿಎಂ ಸ್ವನಿಧಿ' ಸಾಲಕ್ಕೆ ಕಡಿತ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಆರ್ಥಿಕ ಪ್ಯಾಕೇಜ್‌ನಡಿ ಬೀದಿಬದಿ ವ್ಯಾಪಾರಿಗಳಿಗೆ ರಾಜ್ಯ ಸರ್ಕಾರ ನೀಡುತ್ತಿರುವ ₹ 2 ಸಾವಿರ ಸಹಾಯಧನವನ್ನು, ವ್ಯಾಪಾರಿಗಳು ಪಿಎಂ ಸ್ವನಿಧಿ (ಪ್ರಧಾನ ಮಂತ್ರಿ ಬೀದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿ) ಯೋಜನೆಯಡಿ ಪಡೆದ ₹ 10 ಸಾವಿರ ಸಾಲದ ಕಂತುಗಳಿಗೆ ಬ್ಯಾಂಕುಗಳು ಕಡಿತ ಮಾಡುತ್ತಿವೆ.

ಇದೇ 8ರಂದು 1,91,684 ಬೀದಿಬದಿ ವ್ಯಾಪಾರಿಗಳ ಖಾತೆಗೆ ತಲಾ ₹ 2 ಸಾವಿರದಂತೆ ಒಟ್ಟು ₹ 38.33 ಕೋಟಿ ವರ್ಗಾವಣೆ ಮಾಡಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 'ಈ ಸಹಾಯಧನವನ್ನು ಯಾವುದೇ ಸಾಲಕ್ಕೆ ಹೊಂದಾಣಿಕೆ ಮಾಡದಂತೆ ಬ್ಯಾಂಕಿನವರಿಗೆ ಸೂಚನೆ ನೀಡಲಾಗಿದೆ' ಎಂದಿದ್ದರು.

ಆದರೆ, ಇಲ್ಲಿನ ಗಾಂಧಿನಗರದ ಆಂಧ್ರ ಬ್ಯಾಂಕ್, ಯೂನಿಯನ್ ಬ್ಯಾಂಕ್, ಶ್ರೀರಂಗಪಟ್ಟಣ ಕೆನರಾ ಬ್ಯಾಂಕು ಸೇರಿದಂತೆ ರಾಜ್ಯದಾದ್ಯಂತ ಅನೇಕ ಬ್ಯಾಂಕುಗಳು ಪಿಎಂ ಸ್ವ ನಿಧಿ ಸಾಲದ ಕಂತುಗಳಿಗೆ ಸಹಾಯಧನವನ್ನು ಮರು ಹೊಂದಿಸಿವೆ. ಕೆಲವು ಬ್ಯಾಂಕುಗಳು ಎರಡು ಕಂತುಗಳ ಹಣವನ್ನು ಕಡಿತ ಮಾಡಿವೆ. ಇನ್ನೂ ಕೆಲವು ಬ್ಯಾಂಕುಗಳು ಸಂಪೂರ್ಣ ₹ 2 ಸಾವಿರವನ್ನೂ ಕಡಿತ ಮಾಡಿಕೊಂಡಿವೆ.

'ಸಹಾಯಧನವನ್ನು ಸಾಲಕ್ಕೆ ಜಮೆ ಮಾಡದಂತೆ ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಿದ್ದೆವು. ಆದರೂ ಕಡಿತ ಮಾಡಲಾಗಿದೆ' ಎಂದು ಬೀದಿಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಸಿ.ಇ. ರಂಗಸ್ವಾಮಿ ಹೇಳಿದರು.

ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ ನೋಂದಾಯಿತ ಬೀದಿಬದಿ ವ್ಯಾಪಾರಿಗಳಿಗೆ ಪಿಎಂ ಸ್ವನಿಧಿ ಯೋಜನೆಯನ್ನು 2020ರ ಜೂನ್‌ನಿಂದ ಜಾರಿಗೆ ತರಲಾಗಿದೆ. ರಾಜ್ಯದಲ್ಲಿ 2,16,439 ಬೀದಿಬದಿ ವ್ಯಾಪಾರಿಗಳನ್ನು ಗುರುತಿಸಲಾಗಿದೆ. ಇದೇ ಮಾರ್ಚ್‌ವರೆಗೆ 1,55,510 ಮಂದಿ ಸಾಲಕ್ಕೆ ಅರ್ಜಿ ಸಲ್ಲಿಸಿದ್ದು, 1,21,968 ಜನರಿಗೆ ಸಾಲ ಮಂಜೂರಾಗಿದೆ. 93,060 ಜನರಿಗೆ ಸಾಲ ವಿತರಿಸಲಾಗಿದೆ. 28,908 ಅರ್ಜಿಗಳಿಗೆ ಸಾಲ ನೀಡಲು ಇನ್ನೂ ಬಾಕಿ ಇದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

'ಕೋವಿಡ್ ಪ್ಯಾಕೇಜ್‌ನಡಿ ನೀಡಿದ ₹ 2 ಸಾವಿರವನ್ನು ಸಾಲದ ಕಂತುಗಳಿಗೆ ಹೊಂದಾಣಿಸದಂತೆ ಬ್ಯಾಂಕುಗಳಿಗೆ ನಿರ್ದೇಶನ ನೀಡಲಾಗಿದೆ. ರಾಜ್ಯಮಟ್ಟದ ಬ್ಯಾಂಕರ್ಸ್ ಸಮಿತಿ ಮೂಲಕ ಎಲ್ಲ ಬ್ಯಾಂಕುಗಳಿಗೆ ಈ ಬಗ್ಗೆ ಸೂಚನೆ ಹೋಗಿದೆ' ಎಂದು ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ನಿರ್ದೇಶಕಿ ಎನ್. ಮಂಜುಶ್ರೀ ತಿಳಿಸಿದರು.

> **ಸಹಾಯಧನವನ್ನು ಸಾಲಕ್ಕೆ ಹೊಂದಾಣಿಕೆ ಮಾಡಿದ್ದರೆ ಅಂಥ ಬ್ಯಾಂಕುಗಳ ಮೇಲೆ ಕ್ರಮ ಜರುಗಿಸಲಾಗುವುದು. ಹಣವನ್ನು ಮರಳಿಸುವಂತೆ ಸೂಚಿಸಲಾಗುವುದು**
> **ಎನ್. ಮಂಜುಶ್ರೀ,** ನಿರ್ದೇಶಕಿ, ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ

> **ಪಿಎಂ ಸ್ವ ನಿಧಿ ಸಾಲದ ಕಂತುಗಳಿಗೆ ಸಹಾಯಧನದ ಹೊಂದಾಣಿಕೆ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ತಿಳಿಸಿದ್ದರು. ಆದರೂ ಬ್ಯಾಂಕಿನವರು ಹಣ ಕಡಿತ ಮಾಡಿದ್ದಾರೆ**
> **ಬಿ.ಇ. ರಂಗಸ್ವಾಮಿ,** ಬೀದಿಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ

ಮಾಧ್ಯಮಕ್ಕೆ ಮಾಹಿತಿ ಮಾರ್ಗಸೂಚಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನಿಖೆ ಹಂತದಲ್ಲಿರುವ ಪ್ರಕರಣಗಳ ಮಾಹಿತಿಯನ್ನು ಪೊಲೀಸರು ಮಾಧ್ಯಮಗಳಿಗೆ ನೀಡುವುದನ್ನು ತಡೆಯಲು ಸಮಗ್ರ ಮಾರ್ಗಸೂಚಿ ರೂಪಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

'ಮಾರ್ಗಸೂಚಿ ಉಲ್ಲಂಘಿಸುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡರೆ ಮಾತ್ರ ಉದ್ದೇಶ ಈಡೇರಲಿದೆ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು.

ವಕೀಲ ಎಚ್. ನಾಗಭೂಷಣ ರಾವ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಪೀಠ, 'ಕೆಲ ಪ್ರಕರಣಗಳಲ್ಲಿ ಎಲ್ಲವೂ ಆರೋಪಿ ವಿರುದ್ಧವೇ ಇದೆ ಎಂದು ಪೊಲೀಸ್ ಅಧಿಕಾರಿಗಳು ಪ್ರತಿಪಾದಿಸುವುದನ್ನು ನ್ಯಾಯಾಲಯ ಗಮನಿಸಿದೆ. ಆರೋಪಿಯ ತಪ್ಪೊಪ್ಪಿಗೆ ಹೇಳಿಕೆ ಬಗ್ಗೆಯೂ ಮಾಧ್ಯಮಗಳಿಗೆ ಮಾಹಿತಿ ನೀಡುತ್ತಾರೆ' ಎಂದು ಹೇಳಿತು.


ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಬೆಟ್ಟದಳ್ಳಿ ವ್ಯಾಪ್ತಿಯಲ್ಲಿರುವ ಮಲ್ಲಳ್ಳಿ ಜಲಪಾತವು ಮೈದುಂಬಿ ಭೋರ್ಗರೆಯುತ್ತಿದೆ

ಮುಂದುವರಿದ ಮಳೆ: ಹೊಳೆಗೆ ಜಾರಿ ಬಿದ್ದು ವ್ಯಕ್ತಿ ಸಾವು

ನದಿಯಲ್ಲಿ ನೀರಿನ ಹರಿವು ಹೆಚ್ಚಳ: ಸೇತುವೆ ಬಿರುಕು

ಪ್ರಜಾವಾಣಿ ವಾರ್ತೆ

ಮಂಗಳೂರು/ಹುಬ್ಬಳ್ಳಿ/ಶಿವಮೊಗ್ಗ: ರಾಜ್ಯದ ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಮಂಗಳವಾರವೂ ಧಾರಾಕಾರ ಮಳೆ ಸುರಿದಿದ್ದು, ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಉಡುಪಿ ಜಿಲ್ಲೆಯಲ್ಲಿ ಮಂಗಳವಾರ ಹೊಳೆಗೆ ಕಾಲು ಜಾರಿ ಬಿದ್ದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಮರವೂರು ಬಳಿ ಫಲ್ಗುಣಿ ನದಿಗೆ ನಿರ್ಮಿಸಿದ್ದ ಸೇತುವೆ ಬಿರುಕು ಬಿಟ್ಟಿದ್ದು, ಕುಸಿಯುವ ಭೀತಿ ಎದುರಾಗಿದೆ.

ಸೇತುವೆಯ ಒಂದು ಭಾಗದ ಪಿಲ್ಲರ್ ಕುಸಿದು ಸೇತುವೆಗೆ ಹಾನಿಯಾಗಿದ್ದು, ರಸ್ತೆ ಸಂಚಾರ ಸಂಪೂರ್ಣ ಸ್ಥಗಿತಗೊಳಿಸಲಾಗಿದೆ. ಈ ಸೇತುವೆಯ ಪಕ್ಕದಲ್ಲೇ ಹೊಸ ಸೇತುವೆ ನಿರ್ಮಾಣವಾಗುತ್ತಿದ್ದು, ಕಾಮಗಾರಿ ನಿರ್ವಹಿಸಲು ನೀರಿಗೆ ತಡೆಗೋಡೆ ಕಟ್ಟಲಾಗಿತ್ತು. ಇದರಿಂದ ನದಿಯ ನೀರು ಒಂದೇ ಭಾಗಕ್ಕೆ ಹರಿದು ಸೇತುವೆಗೆ ಅಪಾಯ ಎದುರಾಗಿದೆ.

'ಸೇತುವೆ ನಸುಕಿನ ಜಾವ 3 ಗಂಟೆಗೆ ಕುಸಿದಿದೆ. ಈ ಮಾರ್ಗದಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಲಾಗಿದೆ. ವಿಮಾನ ನಿಲ್ದಾಣಕ್ಕೆ ತೆರಳುವವರಿಗೆ ಪರ್ಯಾಯ ಮಾರ್ಗ ಸೂಚಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಉಡುಪಿ ಜಿಲ್ಲೆಯ ಶಿರೂರು ಗ್ರಾಮದ ಸಂಕದಗುಂಡಿ ಹೊಳೆಗೆ ಕಾಲು ಜಾರಿ ಬಿದ್ದು ಅಬ್ದುಲ್ ರಹೀಂ ಮೃತಪಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 10ಕ್ಕೂ ಹೆಚ್ಚು, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತೆಕ್ಕಟ್ಟೆ ಗ್ರಾಮದಲ್ಲಿ 12 ಮನೆಗಳಿಗೆ ಹಾನಿಯಾಗಿದೆ. ಮೂಡುತೋನ್ಸೆ, ಮುಂಡ್ಕೂರು, ಮಡಾಮಕ್ಕಿ, ನಾವುಂದ, ನಾಲ್ಕೂರು, ಯಡ್ತಾಡಿ, ಮಣೂರು ಗ್ರಾಮಗಳಲ್ಲಿ ಮನೆಗಳು ಕುಸಿದಿವೆ. ಗಾಳಿ ಮಳೆಗೆ ಬಾಳೆ ಹಾಗೂ ಅಡಿಕೆ ತೋಟಗಳಿಗೆ ಹಾನಿಯಾಗಿದೆ.

ಚಿಕ್ಕಮಗಳೂರಿನಲ್ಲಿ ಆರ್ಭಟ: ಚಿಕ್ಕಮಗಳೂರು ಜಿಲ್ಲೆಯ ಕಳಸ ಭಾಗದ ಸಂಸೆ ಸಮೀಪದ ಎಡಮುರ ಗ್ರಾಮದಲ್ಲಿ ಕೊಟ್ಟಿಗೆ ಹಿಂಬದಿಯ ದಿಬ್ಬದ ಮಣ್ಣು ಕುಸಿದು ಹಾನಿ ಸಂಭವಿಸಿದೆ.

10ನೇ ಪುಟ ನೋಡಿ

ಗರಿಷ್ಠ ಮಳೆ (ಸೆಂ.ಮೀ ಗಳಲ್ಲಿ)

ಸ್ಥಳ	ಮಳೆ
ಉಡುಪಿ ಜಿಲ್ಲೆ	
ಬಡಾನಿಡಿಯೂರು	18
ಚಿಕ್ಕಮಗಳೂರು ಜಿಲ್ಲೆ	
ಕೆರೆಕಟ್ಟೆ	11
ದಕ್ಷಿಣ ಕನ್ನಡ ಜಿಲ್ಲೆ	
ಮೂಡುಬಿದಿರೆ	10
ಉತ್ತರ ಕನ್ನಡ ಜಿಲ್ಲೆ	
ಅಂಕೋಲಾ, ಕುಮಟಾ	ತಲಾ 11.5
ಹೊನ್ನಾವರ	10.2
ಶಿವಮೊಗ್ಗ ಜಿಲ್ಲೆ	
ಹುಲಿಕಲ್	12.6
ಮಾಸ್ತಿಕಟ್ಟೆ	11.1
ಸಾವೆಹಕ್ಲು	9.6
ಚಕ್ರ	9.2
ಮಾಣಿ	9.1

ಅಪರಾಧಗಳಲ್ಲಿ ಯುವಜನಾಂಗದ ಮೇಲುಗೈ: ರೀನಾ ಸುವರ್ಣ


ರೀನಾ ಸುವರ್ಣ

ಬೆಂಗಳೂರು: 'ಅಪರಾಧ ತಡೆಗಟ್ಟುವಲ್ಲಿ ಯುವಕರ ಪಾತ್ರ ಮಹತ್ವದ್ದು. ಆದರೆ, ಬಹುತೇಕ ಅಪರಾಧಗಳಲ್ಲಿ ಯುವಕರ ಪಾತ್ರವೇ ಹೆಚ್ಚಾಗಿದ್ದು, ಯುವಕ ಮತ್ತು ಯುವತಿಯರೇ ಅಪರಾಧಗಳಲ್ಲಿ ಬಲಿಯಾಗುತ್ತಿರುವುದು ವಿಪರ್ಯಾಸ' ಎಂದು ಎಸಿಪಿ ರೀನಾ ಸುವರ್ಣ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ ಆನ್‌ಲೈನ್ ಮೂಲಕ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಅಪರಾಧಗಳನ್ನು ತಡೆಗಟ್ಟುವಲ್ಲಿ ಯುವಕರ ಪಾತ್ರ' ಕುರಿತು ಉಪನ್ಯಾಸ ನೀಡಿದರು.

'ಲಾಕ್‌ಡೌನ್ ಸಂದರ್ಭದಲ್ಲಿ ಕೌಟುಂಬಿಕ ದೌರ್ಜನ್ಯ ಹಾಗೂ ಚಿನ್ನಾಭರಣ ಕಳವು ಪ್ರಕರಣ ಹೆಚ್ಚಾಗಿವೆ. ತಮ್ಮ ಸನಿಹದಲ್ಲೇ ಅಪರಾಧಗಳು ನಡೆಯುತ್ತಿದ್ದರೂ ತಮಗೆ ಸಂಬಂಧ ಇಲ್ಲ ಎನ್ನುವಂತೆ ಜನ ಮಾನವೀಯತೆ ಮರೆತಿದ್ದಾರೆ' ಎಂದು ದೂರಿದರು.

ಕುಲಪತಿ ಕೆ.ಆರ್.ವೇಣುಗೋಪಾಲ್, 'ನಗರಗಳಲ್ಲಿ ಆಗುವಷ್ಟು ಗ್ರಾಮೀಣ ಪ್ರದೇಶದಲ್ಲಿ ಅಪರಾಧಗಳು ನಡೆಯುವುದಿಲ್ಲ. ಅಲ್ಲಿನ ಜನರಲ್ಲಿರುವ ಒಗ್ಗಟ್ಟೇ ಇದಕ್ಕೆ ಕಾರಣ' ಎಂದರು.

ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ, ಸಂಯೋಜನಾಧಿಕಾರಿ ಡಾ. ಎನ್. ಸತೀಶ್ ಗೌಡ ಭಾಗವಹಿಸಿದ್ದರು.

ಉದ್ಯಮಿಯನ್ನು ಬೆದರಿಸಿ ₹ 5 ಲಕ್ಷ ಲಂಚ ಪಡೆದಿರುವ ಆರೋಪ

ಎಎಸ್‌ಐ ಮನೆ ಮೇಲೆ ಎಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯೊಬ್ಬರನ್ನು ಬೆದರಿಸಿ ₹ 5 ಲಕ್ಷ ಲಂಚ ಪಡೆದಿರುವ ಆರೋಪ ಎದುರಿಸುತ್ತಿರುವ ಕೊಡಿಗೆಹಳ್ಳಿ ಠಾಣೆಯ ಎಎಸ್‌ಐ ದಯಾನಂದಸ್ವಾಮಿ ಅವರ ಮನೆಯ ಮೇಲೆ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ಮಂಗಳವಾರ ದಾಳಿಮಾಡಿ, ಶೋಧ ನಡೆಸಿದ್ದಾರೆ.

ಯಲಹಂಕ ಉಪನಗರ ನಿವಾಸಿ ಭರತ್ ಶೆಟ್ಟಿ ಎಂಬ ಉದ್ಯಮಿ ನೀಡಿದ್ದ ದೂರಿನ ಅನ್ವಯ ಎಎಸ್‌ಐ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಯಲಹಂಕ ಉಪ ನಗರದಲ್ಲಿರುವ ದಯಾನಂದ ಸ್ವಾಮಿ ಮನೆ ಮೇಲೆ ದಾಳಿ ಮಾಡಿದ ಎಸಿಬಿ ಅಧಿಕಾರಿಗಳು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ಭರತ್ ಶೆಟ್ಟಿ ವಿರುದ್ಧ ವಂಚನೆ ಹಾಗೂ ಹಲ್ಲೆ ಆರೋಪದಡಿ ಕೊಡಿಗೆಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಉದ್ಯಮಿಯ ವಿರುದ್ಧದ ಆರೋಪ ಸುಳ್ಳು ಎಂಬುದು ತನಿಖೆ ವೇಳೆ ದೃಢಪಟ್ಟಿತ್ತು. ನ್ಯಾಯಾಲಯಕ್ಕೆ 'ಬಿ' ವರದಿ ಸಲ್ಲಿಸಲು ಎಎಸ್‌ಐ ₹ 10 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ₹ 5 ಲಕ್ಷವನ್ನು ಮುಂಗಡವಾಗಿ ಪಡೆದಿದ್ದರು ಎಂದು ಉದ್ಯಮಿ ಎಸಿಬಿಗೆ ದೂರು ನೀಡಿದ್ದಾರೆ.

ಈ ಮೊದಲು ಉದ್ಯಮಿ ಠಾಣೆಯ ಇನ್‌ಸ್ಪೆಕ್ಟರ್ ಹಾಗೂ ಈಶಾನ್ಯ ವಲಯದ ಡಿಸಿಪಿ ಸಿ.ಕೆ. ಬಾಬಾ ಅವರಿಗೆ ದೂರು ನೀಡಿದ್ದರು. ಡಿಸಿಪಿ ನಡೆಸಿದ ಆಂತರಿಕ ತನಿಖೆಯಲ್ಲಿ, ಎಎಸ್‌ಐ ವಿರುದ್ಧದ ಆರೋಪದಲ್ಲಿ ಸತ್ಯಾಂಶವಿದೆ ಎಂಬುದು ಕಂಡುಬಂದಿತ್ತು.

'ಆರೋಪಿ ಎಎಸ್‌ಐ ತಲೆಮರೆಸಿಕೊಂಡಿದ್ದಾರೆ. ಅವರ ಮನೆಯಲ್ಲಿ ಶೋಧ ನಡೆಸಿ, ಕೆಲವು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಅಮಾನತು ಆದೇಶ

ಪ್ರಕರಣವೊಂದರಲ್ಲಿ ನಿರಪರಾಧಿ ಎಂದು ನ್ಯಾಯಾಲಯಕ್ಕೆ ತನಿಖಾ ವರದಿ ಸಲ್ಲಿಸಲು ಆರೋಪಿಯಿಂದ ₹ 5 ಲಕ್ಷ ಲಂಚ ಪಡೆದ ಆರೋಪದಡಿ ಕೊಡಿಗೇಹಳ್ಳಿ ಎಎಸ್‌ಐ ದಯಾನಂದಸ್ವಾಮಿ ಅವರನ್ನು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅಮಾನತು ಮಾಡಿದ್ದಾರೆ.

ಎಎಸ್‌ಐ ಮೇಲಿನ ಆರೋಪದ ಬಗ್ಗೆ ತನಿಖೆ ನಡೆಸುವಂತೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಶಿಫಾರಸು ಮಾಡಿ ಕಮಿಷನರ್ ಆದೇಶ ಸಹ ಹೊರಡಿಸಿದ್ದಾರೆ.

'ಪ್ರಕರಣ ಗಮನಕ್ಕೆ ಬರುತ್ತಿದ್ದಂತೆ ಈಶಾನ್ಯ ವಿಭಾಗದ ಡಿಸಿಪಿ ಸಿ.ಕೆ.ಬಾಬಾ, ಆಂತರಿಕ ತನಿಖೆ ನಡೆಸಿದ್ದರು. ಎಎಸ್‌ಐ ಲಂಚ ಪಡೆದಿದ್ದು ಸಾಬೀತಾಗಿತ್ತು. ಎಎಸ್‌ಐ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಮಿಷನರ್ ಅವರಿಗೆ ತನಿಖಾ ವರದಿ ಸಲ್ಲಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ನಿಯಮ ಉಲ್ಲಂಘನೆ: ₹ 4.54 ಕೋಟಿ ದಂಡ ಸಂಗ್ರಹ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗೆ ಜಾರಿಗೊಳಿಸಿರುವ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ 1.86 ಲಕ್ಷ ಮಂದಿಯಿಂದ ₹ 4.54 ಕೋಟಿ ದಂಡ ಸಂಗ್ರಹಿಸಲಾಗಿದೆ.

ನಗರದ ಪೊಲೀಸರು ಪ್ರತಿಯೊಂದು ವಿಭಾಗ ವ್ಯಾಪ್ತಿಯಲ್ಲೂ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಮಾಸ್ಕ್ ಹಾಕದ ಹಾಗೂ ಅಂತರ ಕಾಯ್ದುಕೊಳ್ಳದವರನ್ನು ಪತ್ತೆ ಮಾಡಿ ಕ್ರಮ ಕೈಗೊಳ್ಳುತ್ತಿದ್ದಾರೆ.

'ಮಾಸ್ಕ್ ಧರಿಸದ 1.52 ಲಕ್ಷ ಹಾಗೂ ಅಂತರ ಕಾಯ್ದುಕೊಳ್ಳದ 34 ಸಾವಿರ ಮಂದಿಗೆ ದಂಡ ವಿಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

48,615 ವಾಹನ ಜಪ್ತಿ: ಲಾಕ್‌ಡೌನ್ ವೇಳೆಯಲ್ಲಿ ಅನಗತ್ಯವಾಗಿ ಸಂಚರಿಸಿದ್ದವರ 46,448 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

'43,206 ದ್ವಿಚಕ್ರ ವಾಹನ, 2,326 ಮೂರು ಚಕ್ರ ವಾಹನ ಹಾಗೂ 3.083 ನಾಲ್ಕು ಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಅಧಿಕಾರಿ ತಿಳಿಸಿದರು.

'ಜಪ್ತಿ ಮಾಡಲಾದ ವಾಹನಗಳನ್ನು ಆಯಾ ಠಾಣೆ ವ್ಯಾಪ್ತಿಯಲ್ಲಿ ನಿಲ್ಲಿಸಲಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ವಾಹನಗಳ ಬಿಡುಗಡೆ ಪ್ರಕ್ರಿಯೆ ನಡೆಯಲಿದೆ' ಎಂದೂ ಹೇಳಿದರು.

ಹಗಲು ವ್ಯಾಪಾರ, ರಾತ್ರಿ ವಾಹನ ಕಳವು




ಬೆಂಗಳೂರು: ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪದಡಿ ಮನೋಜ್ (22) ಎಂಬಾತನನ್ನು ಚಾಮರಾಜಪೇಟೆ ಪೊಲೀಸರು ಬಂಧಿಸಿದ್ದಾರೆ.

'ಆಜಾದ್ ನಗರದ ನಿವಾಸಿ ಮನೋಜ್, ಹಗಲಿನಲ್ಲಿ ತಳ್ಳುಗಾಡಿಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದ. ರಾತ್ರಿ ವೇಳೆ ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದ. ಈತನಿಂದ ₹ 3.40 ಲಕ್ಷ ಮೌಲ್ಯದ 7 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರ ದ್ವಿಚಕ್ರ ವಾಹನವನ್ನು ಮೇ 20ರಂದು ರಾತ್ರಿ ಆರೋಪಿ ಕಳವು ಮಾಡಿದ್ದ. ಈ ಬಗ್ಗೆ ದೂರು ದಾಖಲಾಗಿತ್ತು. ಘಟನಾ ಸ್ಥಳದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು.' 'ವಿದ್ಯಾರಣ್ಯಪುರ, ಗಿರಿನಗರ, ತಿಲಕ್‌ನಗರ, ಜೆ.ಜೆ.ನಗರ ಹಾಗೂ ಬನಶಂಕರಿ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿದ್ದಾನೆ' ಎಂದೂ ತಿಳಿಸಿದರು.

ಹಜ್ ಯಾತ್ರೆ: ಈ ವರ್ಷದ ಎಲ್ಲ ಅರ್ಜಿಗಳು ರದ್ದು



ನವದೆಹಲಿ (ಪಿಟಿಐ): ಪ್ರಸಕ್ತ ಸಾಲಿನ ಹಜ್ ಯಾತ್ರೆಗಾಗಿ ಸಲ್ಲಿಕೆಯಾಗಿದ್ದ ಎಲ್ಲ ಅರ್ಜಿಗಳನ್ನು ರದ್ದುಗೊಳಿಸಲಾಗಿದೆ ಎಂದು ಭಾರತೀಯ ಹಜ್ ಸಮಿತಿ ಮಂಗಳವಾರ ತಿಳಿಸಿದೆ.

ಕೋವಿಡ್–19 ಪಿಡುಗಿನ ಹಿನ್ನೆಲೆಯಲ್ಲಿ ಇತರ ದೇಶಗಳ ಪ್ರಜೆಗಳಿಗೆ ಹಜ್ ಯಾತ್ರೆ ಕೈಗೊಳ್ಳಲು ಅನುಮತಿ ನೀಡುವುದಿಲ್ಲ ಎಂದು ಸೌದಿ ಅರೇಬಿಯಾ ತಿಳಿಸಿದೆ. ಹೀಗಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಮಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಕ್ಸೂದ್ ಅಹ್ಮದ್ ಖಾನ್ ತಿಳಿಸಿದ್ದಾರೆ.

'ಹಜ್ ಯಾತ್ರೆಗಾಗಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಆದರೆ, ತನ್ನ ಪ್ರಜೆಗಳನ್ನು ಹೊರತುಪಡಿಸಿ ಇತರ ದೇಶಗಳ ಜನರಿಗೆ ಯಾತ್ರೆ ಕೈಗೊಳ್ಳಲು ಅನುಮತಿ ನೀಡುವುದಿಲ್ಲ ಎಂದು ಸೌದಿ ಅರೇಬಿಯಾ ಹೇಳಿದೆ. ಕೋವಿಡ್ ಪಿಡುಗಿನ ಈ ಸಂದರ್ಭದಲ್ಲಿ ಇದು ಒಳ್ಳೆಯ ನಿರ್ಧಾರ' ಎಂದು ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ಮುಖ್ತಾರ್ ಅಬ್ಬಾಸ್ ನಖ್ವಿ ಪ್ರತಿಕ್ರಿಯಿಸಿದ್ದಾರೆ.

ಬ್ರಾಹ್ಮಣ್ಯದ ಅವಹೇಳನ: ನಟ ಚೇತನ್‌ಗೆ ಪೊಲೀಸರ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಾಹ್ಮಣ್ಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ' ಎನ್ನಲಾದ ಆರೋಪದಡಿ ದಾಖಲಾಗಿರುವ ಪ್ರಕರಣದಲ್ಲಿ ನಟ ಚೇತನ್ ಅವರಿಗೆ ಬಸವನಗುಡಿ ಠಾಣೆ ಪೊಲೀಸರು ನೋಟಿಸ್ ನೀಡಿದ್ದಾರೆ.

'ವಿಪ್ರ ಯುವ ವೇದಿಕೆ ಅಧ್ಯಕ್ಷ ಪವನ್ ಕುಮಾರ್ ಶರ್ಮಾ ಎಂಬುವರು ಈ ಸಂಬಂಧ ದೂರು ನೀಡಿದ್ದಾರೆ. ಧಾರ್ಮಿಕ ಭಾವನೆ ಕೆರಳಿಸುವುದು (ಐಪಿಸಿ 129(ಎ) ಹಾಗೂ ದ್ವೇಷ ಭಾವನೆ ಹೆಚ್ಚಿಸುವ (ಐಪಿಸಿ 153 (ಬಿ) ಆರೋಪದಡಿ ಎಫ್‌ಐಆರ್ ದಾಖಲಾಗಿದೆ' ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

'ಪ್ರಕರಣಕ್ಕೆ ಸಂಬಂಧಪಟ್ಟ ವಿಡಿಯೊಗಳನ್ನು ಯೂಟ್ಯೂಬ್ ಹಾಗೂ ಫೇಸ್‌ಬುಕ್ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಲಾಗಿದೆ. ಈ ವಿಡಿಯೊಗಳನ್ನು ಯಾವ ಐ.ಡಿ.ಗಳಿಂದ ಅಪ್‌ಲೋಡ್ ಮಾಡಲಾಗಿದೆ. ಈ ಬಗ್ಗೆ ಮಾಹಿತಿ ನೀಡಿ ತನಿಖೆಗೆ ಸಹಕರಿಸಬೇಕು' ಎಂದೂ ನೋಟಿಸ್‌ನಲ್ಲಿ ಪೊಲೀಸರು ತಿಳಿಸಿದ್ದಾರೆ.

ನೋಟಿಸ್ ಪ್ರತಿಯನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ನಟ ಚೇತನ್, 'ಬ್ರಾಹ್ಮಣ್ಯದ ವಿರುದ್ಧ ನನ್ನ ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ ಪೋಸ್ಟ್‌ಗಳ ಬಗ್ಗೆ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ನೀಡಿದ್ದಾರೆ. ಬುಧವಾರ ಬೆಳಿಗ್ಗೆ ಬಸವನಗುಡಿ ಠಾಣೆಗೆ ಹೋಗುತ್ತಿದ್ದೇನೆ' ಎಂದಿದ್ದಾರೆ.

ನೇಪಾಳ: ರೌಡಿ ಕರಿಯ ಸೆರೆ


ಕರಿಯಾ

ಬೆಂಗಳೂರು: ಕುಖ್ಯಾತ ರೌಡಿ ಸೈಕಲ್ ರವಿ, ಆತನ ಸಹಚರ ಬೇಕರಿ ರಘು ಹಾಗೂ ಸಿನಿಮಾ ನಿರ್ಮಾಪಕ ಉಮಾಪತಿ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ ಆರೋಪದಡಿ ರೌಡಿ ಕರಿಯ ಅಲಿಯಾಸ್ ರಾಜೇಶ್‌ನನ್ನು ಜಯನಗರ ಪೊಲೀಸರು ನೇಪಾಳದಲ್ಲಿ ಬಂಧಿಸಿದ್ದಾರೆ.

'ಮಾರಕಾಸ್ತ್ರಗಳ ಸಮೇತ ಕೊಲೆ ಮಾಡಲು ಸಜ್ಜಾಗಿದ್ದ ರೌಡಿ ಬಾಂಬೆ ರವಿ ಗ್ಯಾಂಗ್ ಮೇಲೆ 2020ರ ಡಿಸೆಂಬರ್ 20ರಂದು ನ್ಯಾಷನಲ್ ಕಾಲೇಜು ಬಳಿ ದಾಳಿ ಮಾಡಲಾಗಿತ್ತು. ಕೆಲ ಆರೋಪಿಗಳು ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಪ್ರಕರಣದಲ್ಲಿ ಭಾಗಿಯಾಗಿದ್ದ ಬಾಂಬೆ ರವಿಯ ಸಹಚರ ಕರಿಯ, ನೇಪಾಳಕ್ಕೆ ಹೋಗಿ ತಲೆಮರೆಸಿಕೊಂಡಿದ್ದ. ಈ ಬಗ್ಗೆ ಮಾಹಿತಿ ಪಡೆದ ವಿಶೇಷ ತಂಡವು ನೇಪಾಳಕ್ಕೆ ಹೋಗಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದೆ.'

'ಕೆ.ಜಿ.ನಗರ ನಿವಾಸಿಯಾಗಿದ್ದ ಕರಿಯ ವಿರುದ್ಧ ಕೊಲೆ, ಕೊಲೆ ಯತ್ನ, ಸುಲಿಗೆ, ಜೀವ ಬೆದರಿಕೆ, ಅಕ್ರಮ ಶಸ್ತ್ರಾಸ್ತ್ರ ಸೇರಿ ಹಲವು ಪ್ರಕರಣಗಳು ದಾಖಲಾಗಿದ್ದವು. ಕೆ.ಜಿ. ನಗರ ಪೊಲೀಸ್ ಠಾಣೆಯ ರೌಡಿ ಪಟ್ಟಿಯಲ್ಲಿ ಆತನ ಹೆಸರಿತ್ತು' ಎಂದೂ ಪೊಲೀಸರು ತಿಳಿಸಿದರು.

ಜಿಂಕೆ ರಕ್ಷಣೆ

ನೆಲಮಂಗಲ: ಬೆಳಿಗ್ಗೆ ವಾಯು ವಿಹಾರಕ್ಕೆ ತೆರಳಿದ್ದ ಭರತೇಶ್ ಸುಮುಖ ಅವರು ಕೂಲಿಪುರದಲ್ಲಿ ಜಿಂಕೆ ಯೊಂದನ್ನು ನಾಯಿಗಳ ದಾಳಿಯಿಂದ ರಕ್ಷಿಸಿ ಅರಣ್ಯಾಧಿಕಾರಿಗಳಿಗೆ ಹಸ್ತಾಂತರಿಸಿದ್ದಾರೆ. ನಾಯಿಗಳ ದಾಳಿಗೆ ತುತ್ತಾಗಿದ್ದ ಜಿಂಕೆಯನ್ನು ಗಮನಿಸಿದ ಭರತೇಶ್ ಅವರು ಸ್ಥಳೀಯ ಅಯ್ಯಪ್ಪ ಅವರ ಸಹಕಾರದಿಂದ ರಕ್ಷಿಸಿ ಅರಣ್ಯಾಧಿಕಾರಿ ಲಷ್ಕರ್ ನಾಯಕ್, ಉಪವಲಯ ಅರಣ್ಯಾಧಿಕಾರಿ ವಿ.ಶಿವಕುಮಾರ್, ಅರಣ್ಯ ರಕ್ಷಕ ಹರೀಶ್ ಅವರಿಗೆ ಹಸ್ತಾಂತರಿಸಿದರು.

ಬ್ಲ್ಯಾಕ್‌ಮೇಲ್: ವಿಚಾರಣೆಗೆ ಹಾಜರು

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಷಡ್ಯಂತ್ರ ರೂಪಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದ ಪ್ರಕರಣದ ಆರೋಪಿ ಶ್ರವಣ್, ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳ ಎದುರು ವಿಚಾರಣೆಗಾಗಿ ಮಂಗಳವಾರ ಹಾಜರಾದರು.

ಇನ್ನೊಬ್ಬ ಆರೋಪಿ ನರೇಶ್ ಗೌಡನನ್ನು ಸೋಮವಾರವಷ್ಟೇ ಅಧಿಕಾರಿಗಳು ವಿಚಾರಣೆ ನಡೆಸಿದ್ದರು. ಅದರ ಬೆನ್ನಲ್ಲೇ ಶ್ರವಣ್‌ನನ್ನು ಮಂಗಳವಾರ ಮಧ್ಯಾಹ್ನದಿಂದ ಸಂಜೆಯವರೆಗೂ ವಿಚಾರಣೆ ನಡೆಸಿ ವಾಪಸು ಕಳುಹಿಸಿದರು.

'ಪ್ರಕರಣ ಸಂಬಂಧ ಇಬ್ಬರ ಹೇಳಿಕೆ ಪಡೆದು ಪರಿಶೀಲಿಸಲಾಗುತ್ತಿದೆ. ಅಗತ್ಯವಿದ್ದರೆ ಪುನಃ ಅವರನ್ನು ವಿಚಾರಣೆಗೆ ಕರೆಸಲಾಗುವುದು' ಎಂದು ಎಸ್‌ಐಟಿ ಮೂಲಗಳು ಹೇಳಿವೆ. ಬ್ಲ್ಯಾಕ್‌ಮೇಲ್ ಸಂಬಂಧ ರಮೇಶ ಜಾರಕಿಹೊಳಿ ಅವರು ಸದಾಶಿವನಗರ ಠಾಣೆಗೆ ದೂರು ನೀಡಿದ್ದರು.

ಆರ್‌ಜಿಯುಎಚ್‌ಎಸ್: ಹಂಗಾಮಿ ಕುಲಪತಿಯಾಗಿ ಡಾ. ಜಯಕರ ನೇಮಕ

ಅಶ್ವತ್ಥನಾರಾಯಣ – ಸುಧಾಕರ್ ನಡುವೆ ಮುಸುಕಿನ ಗುದ್ದಾಟ

ಪ್ರಜಾವಾಣಿ ವಾರ್ತೆ



ಸುಧಾಕರ್



ಅಶ್ವತ್ಥನಾರಾಯಣ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ (ಆರ್‌ಜಿಯುಎಚ್‌ಎಸ್) ಹಂಗಾಮಿ ಕುಲಪತಿಯಾಗಿ ಡಾ.ಎಸ್.ಎಂ. ಜಯಕರ ಅವರನ್ನು ನೇಮಿಸಿದ ವಿಚಾರ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ನಡುವೆ ಮುಸುಕಿನ ಗುದ್ದಾಟಕ್ಕೆ ಕಾರಣವಾಗಿದೆ.

ಜಯಕರ ಅವರ ನೇಮಕಾತಿಯ ಹಿಂದೆ ಅಶ್ವತ್ಥನಾರಾಯಣ ಇದ್ದಾರೆಂದು ಸುಧಾಕರ್ ಅಸಮಾಧಾನಗೊಂಡಿದ್ದಾರೆ ಎನ್ನಲಾಗಿದೆ. ಹಾಲಿ ಕುಲಪತಿ ಎಸ್. ಸಚ್ಚಿದಾನಂದ ಅವರು ಸೋಮವಾರ (ಜೂನ್ 14) ನಿವೃತ್ತಿಯಾಗಿದ್ದು, ಹಂಗಾಮಿ ಕುಲಪತಿಯಾಗಿ ಜಯಕರ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

'ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯಕ್ಕೆ ಹಂಗಾಮಿ ಕುಲಪತಿ ನೇಮಕ ನನ್ನ ಗಮನಕ್ಕೇ ಬಂದಿಲ್ಲ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ನೇಮಕಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರ ಜೊತೆ ಚರ್ಚಿಸಬೇಕಾಗಿತ್ತು. ಆದರೆ ಕೋವಿಡ್‌ನಿಂದಾಗಿ ಸಾಧ್ಯವಾಗಿಲ್ಲ. ಮುಖ್ಯಮಂತ್ರಿ ಜೊತೆ ಈ ಬಗ್ಗೆ ಚರ್ಚಿಸಿದ್ದು, ಕೆಲವು ವಿಷಯಗಳನ್ನು ಹೇಳಿದ್ದಾರೆ. ಆ ವಿಷಯಗಳನ್ನು ರಾಜ್ಯಪಾಲರ ಗಮನಕ್ಕೆ ತರುತ್ತೇನೆ' ಎಂದು ಸುಧಾಕರ್ ಸೋಮವಾರ ಹೇಳಿದ್ದರು.

'ಕುಲಪತಿ ಸ್ಥಾನಕ್ಕೆ ಯಾವ ರೀತಿಯ ಸಂಸ್ಕಾರ, ಯಾವ ರೀತಿಯ ಶೈಕ್ಷಣಿಕ ಅರ್ಹತೆ ಇರುವ ಉತ್ತಮರನ್ನು ತರಬೇಕೆಂಬ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಸ್ಪಷ್ಟತೆ ಇದೆ. ಆ ಬಗ್ಗೆ ರಾಜ್ಯಪಾಲರ ಗಮನಕ್ಕೆ ತರಲಾಗುವುದು. ಅನುಮಾನಕ್ಕೂ ಅವಕಾಶವಿಲ್ಲದ ಶುದ್ಧ ಚಾರಿತ್ರ್ಯವಿರುವ ವ್ಯಕ್ತಿ ಮಾತ್ರ ಕುಲಪತಿಯಾಗಲು ಯೋಗ್ಯವೇ ಹೊರತು ಯಾವುದೇ ಅಪವಾದ ಹೊತ್ತುಕೊಂಡವರು ಕುಲಪತಿ ಕುರ್ಚಿಯಲ್ಲಿ ಕೂರಲು ಸಾಧ್ಯವಿಲ್ಲ' ಎಂದೂ ಹೇಳಿದ್ದರು.

ಈ ಬಗ್ಗೆ ಮಂಗಳವಾರ ಪ್ರತಿಕ್ರಿಯಿಸಿದ ಅಶ್ವತ್ಥನಾರಾಯಣ, 'ಹಂಗಾಮಿ ಕುಲಪತಿ ನೇಮಕ ಪಾರದರ್ಶಕ, ಕಾನೂನು ಪ್ರಕಾರವೇ ಆಗಿದೆ. ರಾಜ್ಯಪಾಲರು ಈ ನೇಮಕ ಮಾಡಿದ್ದಾರೆ. ಇದರಲ್ಲಿ ನನ್ನ ಯಾವುದೇ ಪಾತ್ರ ಇಲ್ಲ. ಕಾನೂನು ವ್ಯಾಪ್ತಿ ಮೀರಿ ನೇಮಕ ಮಾಡಲು ಆಗುವುದಿಲ್ಲ, ನೇಮಕದ ಹಿಂದೆ ನನ್ನ ಪ್ರಭಾವ ಇದೆ ಎನ್ನುವುದು ಸುಳ್ಳು. ಎಲ್ಲ ಊಹಾಪೋಹ' ಎಂದರು.



ಕಬ್ಬನ್ ಉದ್ಯಾನದಲ್ಲಿ ಕುಸಿದು ಬಿದ್ದಿರುವ ಆಶ್ರಯ ಮಂಟಪ

ಕಬ್ಬನ್: ಕುಸಿದು ಬಿದ್ದ ಆಶ್ರಯ ಮಂಟಪ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ಆಶ್ರಯ ಪಡೆಯಲು ನಿರ್ಮಿಸಲಾಗಿದ್ದ ಕಿರು ಮಂಟಪ ಇತ್ತೀಚೆಗೆ ಕುಸಿದು ಬಿದ್ದಿದೆ. ಕಳಪೆ ಕಾಮಗಾರಿಯಿಂದ ಈ ಘಟನೆ ಸಂಭವಿಸಿದೆ ಎಂದು ಕಬ್ಬನ್‌ಪಾರ್ಕ್ ನಡಿಗೆದಾರರ ಸಂಘ ಆರೋಪಿಸಿದೆ.

ಉದ್ಯಾನಕ್ಕೆ ಬರುವವರು ಕುಳಿತುಕೊಳ್ಳಲು ಹಾಗೂ ಮಳೆಗಾಲದಲ್ಲಿ ಆಶ್ರಯ ಪಡೆಯಲು ಅನುಕೂಲವಾಗುವಂತೆ ತೋಟಗಾರಿಕೆ ಇಲಾಖೆ ವತಿಯಿಂದ 2015ರಲ್ಲಿ ₹10 ಲಕ್ಷ ವೆಚ್ಚದಲ್ಲಿ ಈ ಮಂಟಪಗಳನ್ನು ನಿರ್ಮಿಸಲಾಗಿತ್ತು.

'ಮಳೆ ಬಂದಾಗ ಆಶ್ರಯ ಪಡೆದುಕೊಳ್ಳಲು ಮಂಟಪ ನೆರವಾಗುತ್ತಿತ್ತು. ಇತ್ತೀಚೆಗೆ ಒಂದು ಮಂಟಪ ಕುಸಿದು ಬಿದ್ದಿದೆ. ಜನರಿಲ್ಲದ ವೇಳೆ ಕುಸಿದಿರುವುದರಿಂದ ಯಾವುದೇ ಅಪಾಯ ಸಂಭವಿಸಿಲ್ಲ. ಲಕ್ಷಗಟ್ಟಲೆ ಖರ್ಚು ಮಾಡಿ ನಿರ್ಮಿಸಿರುವ ಮಂಟಪ ಕುಸಿಯುತ್ತದೆ ಎಂದರೆ ಕಳಪೆ ಕಾಮಗಾರಿ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಈ ಬಗ್ಗೆ ತನಿಖೆ ನಡೆಯಬೇಕು' ಎಂದು ಕಬ್ಬನ್‌ಪಾರ್ಕ್ ನಡಿಗೆದಾರರ ಸಂಘದ ಅಧ್ಯಕ್ಷ ಎಸ್. ಉಮೇಶ್ ಆಗ್ರಹಿಸಿದರು.

ಈ ಸಂಬಂಧ ಹೆಚ್ಚಿನ ಮಾಹಿತಿ ಪಡೆಯಲು ಉದ್ಯಾನದ ತೋಟಗಾರಿಕೆ ಇಲಾಖೆಯ ಅಧಿಕಾರಿ ಸಂಪರ್ಕಕ್ಕೆ ಸಿಗಲಿಲ್ಲ.

ಸಿದ್ದಲಿಂಗಯ್ಯ ಸ್ಮಾರಕ ನಿರ್ಮಿಸಲು ಆಗ್ರಹ

ಬೆಂಗಳೂರು: 'ಕವಿ ಡಾ.ಸಿದ್ದಲಿಂಗಯ್ಯ ಹೆಸರಿನಲ್ಲಿ ಸ್ಮಾರಕ ನಿರ್ಮಿಸಬೇಕು' ಎಂದು ದಲಿತ ಸಂಘಟನೆಗಳ ಒಕ್ಕೂಟವು ಸರ್ಕಾರಕ್ಕೆ ಆಗ್ರಹಿಸಿದೆ.

'ಸಿದ್ದಲಿಂಗಯ್ಯ ಅವರ ಹುಟ್ಟೂರು ಮಂಚನಬೆಲೆಯಲ್ಲಿ ಕನಿಷ್ಠ ಎರಡು ಎಕರೆ ಪ್ರದೇಶದಲ್ಲಿ ಅವರ ಬೃಹತ್ ಸ್ಮಾರಕ ನಿರ್ಮಾಣ ಮಾಡಬೇಕು. ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ 'ಸಿದ್ದಲಿಂಗಯ್ಯ ಅಧ್ಯಯನ ಪೀಠ' ಸ್ಥಾಪಿಸಬೇಕು' ಎಂದು ಒಕ್ಕೂಟದ ಅಧ್ಯಕ್ಷ ಎಂ.ವೆಂಕಟಸ್ವಾಮಿ ಒತ್ತಾಯಿಸಿದ್ದಾರೆ.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಿದ್ದಲಿಂಗಯ್ಯ ಅವರ ಬರಹ ಹಾಗೂ ಭಾಷಣಗಳನ್ನು ಒಳಗೊಂಡ ಸಮಗ್ರ ಸಂಪುಟದ ಪುಸ್ತಕ ಪ್ರಕಟಿಸಬೇಕು. ಬೆಂಗಳೂರಿನ ಪ್ರಮುಖ ರಸ್ತೆಯೊಂದಕ್ಕೆ ಹಾಗೂ ಶ್ರೀರಾಮಪುರದ ಆರ್.ಜಿ.ಕಾಲೊನಿ ವೃತ್ತಕ್ಕೆ ಸಿದ್ದಲಿಂಗಯ್ಯ ಹೆಸರಿಡುವಂತೆ ಪಾಲಿಕೆಗೆ ಸೂಚಿಸಬೇಕು'.

'ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವಿಸಬೇಕು ಹಾಗೂ 'ಪದ್ಮಶ್ರೀ' ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು' ಎಂದೂ ಆಗ್ರಹಿಸಿದ್ದಾರೆ.

ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಯಲಹಂಕ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಮುಖಂಡ ಎಂ.ಎನ್.ಗೋಪಾಲಕೃಷ್ಣ ನೇತೃತ್ವದಲ್ಲಿ ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಆವಲಹಳ್ಳಿ ಪೆಟ್ರೋಲ್ ಬಂಕ್ ಬಳಿ ಪ್ರತಿಭಟನೆ ನಡೆಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಕಾರರು, ಕೂಡಲೇ ಬೆಲೆ ಇಳಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಗೋಪಾಲಕೃಷ್ಣ, 'ಕೇಂದ್ರಸರ್ಕಾರ ನಿರಂತರವಾಗಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಸುತ್ತಿರುವ ಪರಿಣಾಮ ಅಗತ್ಯವಸ್ತುಗಳ ದರ ಏರಿಕೆಯಾಗಿ ಬಡಜನರು ಹಾಗೂ ರೈತರ ಜೀವನ ದುಸ್ತರವಾಗಿದೆ. ಆದರೆ, ಕೇಂದ್ರದ ನಾಯಕರು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರಏರಿಕೆಯ ಕಾರಣದಿಂದ ತೈಲದರ ಏರಿಕೆಯಾಗಿದೆ ಎಂದು ಸುಳ್ಳುಹೇಳುವ ಮೂಲಕ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ' ಎಂದು ದೂರಿದರು.

ಬ್ಯಾಟ್ ಬೀಸುವ ಮೂಲಕ 'ಮೋದಿ ಹಂಡ್ರೆಡ್ ನಾಟ್ ಔಟ್' ಎಂದು ವ್ಯಂಗ್ಯಮಾಡಿದ ಕಾರ್ಯಕರ್ತರು, ಕೆಲವು ಗ್ರಾಹಕರ ವಾಹನಗಳಿಗೆ ಪೆಟ್ರೋಲ್ ಹಾಕಿಸಿಕೊಳ್ಳಲು ₹100ರ ನೋಟನ್ನು ನೀಡುವ ಮೂಲಕ ಬೆಲೆ ಏರಿಕೆಯನ್ನು ಖಂಡಿಸಿದರು. ಉಳಿದಂತೆ ಯಲಹಂಕ ಹಳೇನಗರ, ರಾಜಾನುಕುಂಟೆ, ದಾಸನಪುರ ಮತ್ತಿತರ ಪೆಟ್ರೋಲ್ ಬಂಕ್‌ಗಳ ಬಳಿ ಪ್ರತಿಭಟನೆ ನಡೆಸಿದರು.

ಜಿಲ್ಲಾ ಪಂಚಾಯಿತಿ ಸದಸ್ಯೆ ಲಾವಣ್ಯ ನರಸಿಂಹಮೂರ್ತಿ, ಪಾಲಿಕೆ ಮಾಜಿಸದಸ್ಯೆ ಪದ್ಮಾವತಿ ಅಮರನಾಥ್, ಕಾಂಗ್ರೆಸ್ ಮುಖಂಡರಾದ ವೈ.ಆರ್. ಶ್ರೀಧರ್, ಎಸ್.ಬಿ. ಬಾಷಾ, ರಾಜಕುಮಾರ್, ಎನ್.ಎಂ.ಶ್ರೀನಿವಾಸ್, ಎಸ್.ಸುರೇಶ್ ಮೃತ್ಯುಂಜಯ, ರಮೇಶ್, ಎನ್.ತಿಮ್ಮರಾಜು ಇದ್ದರು.



ಯಲಹಂಕ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು, ತೈಲ ದರ ಏರಿಕೆ ಖಂಡಿಸಿ, ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಆವಲಹಳ್ಳಿ ಪೆಟ್ರೋಲ್ ಬಂಕ್ ಬಳಿ ಪ್ರತಿಭಟನೆ ನಡೆಸಿದರು

ಸಿಲಿಂಡರ್ ಹೊತ್ತು ಪ್ರತಿಭಟನೆ

ಹೆಸರಘಟ್ಟ: ಅಡುಗೆ ಅನಿಲ ದರ ಏರಿಕೆ ವಿರೋಧಿಸಿ ರಾಜಾನುಕುಂಟೆ ಕಾಂಗ್ರೆಸ್ ಮುಖಂಡರು ಗ್ಯಾಸ್ ಸಿಲಿಂಡರ್‌ಗಳನ್ನು ತಲೆಯ ಮೇಲೆ ಹೊತ್ತು ಮಂಗಳವಾರ ಪ್ರತಿಭಟನೆ ನಡೆಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚೊಕ್ಕನಹಳ್ಳಿ ವೆಂಕಟೇಶ್,'ಕೋವಿಡ್‌ನಿಂದ ಜನ ಉದ್ಯೋಗವಿಲ್ಲದೆ ಪರದಾಡುತ್ತಾರೆ. ಈ ವೇಳೆ ಬೆಲೆ ಏರಿಕೆ ಮಾಡಿ ಕೇಂದ್ರ ಸರ್ಕಾರ ಜನರ ನೆಮ್ಮದಿಯನ್ನು ಕಸಿಯುತ್ತಿದೆ' ಎಂದು ದೂರಿದರು.

ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯೆ ಲಾವಣ್ಯ ಮಾತನಾಡಿದರು.



ರಾಜಾನುಕುಂಟೆಯಲ್ಲಿ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದರು. ಮುಖಂಡರಾದ ಚೊಕ್ಕನಹಳ್ಳಿ ವೆಂಕಟೇಶ್, ಲಾವಣ್ಯ, ಗ್ರಾಮ ಪಂಚಾಯಿತಿ ಸದಸ್ಯ ನರಸಿಂಹಮೂರ್ತಿ, ಹೆಸರಘಟ್ಟ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾರಾಯಣಪ್ಪ ಇದ್ದರು

ವಾಸವಿ ಪೀಠ: ಜೂ.20ಕ್ಕೆ ಪೀಠಾರೋಹಣ

ಪ್ರಜಾವಾಣಿ ವಾರ್ತೆ



ಸಚ್ಚಿದಾನಂದ ಸರಸ್ವತಿ

ಬೆಂಗಳೂರು: ವಾಸವಿ ಪೀಠದ ದ್ವಿತೀಯ ಪೀಠಾಧಿಪತಿಯಾಗಿ ಸಚ್ಚಿದಾನಂದ ಸರಸ್ವತಿ ಅವರ ಪೀಠಾರೋಹಣ ಕಾರ್ಯಕ್ರಮ ಇದೇ 20ರಂದು ಮಲ್ಲೇಶ್ವರದ ಕನ್ಯಕಾಪರಮೇಶ್ವರಿ ದೇವಾಲಯದಲ್ಲಿ ಸರಳವಾಗಿ ನೆರವೇರಲಿದೆ.

'ಅರಮನೆ ಮೈದಾನದಲ್ಲಿ ಅದ್ದೂರಿಯಾಗಿ ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿತ್ತು. ಕೋವಿಡ್ ಕಾರಣದಿಂದ ಧಾರ್ಮಿಕ ಕಾರ್ಯಕ್ರಮಗಳನ್ನು ಮಾತ್ರ ನಡೆಸಲು ನಿರ್ಧರಿಸಲಾಗಿದೆ. ಆನ್‌ಲೈನ್‌ನಲ್ಲೂ ಕಾರ್ಯಕ್ರಮದ ನೇರಪ್ರಸಾರ ಇರಲಿದೆ' ಎಂದು ವಾಸವಿ ಪೀಠಾರೋಹಣ ಸಮಿತಿ ಅಧ್ಯಕ್ಷ ಮಾನಂದಿ ಸುರೇಶ್ ತಿಳಿಸಿದರು.

'ಪೀಠಾರೋಹಣ ಸಂದರ್ಭದಲ್ಲಿ ರಾಜ್ಯದಲ್ಲಿರುವ ವಾಸವಿ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯಲಿದೆ. ವೃದ್ಧಾಶ್ರಮ, ಅನಾಥಾಶ್ರಮ ಹಾಗೂ ಆಸ್ಪತ್ರೆಗಳಲ್ಲಿ ಅನ್ನದಾನ ಇರಲಿದೆ. ಜೂನ್ 17ರಿಂದ ಪೀಠಾರೋಹಣದ ಕಾರ್ಯಕ್ರಮಗಳು ಆರಂಭಗೊಳ್ಳಲಿದ್ದು, ಫೇಸ್‌ಬುಕ್ ಹಾಗೂ ಯುಟ್ಯೂಬ್‌ನಲ್ಲಿ ನೇರಪ್ರಸಾರದ ವ್ಯವಸ್ಥೆ ಮಾಡಲಾಗುವುದು.ಕಾರ್ಯಕ್ರಮಕ್ಕೆ ಶುಭಕೋರುವ ವಿಡಿಯೊಗಳನ್ನು ಇಮೇಲ್-kavmss@gmail.com ಅಥವಾ 9663900439 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಬಹುದು' ಎಂದರು.

1989ರಲ್ಲಿ ಜನಿಸಿದ ಸಚ್ಚಿದಾನಂದ ಸರಸ್ವತಿ ಅವರು ಶಿವಮೊಗ್ಗದ ಉಮಾ ಹಾಗೂ ಭೂಪಾಳಂ ನಾಗರಾಜ್ ದಂಪತಿಯ ಪುತ್ರ. ಶಿವಮೊಗ್ಗದ ವಾಸವಿ ವಿದ್ಯಾಲಯದಲ್ಲಿ ಪ್ರಾಥಮಿಕ ಶಿಕ್ಷಣ ಹಾಗೂ ಕ್ರೈಸ್ಟ್ ವಿಶ್ವವಿದ್ಯಾಲಯದಿಂದ ನಿರ್ವಹಣೆ ವಿಷಯದಲ್ಲಿ ಚಿನ್ನದ ಪದಕದೊಂದಿಗೆ ಪದವಿ ಪೂರೈಸಿದ್ದಾರೆ.

'ಸಮಾಜದೆಡೆ ವಾತ್ಸಲ್ಯಪೂರ್ಣ ಹೃದಯವಂತಿಕೆ ಬೆಳೆಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರದ ಹಿತದ ಎದುರು ವೈಯಕ್ತಿಕ ಮೌಲ್ಯಗಳ ನೆರಳು ಕೂಡ ಸುಳಿಯಬಾರದು. ಅನೈಕ್ಯದ ಕಾರಣದಿಂದಾಗಿ ಕುಟುಂಬ ಹಾಗೂ ಸಮಾಜ ಸೋಲುತ್ತದೆ. ನಾನು, ನನ್ನದು ಎಂಬ ಸ್ವಾರ್ಥದ ಪರಿಧಿಯನ್ನು ರಾಷ್ಟ್ರಮಟ್ಟಕ್ಕೆ ವಿಸ್ತರಿಸುವುದೇ ಸಮಾಜ ಯೋಗ' ಎಂದು ವಿಯೆಟ್ನಾಂನ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಕೇಂದ್ರದ ನಿರ್ದೇಶಕ ಜಿ.ಬಿ.ಹರೀಶ್ ತಿಳಿಸಿದರು.

ರಾಷ್ಟ್ರೋತ್ಥಾನ ಪರಿಷತ್, 7ನೇ ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ದಿಶಾ ಭಾರತ್ ಮತ್ತು ಯೂತ್ ಫಾರ್ ಸೇವಾ ಸಹಯೋಗದಲ್ಲಿ ಹಮ್ಮಿಕೊಂಡಿರುವ ಆನ್‌ಲೈನ್ ಉಪನ್ಯಾಸ ಸರಣಿಯಲ್ಲಿ ಮಂಗಳವಾರ 'ಸಮಾಜ ಯೋಗ' ವಿಷಯದ ಕುರಿತು ಮಾತನಾಡಿದರು.

'ಜೀವನದಲ್ಲಿ ಮೌಲ್ಯಗಳ ಸಂಘರ್ಷ ಎದುರಾಗುತ್ತದೆ. ಅಂತಹ ಸಮಯದಲ್ಲಿ ಯಾವ ಮೌಲ್ಯ ಶ್ರೇಷ್ಠ ಎಂಬುದನ್ನು ನಾವೇ ನಿರ್ಧರಿಸಬೇಕು. ಸಮಾಜದೆಡೆಗೆ ವಾತ್ಸಲ್ಯಪೂರ್ಣವಾದ ಹೃದಯ ಬೆಳೆಸಿಕೊಳ್ಳಬೇಕು' ಎಂದರು.

ಹೊ.ವೆ.ಶೇಷಾದ್ರಿ ಅವರ 'ಸಮಾಜ ಯೋಗ' ಪುಸ್ತಕದ ಆಧಾರದಲ್ಲಿ ಮಾತನಾಡಿದ ಅವರು 'ಅಗತ್ಯಕ್ಕಿಂತಲೂ ಹೆಚ್ಚು ಕೊಂಡುಕೊಳ್ಳುವ ಮನಸ್ಥಿತಿ ನಮ್ಮ ಜನರಲ್ಲಿದೆ. ಕೊಳ್ಳುಬಾಕತನದಿಂದ ಅಶಾಂತಿ ನಿರ್ಮಾಣವಾಗುತ್ತದೆ. ಇದು ಮನುಷ್ಯನನ್ನು ಮಾನಸಿಕ ಅಸಮತೋಲನ ಪರಿಸ್ಥಿತಿಗೆ ದೂಡುತ್ತದೆ. ದೇಹ, ಮನಸ್ಸನ್ನು ಕಟ್ಟುವುದು, ಕುಟುಂಬಗಳ ನಡುವಣ ತಾಕಲಾಟವನ್ನು ಕಡಿಮೆಮಾಡುವುದೇ ಸಮಾಜ ಯೋಗ. ಎಲ್ಲರೂ ಅವರವರ ಕೆಲಸವನ್ನು ಮಾಡುತ್ತಾ, ಮತ್ತೊಬ್ಬರ ಕೆಲಸವನ್ನು ಗೌರವಿಸುತ್ತಾ ಸಾಮರಸ್ಯದಿಂದ ಬದುಕಬೇಕು. ಸಾಮರಸ್ಯದ ಕೊರತೆ ಉಂಟಾದಾಗ ಕುಟುಂಬ ಹಾಗೂ ಸಮಾಜ ವಿಷ ವರ್ತುಲದಲ್ಲಿ ಸಿಲುಕುತ್ತದೆ' ಎಂದು ತಿಳಿಸಿದರು.

'ಯಾವುದೇ ಕೆಲಸ ಮಾಡುವ ಮುನ್ನ ಸುಖದ ಮೂಲ ಯಾವುದು ಎಂಬ ಪ್ರಶ್ನೆಯನ್ನು ನಮ್ಮಲ್ಲೇ ಕೇಳಿಕೊಳ್ಳಬೇಕು. ಸುಖ ಎಂದರೇನು, ಅದನ್ನು ಪಡೆಯುವುದು ಹೇಗೆ ಇದರ ಹುಡುಕಾಟವೇ ಸಮಾಜ ಯೋಗ. ಇದರ ಅನುಷ್ಠಾನವೇ ಸಾಮಾಜಿಕ ಸಾಮರಸ್ಯ. ಸುಖವು ಧರ್ಮಕ್ಕೆ ವಿರುದ್ಧವಾಗಿರಬಾರದು' ಎಂದು ಹೇಳಿದರು.

'ಶಾಲೆಗಳಲ್ಲಿ ರಂಗ ಶಿಕ್ಷಕರನ್ನು ನೇಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ರಂಗ ಶಿಕ್ಷಕರ ನೇಮಕಾತಿಗೆ ಕ್ರಮಕೈಗೊಳ್ಳಬೇಕು ಎಂದು ಕರ್ನಾಟಕ ರಂಗಭೂಮಿ ಡಿಪ್ಲೊಮಾ ಪದವೀಧರರ ವೇದಿಕೆಯು ಸರ್ಕಾರಕ್ಕೆ ಆಗ್ರಹಿಸಿದೆ.

ಈ ಬಗ್ಗೆ ವೇದಿಕೆಯು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಗೆ ಪತ್ರ ಬರೆದಿದೆ. ಇದಕ್ಕೆ ಬಿ.ಎಸ್. ವಿದ್ಯಾರಣ್ಯ, ಶಶಿಧರ್ ಭಾರಿಘಾಟ್, ಡಿಂಗ್ರಿ ನರೇಶ್, ಪ್ರಭುರಾಜ್, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಗೂ ಬಿ.ವಿ. ರಾಜಾರಾಂ ಬೆಂಬಲ ವ್ಯಕ್ತಪಡಿಸಿದ್ದಾರೆ.

'ಈಗಾಗಲೇ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಲಬುರ್ಗಿ ಹೆಚ್ಚುವರಿ ಆಯುಕ್ತರು ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಕರಡು ಅಧಿಸೂಚನೆಯನ್ನು ತಯಾರಿಸಿ, ಸಲ್ಲಿಸುವಂತೆ ವಿವಿಧ ಜಿಲ್ಲೆಗಳ ಉಪನಿರ್ದೇಶಕರಿಗೆ ಸೂಚಿಸಿದ್ದಾರೆ. ಇದರಲ್ಲಿ ಸಹ ಶಿಕ್ಷಕರು, ದೈಹಿಕ ಶಿಕ್ಷಕರು ಸಂಗೀತ ಶಿಕ್ಷಕರು, ಚಿತ್ರಕಲಾ ಶಿಕ್ಷಕರ ನೇಮಕಾತಿಯ ಪ್ರಸ್ತಾಪವಿದೆ. ರಂಗ ಶಿಕ್ಷಕರನ್ನು ಇದರಲ್ಲಿ ಸೇರಿಸಿಲ್ಲ' ಎಂದು ವೇದಿಕೆ ತಿಳಿಸಿದೆ.


'ಹೈದರಾಬಾದ್ ಕರ್ನಾಟಕ ಭಾಗದಲ್ಲಿ ರಂಗಭೂಮಿಯಲ್ಲಿ ಡಿಪ್ಲೊಮಾ ಪಡೆದ 250ಕ್ಕೂ ಅಧಿಕ ಕಲಾವಿದರಿದ್ದಾರೆ. ಈಗ ಸೃಷ್ಟಿಯಾಗಿರುವ ಸಂಗೀತ, ಚಿತ್ರಕಲಾ ಶಿಕ್ಷಕರ ಹುದ್ದೆಗಳ ಪೈಕಿ ಶೇ 30ರಷ್ಟಾದರೂ ಹುದ್ದೆಗಳನ್ನು ನಾಟಕ ಶಿಕ್ಷಕರ ಹುದ್ದೆಗಳ ನೇಮಕಾತಿಗೆ ಅವಕಾಶ ಕಲ್ಪಿಸಿ, ಅಧಿಸೂಚನೆ ಹೊರಡಿಸಬೇಕು' ಎಂದು ಪತ್ರದಲ್ಲಿ ಮನವಿ ಮಾಡಲಾಗಿದೆ.

'2008ರಲ್ಲಿ ರಂಗ ಶಿಕ್ಷಕರ 63 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ಆಗ ಇಲಾಖೆಯು 43 ಮಂದಿಯನ್ನು ಮಾತ್ರ ನೇಮಕ ಮಾಡಿಕೊಂಡಿತ್ತು. ಬಳಿಕ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ರಂಗ ಶಿಕ್ಷಕರ ನೇಮಕಾತಿಯಾದ ಶಾಲೆಗಳ ಶೈಕ್ಷಣಿಕ ಗುಣಮಟ್ಟ, ವಿದ್ಯಾರ್ಥಿಗಳ ಹಾಜರಾತಿ ಹಾಗೂ ಶಾಲೆಯ ಬಗ್ಗೆ ಸಾರ್ವಜನಿಕರಲ್ಲಿನ ಗೌರವ ಹೆಚ್ಚಾಗಿದೆ. ಹೀಗಾಗಿ, ಪ್ರತಿ ಶಾಲೆಯಲ್ಲಿಯೂ ರಂಗ ಶಿಕ್ಷಕರ ಅಗತ್ಯವಿದೆ. ಈಗ ಹೊರಡಿಸಿರುವ ಅಧಿಸೂಚನೆಯನ್ನು ಪುನರ್ ಪರಿಶೀಲನೆ ನಡೆಸಿ, ಅದರಲ್ಲಿ ರಂಗ ಶಿಕ್ಷಕರನ್ನೂ ಸೇರಿಸಬೇಕು' ಎಂದು ವೇದಿಕೆ ಒತ್ತಾಯಿಸಿದೆ.



90 ವರ್ಷ ಪೂರೈಸಿದ ಶಾಮನೂರು ಶಿವಶಂಕರಪ್ಪ ಅವರ ಗತ ಕಾಲದ ಮೆಲುಕು

ಭಿನ್ನ ಪಥ: ಯಶೋ ರಥ



ಬಾಲಕೃಷ್ಣ ಪಿ.ಎಚ್.

'ವ್ಯಾಪಾರ ವಹಿವಾಟು ನನ್ನ ಇಷ್ಟದ ಕ್ಷೇತ್ರ. ರಾಜಕೀಯಕ್ಕೆ ಆಕಸ್ಮಿಕವಾಗಿ ಬಂದೆ. ನನ್ನ ಕಾಕನ ಒತ್ತಾಯವೇ ಇದಕ್ಕೆ ಕಾರಣ. ರಾಜಕೀಯಕ್ಕೆ ಬಂದ ಬಳಿಕವೂ ಶಾಸಕ, ಸಂಸದ ಆಗಬೇಕು ಎಂಬ ಕನಸನ್ನೇನೂ ಇಟ್ಟುಕೊಂಡವನಲ್ಲ. ನಗರಸಭೆ ವ್ಯಾಪ್ತಿಯ ರಾಜಕಾರಣ ಸಾಕು ಎಂದು ಯೋಚನೆ ಮಾಡುತ್ತಿದ್ದೆ. ಆದರೂ ಸಂಸದನಾದೆ, ಶಾಸಕನಾದೆ, ಸಚಿವನಾದೆ...'

ಕಾಂಗ್ರೆಸ್‌ನ ಅತಿ ಹಿರಿಯ ನಾಯಕರಲ್ಲಿ ಒಬ್ಬರಾಗಿರುವ ಜೂನ್ 16ಕ್ಕೆ 90 ವರ್ಷ ಪೂರೈಸಿ 91ನೇ ವರ್ಷಕ್ಕೆ ಕಾಲಿಟ್ಟ ಶಾಮನೂರು ಶಿವಶಂಕರಪ್ಪ ಅವರು ಗತಕಾಲದ ನೆನಪುಗಳನ್ನು ಮೆಲುಕು ಹಾಕಿಕೊಂಡರು.

ಶಾಮನೂರು ಕಲ್ಲಪ್ಪ–ಸಾವಿತ್ರಮ್ಮ ದಂಪತಿಗೆ ಐವರು ಮಕ್ಕಳು. ಅವರಲ್ಲಿ ಮೊದಲನೆಯವರು ಬಸವರಾಜಪ್ಪ, ಎರಡನೆಯವರೇ ಶಿವಶಂಕರಪ್ಪ. ಶರಣಪ್ಪ, ತಿಪ್ಪಮ್ಮ, ಪಾರ್ವತಮ್ಮ ಈ ಮೂವರು ಕಿರಿಯ ಸಹೋದರ – ಸಹೋದರಿಯರು.

1931ರಲ್ಲಿ ಹುಟ್ಟಿದ ಶಿವಶಂಕರಪ್ಪ ಅವರು ದಾವಣಗೆರೆಯ ಓಲ್ಡ್ ಮಿಡ್ಲ್ ಸ್ಕೂಲ್‌ನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಹಾಗೂ ಸರ್ಕಾರಿ ಹೈಸ್ಕೂಲ್‌ನಲ್ಲಿ ಇಂಟರ್ ಮೀಡಿಯೆಟ್ ಓದಿದರು. ಅಲ್ಲಿಗೆ ವಿದ್ಯಾಭ್ಯಾಸ ನಿಲ್ಲಿಸಿ ವ್ಯವಹಾರ ಕ್ಷೇತ್ರಕ್ಕೆ ಇಳಿದರು. ಮೈಸೂರು, ಬೆಂಗಳೂರು, ಆಗ್ರ, ಕಾನ್ಪುರ ಎಂದು ಸುತ್ತಾಡಿದ ಬಳಿಕ ದಾವಣಗೆರೆಯಲ್ಲಿರುವ ತಂದೆಯ ಅಂಗಡಿಗೆ ಮರಳಿದ್ದರು.

ಜನತಾ ಬಜಾರ್ ನಿರ್ದೇಶಕರಾಗುವ ಮೂಲಕ ಮೊದಲ ಬಾರಿ ರಾಜಕೀಯ ಕ್ಷೇತ್ರದ ಬಗ್ಗೆ ಆಸಕ್ತಿ ವಹಿಸಿದರು. ಬಳಿಕ ಅರ್ಬನ್ ಕೋ ಆಪರೇಟಿವ್ ಸೊಸೈಟಿ ನಿರ್ದೇಶಕರಾದರು. ಅವರ ಕಾಕ ಶಾಮನೂರು ಶಿವಣ್ಣ ಅವರ ಒತ್ತಾಯದಿಂದಾಗಿ 1969ರಲ್ಲಿ ನಗರಸಭೆ ಸದಸ್ಯರಾದರು. 1972ರಲ್ಲಿ ನಗರಸಭೆ ಅಧ್ಯಕ್ಷರಾದರು.

ಹೀಗೆ ವ್ಯವಹಾರ ಮತ್ತು ರಾಜಕೀಯದಲ್ಲಿ ಒಂದೊಂದೇ ಮೆಟ್ಟಿಲು ಏರಿದ ಶಾಮನೂರು ಶಿವಶಂಕರಪ್ಪ ಅವರು ಆ ಹಾದಿಯನ್ನು ನೆನಪು ಮಾಡಿಕೊಂಡಿದ್ದಾರೆ. ಅವರದ್ದೇ ಮಾತುಗಳು ಕೆಳಗಿವೆ.

'ಕಡ್ಲೆಬೇಳೆ, ತೊಗರಿಬೇಳೆ ವ್ಯವಹಾರ ಆರಂಭಿಸಿದೆ. ತೊಗರಿಬೇಳೆ ವ್ಯಾಪಾರದಲ್ಲಿ ಆ ಕಾಲದಲ್ಲಿ ₹ 1 ಲಕ್ಷ ಕಳೆದುಕೊಂಡೆ. ಮಂಡ್ಯ, ಮೈಸೂರಿನಿಂದ ಅಕ್ಕಿ ತರಿಸಿ ವ್ಯಾಪಾರ ಮಾಡಿದೆ. ಅದು ಕೈ ಹಿಡಿಯಿತು. ಜತೆಗೆ ಕಲ್ಲುಸಕ್ಕರೆ, ಸಕ್ಕರೆ ವ್ಯಾಪಾರ ಮಾಡುವ ಮೂಲಕ ಆ ಲಾಸ್ ತುಂಬಿಕೊಂಡೆ. 1962ರ ಸಮಯದಲ್ಲಿ ನಾಡಿಗೆ ಬರಗಾಲ ಬಂದಿತ್ತು. ಸರ್ಕಾರ ಸೋಜಿ, ಮೈದಾ ಎಲ್ಲ ಕೊಡುತ್ತಿತ್ತು. ಈ ಸಂದರ್ಭದಲ್ಲಿ ಶಾಮನೂರು ಸಂಗಪ್ಪ ಮತ್ತು ನಾನು ಒಟ್ಟಿಗೆ ವ್ಯವಹಾರ ಮಾಡಿದ್ದೆವು. ಮುಂದೆ ನಾವಿಬ್ಬರೂ ಪಾಲುದಾರಿಕೆಯಲ್ಲಿ ಅಕ್ಕಿ ಮಿಲ್ ಆರಂಭಿಸಿದೆವು. ಇಬ್ಬರೂ ಐದೈದು ಸಾವಿರ ರೂಪಾಯಿ ಹಾಕುವುದು ಎಂದು ಒಪ್ಪಂದ ಮಾಡಿಕೊಂಡಿದ್ದೆವು. ಅದರಂತೆ ಪ್ರತಿ ಬಾರಿ ತಲಾ ₹ 5 ಸಾವಿರ ಹಾಕಿ ಒಟ್ಟು ನಾನು ₹ 95 ಸಾವಿರ, ಅವರು ₹ 95 ಸಾವಿರ ಹಾಕಿದ್ದೆವು. ಮುಂದೆ ಪಾಲುದಾರಿಕೆ ಬೇಡ ಎಂದು ನಿರ್ಧರಿಸಿದಾಗ ಇಬ್ಬರೂ ಮಿಲ್ ಬೇಕು ಎಂದು ಆಸಕ್ತಿ ವಹಿಸಿದ್ದೆವು. ಹಾಗಾಗಿ ಹರಾಜು ಕೂಗುವುದು ಅನಿವಾರ್ಯವಾಯಿತು. ಭಾರಿ ಬೆಲೆಗೆ ಅಂದರೆ ₹ 25 ಲಕ್ಷ ಕೂಗಿ ಹರಾಜಲ್ಲಿ ಪಡೆದುಕೊಂಡೆವು' ಎಂದು ಆರಂಭದ ವ್ಯವಹಾರವನ್ನು ಬಿಚ್ಚಿಟ್ಟರು.

'ನಗರಸಭೆ ಅಧ್ಯಕ್ಷರಾದವರು ಬಾಪೂಜಿ ಟ್ರಸ್ಟ್‌ನ ಸದಸ್ಯರಾಗಿರುತ್ತಾರೆ. ನಾನು ನಗರಸಭೆ ಅಧ್ಯಕ್ಷನಾಗಿದ್ದ ಸಮಯದಲ್ಲಿ ಟ್ರಸ್ಟ್‌ನಲ್ಲಿ ಭಾರಿ ಒಳಜಗಳಗಳು ಉಂಟಾಗಿದ್ದವು. ಒಬ್ಬರನ್ನೊಬ್ಬರು ಕಿತ್ತುಹಾಕುವ ಪ್ರಯತ್ನದಲ್ಲಿದ್ದರು. ಟ್ರಸ್ಟ್ ಉಳಿಸಲು ನನ್ನನ್ನು ಕಾರ್ಯದರ್ಶಿಯನ್ನಾಗಿ ಮಾಡಿದರು' ಎಂದು ನೆನಪಿಸಿಕೊಂಡರು.

'ನಸೀಬ್ ಚೆನ್ನಾಗಿತ್ತು. ವ್ಯವಹಾರ ಕ್ಷೇತ್ರದಲ್ಲಿಯೂ ಯಶಸ್ವಿಯಾದೆ. ರಾಜಕೀಯ ಕ್ಷೇತ್ರದಲ್ಲಿಯೂ ಯಶಸ್ವಿಯಾದೆ. ಇಂದಿಗೂ ನನಗೆ ರಾಜಕೀಯಕ್ಕಿಂತ ವ್ಯವಹಾರದಲ್ಲಿಯೇ ಹೆಚ್ಚು ಆಸಕ್ತಿ' ಎಂದು ಅನುಭವ ಹೇಳಿಕೊಂಡರು.

'ಕೊನೇ ಚುನಾವಣೆಯಲ್ಲ'

'ನಾನು ಇನ್ನು ಮುಂದೆ ಚುನಾವಣೆಗೆ ನಿಲ್ಲುವುದಿಲ್ಲ ಎಂದು ಎಲ್ಲಿಯೂ ಹೇಳಿಲ್ಲ. ಆದರೂ ನನ್ನಿಂದ ಅಂಥ ಹೇಳಿಕೆ ಬರಲಿ ಎಂದು ನಮ್ಮವರೇ ಬಹಳ ಮಂದಿ ಕಾಯುತ್ತಿದ್ದಾರೆ' ಎಂದು ಶಿವಶಂಕರಪ್ಪ ಮಾರ್ಮಿಕವಾಗಿ ತಿಳಿಸಿದರು.

ಎರಡು ಚಿತ್ರಗಳ ನಿರ್ಮಾಪಕರು

ಶಾಮನೂರು ಶಿವಶಂಕರಪ್ಪ ಅವರು 'ಬೆಂಗಳೂರಿಗೆ ಬಂದ ಬೋರೇಗೌಡ' ಮತ್ತು 'ಪ್ರೇಮ ಪ್ರೇಮ ಪ್ರೇಮ' ಎಂಬ ಎರಡು ಚಲನಚಿತ್ರಗಳ ನಿರ್ಮಾಪಕರಾಗಿದ್ದರು.

'ನಾವು ಐದು ಮಂದಿ ಸೇರಿ ತಲಾ ₹ 5 ಸಾವಿರ ಹಾಕಿ ಚಿತ್ರ ನಿರ್ಮಾಣ ಮಾಡಿದ್ದೆವು. ಕಲ್ಯಾಣ ಕುಮಾರ್, ಲೀಲಾವತಿ, ವಂದನಾ ಮುಂತಾದವರು ಆ ಚಿತ್ರಗಳಲ್ಲಿ ಅಭಿನಯಿಸಿದ್ದ ನೆನಪು' ಎಂದು ಮೆಲುಕು ಹಾಕಿದರು.



ಶಾಮನೂರು ಶಿವಶಂಕರಪ್ಪ ಅವರ ಜನ್ಮದಿನವನ್ನು ಕುಟುಂಬದ ಸದಸ್ಯರೆಲ್ಲ ಸೇರಿಕೊಂಡು ಆಚರಿಸಿದ್ದ ಕ್ಷಣ.

ಬಿಜೆಪಿಗೆ ಆಹ್ವಾನಿಸಿದ್ದರು

'ಬಿಜೆಪಿಗೆ ಬಂದರೆ ಉಪಮುಖ್ಯಮಂತ್ರಿ ಸ್ಥಾನ ಕೊಡುತ್ತೇವೆ ಎಂದು ಬಿಜೆಪಿಯವರು ಆಹ್ವಾನಿಸಿದ್ದರು. ಬೀಗರೂ ಆಗಿರುವ ಜಗದೀಶ ಶೆಟ್ಟರ್ ಅವರೇ ಪಕ್ಷಕ್ಕೆ ಕರೆಯಲು ಬಂದಿದ್ದರು. ನಾನು ಕಾಂಗ್ರೆಸ್ ಬಿಟ್ಟುಹೋಗಿಲ್ಲ' ಎಂದು ತಿಳಿಸಿದರು.

ಇದು ಈಗಿನದ್ದಾದರೆ ನಾಲ್ಕು ದಶಕಗಳ ಹಿಂದೆ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ನನ್ನನ್ನು ಅವರ ಜನತಾ ಪಕ್ಷಕ್ಕೆ ಎಳೆಯಲು ಪ್ರ–ಯತ್ನಿಸಿದ್ದರು. ಆಗಲೂ ಹೋಗಿರಲಿಲ್ಲ ಎಂದು ನೆನಪು ಮಾಡಿಕೊಂಡರು.

'ಎಲ್ಲ ಮುಖ್ಯಮಂತ್ರಿಗಳೂ ಆತ್ಮೀಯರೇ'

ದೇವರಾಜ ಅರಸರಿಂದ ಹಿಡಿದು ಈಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರವರೆಗೆ ಎಲ್ಲ ಮುಖ್ಯಮಂತ್ರಿಗಳು ಆತ್ಮೀಯರೇ ಆಗಿದ್ದಾರೆ. ನಾನು ದಾವಣಗೆರೆಯ ರಾಜಕೀಯಕ್ಕೆ ಸೀಮಿತವಾಗಿದ್ದೆ. ನನ್ನನ್ನು ರಾಜ್ಯಸಭೆ ಸದಸ್ಯನನ್ನಾಗಿ ಮಾಡಬೇಕು ಎಂದು ತೀರ್ಮಾನವಾಗಿತ್ತು. ಆಗ ಇಲ್ಲಿನ ಕೆಲವರು ಅಡ್ಡಗಾಲು ಹಾಕಿದ್ದರು. ಎರಡನೇ ಬಾರಿಗೆ ಬಂಗಾರಪ್ಪ ಅವರೇ ತಪ್ಪಿಸಿದರು. ಆಗ ದಾವಣಗೆರೆ ನಗರಸಭೆಗೆ ಸೀಮಿತವಾಗದೇ ರಾಜಕಾರಣ ಮಾಡುವ ಆಸಕ್ತಿ ಉಂಟಾಯಿತು. ಎರಡು ಬಾರಿ ಪಾರ್ಲಿಮೆಂಟ್ ಚುನಾವಣೆಗೆ ಸ್ಪರ್ಧಿಸಿದೆ. 1998ರಲ್ಲಿ ಒಂದು ಬಾರಿ ಸಂಸದನಾದೆ. 2004ರಿಂದ ಇಲ್ಲಿಯವರೆಗೆ ನಿರಂತರವಾಗಿ ನಾಲ್ಕು ಬಾರಿ ಶಾಸಕನಾದೆ. ಮುಖ್ಯಮಂತ್ರಿ ಆಗಬೇಕು ಎಂಬ ಕನಸು ಕಂಡಿಲ್ಲ. ಮಂತ್ರಿ ಆಗುವುದು ಬಿಡುವುದು ಬೇರೆ. ಆದರೆ, ಶಾಸಕನಾ–ಗಿರಬೇಕು. ಯಾಕೆಂದರೆ ಅದು ಒಂದು ಅಧಿಕಾರ' ಎಂದು ಶಾಮನೂರು ವಿಶ್ಲೇಷಿಸಿದರು.

ರಾಜಕೀಯದಲ್ಲಿ ಇರುವ ಎಲ್ಲರೂ ಆತ್ಮೀಯರೇ. ಮಾಜಿ ಸಚಿವ ಕೆ.ಎಚ್. ರಂಗನಾಥ್ ಮತ್ತು ಮಾಜಿ ಕೇಂದ್ರ ಸಚಿವ ಮಲ್ಲಿಕಾರ್ಜುನ ಖರ್ಗೆ ಹೆಚ್ಚು ಆತ್ಮೀಯರು ಎಂದು ಹೇಳಿದರು.

ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ

ಶಾಮನೂರು ಶಿವಶಂಕರಪ್ಪ ಅವರು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಕಾಲದಲ್ಲಿಯೇ ಅತಿ ಹೆಚ್ಚು ಸದಸ್ಯರ ನೋಂದಣಿ ಕೂಡ ನಡೆದಿದೆ.


'ನಾನು ಮಹಾಸಭಾದ ಅಧ್ಯಕ್ಷ ಸ್ಥಾನವನ್ನು ಬಯಸಿದವನಲ್ಲ. ಮಹಾಸಭಾದ ಬಿಲ್ಡಿಂಗ್ ಕಟ್ಟುವಾಗ ₹ 25 ಲಕ್ಷ ಕೊಟ್ಟಿದ್ದೆ. ಭೀಮಣ್ಣ ಖಂಡ್ರೆ ಮತ್ತು ತಿಪ್ಪಣ್ಣ ನನ್ನನ್ನು ಭೇಟಿ ಮಾಡಿ ಅಧ್ಯಕ್ಷರಾಗಬೇಕು ಎಂದು ಒತ್ತಾಯಿಸಿದರು. ಸಿರಿಗೆರೆ ಸ್ವಾಮೀಜಿಗೆ ವಿಷಯ ತಿಳಿಸಿದಾಗ ಅವರೂ ಒಪ್ಪಿಗೆ ನೀಡಿದರು' ಎಂದು ಶಾಮನೂರು ತಿಳಿಸಿದರು.

ಮದುವೆಯ ನೆನಪು

'1956ರಲ್ಲಿ ಹುಡುಗಿ ನೋಡಲು ಎಂದು ಚನ್ನಗಿರಿಯ ವಡ್ನಾಳ್‌ಗೆ ಹೋದೆವು. ಹುಡುಗಿ ನೋಡಿ ಒಪ್ಪಿದೆ. ಬಳಿಕ ನಿಶ್ಚಯವಾಯಿತು. ಹುಡುಗಿ ಕಡ್ಡಿಯಂತೆ ತೆಳ್ಳಗೆ ಇದ್ದಳು. ಆಮೇಲೆ ಹುಡುಗಿ ಬೇಡ ಎಂದೆ. ಏನು ಹುಡುಗಾಟ ಆಡ್ತೀಯಾ ಎಂದು ಕಾಕ ಶಾಮನೂರು ಶಿವಣ್ಣ ಅವರು ಬೈದರು. ಕೊನೆಗೆ ಒಪ್ಪಿದೆ. ಆಗ ಚೌಲ್ಟ್ರಿಯಲ್ಲಿ ಮದುವೆಯಾಗುವುದು ಅಂದರೆ ಅದಕ್ಕೆ ಗೌರವ ಕಡಿಮೆ. ಮನೆಯಲ್ಲೇ ಚಪ್ಪರ ಹಾಕಿ ಮದುವೆಯಾಗಬೇಕು. ಮೆರವಣಿಗೆ ಮಾಡಬೇಕು ಎಂಬುದೆಲ್ಲ ಆಗಿನ ರಿವಾಜುಗಳಾಗಿದ್ದವು. ಮೆರವಣಿಗೆ ವೈಭವದಿಂದ ಮಾಡಿದ್ದೆ. ಮದುವೆ ಮಾತ್ರ ಆರ್.ಎಚ್. ಚೌಟ್ರಿಯಲ್ಲಿ ನಡೆದಿತ್ತು' ಎಂದು ಪಾರ್ವತಮ್ಮ ಅವರನ್ನು ಮದುವೆಯಾದ ಸಂದರ್ಭವನ್ನು ನೆನಪಿಸಿಕೊಂಡರು.

ಶುಭ ಹಾರೈಕೆ

'ಆಯುಸ್ಸು ಇಮ್ಮಡಿಯಾಗಲಿ'



ಇತರ ಪಕ್ಷಗಳಿಂದ ಬಂದ ಉನ್ನತ ಸ್ಥಾನ – ಮಾನಗಳ ಆಮಿಷಕ್ಕೆ ಮರುಳಾಗದೇ ಕಾಂಗ್ರೆಸ್‌ಗೆ ನಿಷ್ಠರಾಗಿಯೇ ಉಳಿದಿರುವ ಶಿವಶಂಕರಪ್ಪ ಅವರು ದೇಶದ ಶೈಕ್ಷಣಿಕ, ಔದ್ಯೋಗಿಕ ನಕ್ಷೆ ಯಲ್ಲಿ ದಾವಣಗೆರೆಗೆ ಸೂಕ್ತ ಸ್ಥಾನ ದೊರೆಯಲು ಪ್ರತ್ಯಕ್ಷ ಕಾರಣರಾಗಿದ್ದಾರೆ.

ಅಪಾರ ದೈವ ಭಕ್ತರಾಗಿರುವ ಶಿವಶಂಕರಪ್ಪ ಸಾಕ್ಷಾತ್ ಧಾರ್ಮಿಕ ಕೆಲಸ – ಕಾರ್ಯ ಮಾಡುತ್ತಿದ್ದಾರೆ. ಶ್ರೀಮಂತಿಕೆಯಿದ್ದರೂ ದರ್ಪ ಮೆರೆಯದೆ ಸರಳ ಜೀವನ ನಡೆಸುತ್ತ ಮಾದರಿಯಾಗಿದ್ದಾರೆ. ಎಲ್ಲ ಧರ್ಮಿಯರಿಗೂ, ಎಲ್ಲ ವರ್ಗದವರಿಗೂ ಸಹಾಯ ಮಾಡುವ ಅವರ ಉದಾರ ಗುಣ ಬೇರೆಡೆ ಕಾಣಸಿಗುವುದು ವಿರಳ.

ನಾನು 1972ರಲ್ಲಿ ಸಮಿತಿಯೊಂದರ ನೇತೃತ್ವ ವಹಿಸಿ ದಾವಣಗೆರೆಗೆ ತೆರಳಿದಾಗ, ಅಲ್ಲಿನ ಸ್ಥಳೀಯ ಸಂಸ್ಥೆ ಅಧ್ಯಕ್ಷರಾಗಿದ್ದ ಶಾಮನೂರರೊಂದಿಗೆ ಉಂಟಾಗಿರುವ ಸ್ನೇಹ ಈಗ ಸುವರ್ಣ ಮಹೋತ್ಸವಕ್ಕೆ ಹೆಜ್ಜೆ ಇರಿಸುತ್ತಿದೆ. ಅದ್ದೂರಿಯಾಗಿ ನಡೆದ ಅವರ 60ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಎಸ್. ನಿಜಲಿಂಗಪ್ಪ, ಆರ್.ಗುಂಡುರಾವ್, ರಾಮಕೃಷ್ಣ ಹೆಗಡೆ, ನಾನು, ರಂಗನಾಥ್ ಸೇರಿದಂತೆ ಎಲ್ಲ ಪಕ್ಷಗಳ ಮುಖಂಡರು, ಅನೇಕ ಮಠಾಧೀಶರು ಭಾಗಿಯಾಗಿದ್ದು ಇನ್ನೂ ನೆನಪಿದೆ.

ಕೋವಿಡ್ ಸಂಕಷ್ಟದಲ್ಲಿರುವ ಕ್ಷೇತ್ರದ ಜನತೆಗೆ ಉಚಿತ ಲಸಿಕೆ ಹಾಕಿಸುವ ಉದ್ದೇಶದಿಂದ,ನನ್ನ ಮೂಲಕವೇ ಲಸಿಕೆ ತಯಾರಿಕೆ ಕಂಪನಿಯೊಂದಿಗೆ ಮಾತನಾಡಿ ಎಲ್ಲ ವೆಚ್ಚವನ್ನೂ ನೀಡುವುದಾಗಿ ಘೋಷಿಸಿರುವುದು ಅವರ ಔದಾರ್ಯಕ್ಕೆ ಉದಾಹರಣೆ. ಅಂಥ ಧೀಮಂತರ ಆರೋಗ್ಯ, ಆಯಸ್ಸು ಇಮ್ಮಡಿಯಾಗಲಿ ಎಂಬುದೇ ನನ್ನ ಹಾರೈಕೆ.

– ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಕ್ಕೆ ಉತ್ಕೃಷ್ಟ ಕೊಡುಗೆ



ಹಿರಿಯ ರಾಜಕೀಯ ನಾಯಕ, ಶಿಕ್ಷಣ ತಜ್ಞ, ಶಾಸಕ ಶಾಮನೂರು ಶಿವಶಂಕರಪ್ಪ ಅವರು 90 ವಸಂತಗಳನ್ನು ಪೂರೈಸುತ್ತಿರುವುದು ಸಂತಸದ ಸಂಗತಿ. ಹಲವು ದಶಕಗಳಿಂದ ರಾಜ್ಯ ರಾಜಕಾರಣದಲ್ಲಿ ಸಕ್ರಿಯರಾಗಿರುವ ಶಿವಶಂಕರಪ್ಪ ಅವರು ತೋಟಗಾರಿಕೆ ಸಚಿವರಾಗಿ ಅನನ್ಯ ಸೇವೆ ಸಲ್ಲಿಸಿದ್ದಾರೆ. ಸಾಮಾಜಿಕ, ಶೈಕ್ಷಣಿಕ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಉತ್ಕೃಷ್ಟ ಕೊಡುಗೆಗಳನ್ನು ನೀಡಿದ್ದಾರೆ.

ದಾವಣಗೆರೆಯಲ್ಲಿ ಬಾಪೂಜಿ ಶಿಕ್ಷಣ ಸಂಸ್ಥೆಯ ಮೂಲಕ ಗ್ರಾಮೀಣ ಭಾಗದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತ ಬಂದಿದ್ದಾರೆ. ಶಾಮನೂರು ಶಿವಶಂಕರಪ್ಪ ಅವರು ನೂರ್ಕಾಲ ಬಾಳಲಿ. ಅವರಿಗೆ ಜನ್ಮದಿನದ ಹೃತ್ಪೂರ್ವಕ ಶುಭಾಶಯಗಳು.

– ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ

'ಸೈದ್ಧಾಂತಿಕ ಬದ್ಧತೆ ಪ್ರಶ್ನಾತೀತ'



ಹಿರಿಯರೂ, ಆತ್ಮೀಯರೂ ಆದ ಶಾಮನೂರು ಶಿವಶಂಕರಪ್ಪ ಅವರಿಗೆ ಜನ್ಮದಿನದ ಶುಭಾಶಯಗಳು. ಶಾಮನೂರು ಅವರದ್ದು ಬೇಷರತ್ ಪಕ್ಷ ನಿಷ್ಠೆ. ಸೈದ್ಧಾಂತಿಕ ಬದ್ಧತೆ ವಿಚಾರದಲ್ಲಿ ಅವರು ಯಾವತ್ತೂ ರಾಜಿ ಮಾಡಿಕೊಳ್ಳದವರು. ಜನಾನುರಾಗಿ ಆಗಿ ಈ ಇಳಿ ವಯಸ್ಸಿನಲ್ಲೂ ಕ್ರಿಯಾಶೀಲರಾಗಿರುವ ಇವರ ಉತ್ಸಾಹ ಪಕ್ಷದ ಪ್ರತಿಯೊಬ್ಬ ಕಿರಿಯ ಕಾರ್ಯಕರ್ತನಿಗೂ ಮಾದರಿ. ದೇವರು ಇನ್ನಷ್ಟು ಆರೋಗ್ಯ ಮತ್ತು ಚೈತನ್ಯವನ್ನು ಶಿವಶಂಕರಪ್ಪ ಅವರಿಗೆ ನೀಡಲಿ ಎಂದು ಹಾರೈಸುತ್ತೇನೆ.

– ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

'ಪಕ್ಷದ ನಿಷ್ಠಾವಂತ ಸೇನಾನಿ'



ಬಹುಬಗೆಯ ಸಮಾಜಸೇವೆಯಲ್ಲಿ ನಿರಂತರ ನಿರತರಾಗಿರುವ ಕಾಂಗ್ರೆಸ್ ಹಿರಿಯ ಜೀವ ಶಾಮನೂರು ಶಿವಶಂಕರಪ್ಪ ಅವರು ನಿಜ ಅರ್ಥದಲ್ಲಿ ಕಾಯಕ ಯೋಗಿ. ಅಣ್ಣ ಬಸವಣ್ಣನವರ ಕಾಯಕ ತತ್ವವನ್ನು ಅನುಷ್ಠಾನಕ್ಕೆ ತಂದಿರುವ ಅವರು ಪರೋಪಕಾರದಲ್ಲಿ ಜೀವನದ ಸಾರ್ಥಕತೆ ಕಂಡುಕೊಂಡವರು. ಹಲವು ದಶಕಗಳಿಂದ ಪಕ್ಷದ ನಿಷ್ಠಾವಂತ ಸೇನಾನಿಯಾಗಿರುವ ಶಿವಶಂಕರಪ್ಪನವರು ಕಿರಿಯರಿಗೆ ಮಾರ್ಗದರ್ಶಕರಾಗಿದ್ದಾರೆ. ತಮ್ಮ ಸ್ವಂತ ಹಣದಲ್ಲಿ 3 ಲಕ್ಷ ಮಂದಿಗೆ ಉಚಿತ ಕೊರೊನಾ ಲಸಿಕೆ ಅಭಿಯಾನ ನಡೆಸುತ್ತಿರುವ ಅವರು ಕಾಂಗ್ರೆಸ್‌ನ ಹೆಮ್ಮೆ ಹಾಗೂ ಇತರರಿಗೆ ಮಾದರಿ. ಅವರು ನೂರಾರು ವರ್ಷ ಬಾಳಲಿ, ದೇವರು ಅವರಿಗೆ ಆರೋಗ್ಯ, ಆಯುಸ್ಸು, ಸಂಪತ್ತು ಕರುಣಿಸಲಿ. ಸಮಾಜಕ್ಕೆ ಅವರ ಸೇವೆ ಮತ್ತಷ್ಟು ಲಭ್ಯವಾಗಲಿ.

– ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

'ಸಮಾಜ ಒಡೆಯುವ ಕೆಲಸ ತಡೆದವರು'



ರಾಜ್ಯದ ಹಿರಿಯ ರಾಜಕಾರಣಿ ಶಿವಶಂಕರಪ್ಪನವರು. ಈಗಲೂ ಕ್ರಿಯಾಶೀಲರಾಗಿ, ಉತ್ಸಾಹದಿಂದ ಜನಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಸಮಾಜದ ಅಭ್ಯುದಯಕ್ಕಾಗಿ ಜೀವನವನ್ನು ಮುಡುಪಾಗಿಟ್ಟಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾಗಿ ಸಮಾಜ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಲಿಂಗಾಯತ ಹೋರಾಟ ನಡೆದಾಗ ಅವರು ಸಮಾಜದ ಅಧ್ಯಕ್ಷರಾಗಿ ಗಟ್ಟಿಯಾಗಿ ನಿಂತು ಹೋರಾಟ ಮಾಡುವ ಮೂಲಕ ಸಮಾಜ ಒಡೆಯುವ ಕೆಲಸ ತಡೆಯುವಲ್ಲಿ ಯಶಸ್ವಿಯಾದರು.

ಅವರ ಜನಪರ ಕಾಳಜಿ, ಅಭಿವೃದ್ಧಿಯ ತುಡಿತ ಎಲ್ಲರೂ ಮೆಚ್ಚುವಂತಹದ್ದಾಗಿದೆ. ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು

– ಜಗದೀಶ ಶೆಟ್ಟರ್, ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ

'ಶಿವಶಂಕರಪ್ಪ ಕೊಡುಗೈ ದಾನಿ'



ಶಾಮನೂರು ಶಿವಶಂಕರಪ್ಪ ಅವರು ಕೊಡುಗೈ ದಾನಿ, ಸರಳ, ಸಜ್ಜನಿಕೆಯ ವ್ಯಕ್ತಿತ್ವದವರು. ಜನಪರ ಕಾಳಜಿ, ಕಳಕಳಿ ಹೊಂದಿದವರು. ಅನೇಕ ಸಂಘ, ಸಂಸ್ಥೆಗಳನ್ನು ಬೆಳೆಸಿದ್ದಾರೆ. ಅಖಿಲ ಭಾರತೀಯ ವೀರಶೈವ ಮಹಾಸಭಾ ಅಧ್ಯಕ್ಷರಾಗಿ ಸೇವೆ ಮಾಡುತ್ತ ನಮಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಇಳಿ ವಯಸ್ಸಿನಲ್ಲಿಯೂ ಲವಲವಿಕೆಯಿಂದ ಶಿಕ್ಷಣ, ಆರೋಗ್ಯ, ಸಾಮಾಜಿಕ, ಸಹಕಾರ, ಧಾರ್ಮಿಕ ಕ್ಷೇತ್ರದಲ್ಲಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಅಮೂಲ್ಯ ಕೊಡುಗೆ ನೀಡಿದ್ದಾರೆ.

ನಮ್ಮ ತಂದೆ ಭೀಮಣ್ಣ ಖಂಡ್ರೆ ಅವರ ಜೊತೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ಕೊರೊನಾ ಸಮಯದಲ್ಲಿ ಪ್ರತಿಯೊಬ್ಬರಿಗೂ ಲಸಿಕೆ ಸಿಗಬೇಕು ಎಂದು ₹ 9 ಕೋಟಿ ಖರ್ಚು ಮಾಡಿ 3 ಲಕ್ಷ ಜನರಿಗೆ ಲಸಿಕೆ ನೀಡಬೇಕು ಎನ್ನುವ ಅವರ ಕಾರ್ಯ ದೇಶದಲ್ಲಿಯೇ ಮಾದರಿಯಾಗಿದೆ. ಭಗವಂತ ಅವರಿಗೆ ಇನ್ನೂ ಹೆಚ್ಚಿನ ಆಯುಷ್ಯ, ಆರೋಗ್ಯ, ಭಾಗ್ಯ ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ.

– ಈಶ್ವರ ಖಂಡ್ರೆ, ಅಖಿಲ ಭಾರತೀಯ ವೀರಶೈವ ಮಹಾಸಭಾದ ಪ್ರಧಾನ ಕಾರ್ಯದರ್ಶಿ

ಮಾಗಿದ ಮಹಾಚೇತನ... ನಗರದ ಹಿರಿಯ ಚೇತನ...



ಎಂ.ಜಿ. ಈಶ್ವರಪ್ಪ

ಮೈಸೂರು ವಿಶ್ವವಿದ್ಯಾಲಯದಿಂದ ಕುವೆಂಪು ವಿಶ್ವವಿದ್ಯಾಲಯ ಬೇರ್ಪಟ್ಟ ವರ್ಷವದು 1987. ಕುವೆಂಪು ವಿ.ವಿ ಘೋಷಣೆಯಾದ 2-3 ತಿಂಗಳ ನಂತರ ಡಾ.ಶಾಂತಿನಾಥ ದೇಸಾಯಿ ಕುಲಪತಿಗಳಾಗಿ ಬಂದರು. ಕುವೆಂಪು ವಿ.ವಿ ವ್ಯಾಪ್ತಿಗೆ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಅರ್ಥಾತ್ ದಾವಣಗೆರೆ ಬಂದವು. ಆಗ ಶಾಂತಿನಾಥ ದೇಸಾಯಿ ಅವರು ದಾವಣಗೆರೆಯ ಬಾಪೂಜಿ ವಿದ್ಯಾಸಂಸ್ಥೆಗೆ ಭೇಟಿ ನೀಡಿದರು. ಅವರ ಭೇಟಿಯ ಸೌಹಾರ್ದ ನಿಮಿತ್ತ ಜೆ.ಜೆ.ಎಂ. ಮೆಡಿಕಲ್ ಕಾಲೇಜಿನಲ್ಲಿ ಚಹಾಕೂಟ ಏರ್ಪಡಿಸಲಾಗಿತ್ತು. ಸಂಸ್ಥೆಯ ಕಚೇರಿ, ಕಾಲೇಜುಗಳು ಮತ್ತು ಅಲ್ಲಿನ ಸಿಬ್ಬಂದಿಯನ್ನು ಹಾಗೂ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಶ್ರೀ ಶಾಮನೂರು ಶಿವಶಂಕರಪ್ಪ ಅವರ ಕಾರ್ಯಚಟುವಟಿಕೆಗಳ ವ್ಯಕ್ತಿತ್ವವನ್ನು ದೇಸಾಯಿಯವರು ಗಮನಿಸುತ್ತಲೇ ಇದ್ದರು. ಚಹಾಕೂಟ, ಸ್ವಾಗತ, ಭಾಷಣ, ವಂದನಾರ್ಪಣೆ ಎಲ್ಲ ಮುಗಿದು ಹೊರಬರುತ್ತಿರುವಾಗ ದೇಸಾಯಿಯವರು ಶಾಮನೂರು ಶಿವಶಂಕರಪ್ಪನವರನ್ನು ಕುರಿತು, 'ಸರ್ ತಾವು ಏನು ಮಾಡಿಕೊಂಡಿದ್ದೀರಿ' ಎಂದು ಪ್ರಶ್ನಿಸಿದರು. ಅದಕ್ಕುತ್ತರಿಸಿದ ಶಿವಶಂಕರಪ್ಪನವರು, 'ನಾನು ಮರ್ಚೆಂಟ್, ಬ್ಯುಸಿನೆಸ್ ಮ್ಯಾನ್' ಎಂದರು. ದೇಸಾಯಿಯವರು 'ಐ ಸೀ' ಎಂದು ನಕ್ಕು ಸುಮ್ಮನಾದರು.

ದಾವಣಗೆರೆಯ ಹೆಸರಾಂತ ವಾಣಿಜ್ಯೋದ್ಯಮಿ ಎಂದರೆ ಶ್ರೀ ಶಾಮನೂರು ಶಿವಶಂಕರಪ್ಪನವರು. ಸುಮಾರು 60–70 ವರ್ಷಗಳಿಂದಲೂ ಪ್ರಖ್ಯಾತ ವಾಣಿಜ್ಯೋದ್ಯಮಿ ಅವರು. ಚೌಕಿಪೇಟೆಯ ಮೆ॥ ಶಾಮನೂರು ಕಲ್ಲಪ್ಪ ಅ್ಯಂಡ್ ಸನ್ಸ್ ಅವರ ತಂದೆಯ ಕಾಲದಿಂದಲೂ ವ್ಯಾಪಾರ ವಹಿವಾಟುಗಳಲ್ಲಿ ಪ್ರಸಿದ್ಧವಾದುದು. ಶಿವಶಂಕರಪ್ಪನವರು ದಾವಣಗೆರೆಯಲ್ಲಿದ್ದಾರೆ ಎಂದರೆ ತಮ್ಮವು ಏನೇ ಕೆಲಸಗಳಿದ್ದರೂ ಪ್ರತಿನಿತ್ಯ ಬಕ್ಕೇಶ್ವರ ದೇವಸ್ಥಾನದ ಭೇಟಿಯ ನಂತರ ಅಂಗಡಿಯಲ್ಲಿ ಅವತ್ತಿನ ವ್ಯವಹಾರಗಳೆಲ್ಲವನ್ನೂ ಕೂಲಂಕಷವಾಗಿ ಪರಾಂಬರಿಸಿ ಮುಂದಿನ ವಹಿವಾಟಿಗೆ ಸಲಹೆಗಳನ್ನಿತ್ತು, ಇತರ ಕೆಲಸ ಕಾರ್ಯಗಳಲ್ಲಿ ತೊಡಗುತ್ತಾರೆ.

ಜೂನ್ 16, 1931ರಲ್ಲಿ ಜನಿಸಿದ ಶಾಮನೂರು ಶಿವಶಂಕರಪ್ಪನವರು ಇಂದಿಗೆ 90 ವರ್ಷ ತುಂಬಿ 91ಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ವಯಸ್ಸು ಹೆಚ್ಚಿದಂತೆಲ್ಲಾ ಅವರು ತಮ್ಮ ಸೇವಾ ಕ್ಷೇತ್ರವನ್ನೂ, ಕಾರ್ಯಕ್ಷೇತ್ರವನ್ನೂ ವಿಸ್ತರಿಸಿಕೊಳ್ಳುತ್ತಿದ್ದಾರೆ. ಸಹಜವಾಗಿ ಹೇಳುವ ಇಳಿವಯಸ್ಸು ಎನ್ನುವುದನ್ನೂ ನಿರಾಕರಿಸಿ ಸದಾ ಲವಲವಿಕೆಯಿಂದ, ಮಾಗಿದ ಪಕ್ವತೆಯಿಂದ ತಮ್ಮ ನಗರ ಸೇವೆಯನ್ನು, ಜನಸೇವೆಯನ್ನು ಮುಂದುವರಿಸುತ್ತಿದ್ದಾರೆ.

ತಮ್ಮ 30ನೇ ವಯಸ್ಸಿನಲ್ಲಿಯೇ ನಗರಸಭೆಯ ಸದಸ್ಯರಾಗಿ, ಅಧ್ಯಕ್ಷರಾಗಿ ಜನಸೇವೆಯನ್ನು ಪ್ರಾರಂಭಿಸಿದ್ದಾರೆ. ನಗರದ ರಸ್ತೆಗಳು, ಸ್ವಚ್ಛತೆ, ಕುಡಿಯುವ ನೀರು, ಬಡವರಿಗೆ ಮನೆ ಮುಂತಾದ ಯೋಜನೆಗಳನ್ನು 70ರ ದಶಕದಲ್ಲೇ ಅವರು ಪ್ರಾರಂಭಿಸಿ, ನಗರದ ಪ್ರಗತಿಗೆ ಪೂರಕವಾದರು.

ಶಿಕ್ಷಣ ಕ್ಷೇತ್ರವನ್ನು ಅವರು ಪ್ರವೇಶಿಸಿದ್ದು 1972ರಲ್ಲಿ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಯಾಗುವ ಮುಖಾಂತರ. ಶ್ರೀಯುತರು ಸಂಸ್ಥೆಯನ್ನು ಪ್ರವೇಶಿಸಿದಾಗ ಜೆ.ಜೆ.ಎಂ. ಮೆಡಿಕಲ್ ಕಾಲೇಜು ಸೇರಿ 5 ಕಾಲೇಜುಗಳು ಮಾತ್ರ ಇದ್ದವು. ಧರ್ಮರತ್ನಾಕರ ಮದ್ದುರಾಯಪ್ಪನವರ ಶಿಕ್ಷಣ ದಾನದ ಆಶಯವನ್ನು ಅರ್ಥ ಮಾಡಿಕೊಂಡ ಶಿವಶಂಕರಪ್ಪನವರು ಅದನ್ನೂ ಹಂತ ಹಂತವಾಗಿ ವಿಸ್ತರಿಸುತ್ತಾ ಬಂದರು. ಹಲವು ಮಹನೀಯ ಆಡಳಿತ ಮಂಡಳಿಯವರ ಜೊತೆಗೂಡಿ ಒಂದೊಂದೇ ಸಂಸ್ಥೆಗಳನ್ನು, ಕಾಲೇಜುಗಳನ್ನು ತೆರೆಯುತ್ತಾ ಬಂದರು. ಶಿಕ್ಷಣದ ಬಹುಮುಖ್ಯವಾದ ಕೋರ್ಸ್‌ಗಳೆಲ್ಲಾ ತೆರೆಯಲ್ಪಟ್ಟವು. ವಿಶ್ವವಿದ್ಯಾಲಯಗಳ, ಸರ್ಕಾರ ಸಹಮತ ಪಡೆದು ಅವುಗಳನ್ನೂ ಪ್ರಾರಂಭಿಸಿದರು. ಮೆಡಿಕಲ್, ಡೆಂಟಲ್, ಎಂಜಿನಿಯರಿಂಗ್, ಫಾರ್ಮಸಿ, ನರ್ಸಿಂಗ್, ಕಲೆ, ವಿಜ್ಞಾನ, ವಾಣಿಜ್ಯ, ಕಾನೂನು ಹೀಗೆ ಶಿಕ್ಷಣದ ಎಲ್ಲ ಕೋರ್ಸ್‌ಗಳೂ ಬಂದವು. ಒಂದು ಕಾಲದಲ್ಲಿ ಎಣ್ಣೆ ಗಿರಣಿಗಳ ನಗರ ಎನ್ನಿಸಿಕೊಂಡಿದ್ದು, ಮುಂದೆ ಹತ್ತಿ ಗಿರಣಿಗಳ ನಗರವಾಗಿ ಮಾರ್ಪಟ್ಟಿತು. 'ಮ್ಯಾಂಚೆಸ್ಟರ್' ಎಂದು ಕರೆಸಿಕೊಂಡಿದ್ದ ದಾವಣಗೆರೆ 'ಕೇಂಬ್ರಿಡ್ಜ್' ಎನಿಸಿಕೊಂಡಿತು. ಇದಕ್ಕೆಲ್ಲ ಕಾರಣಕರ್ತರೆಂದರೆ, ಬಾಪೂಜಿ ವಿದ್ಯಾಸಂಸ್ಥೆಯನ್ನು ದೂರದೃಷ್ಟಿಯಿಂದ ಹಂತ ಹಂತವಾಗಿ ಬೆಳೆಸಿದ ಕರ್ತೃಶಕ್ತಿ, ಸಂಕಲ್ಪ ಶಕ್ತಿಯಾದ ಶಾಮನೂರು ಶಿವಶಂಕರಪ್ಪನವರು.

ಇಂದು ಬಾಪೂಜಿ ವಿದ್ಯಾಸಂಸ್ಥೆಯಲ್ಲಿ ಶಾಲಾ–ಕಾಲೇಜು, ಆಸ್ಪತ್ರೆ, ಹಾಸ್ಟೆಲ್‌ಗಳು ಸೇರಿ ಒಟ್ಟು 54 ಅಂಗ ಸಂಸ್ಥೆಗಳು ಇವೆ. ಅಲ್ಲಿ ಪ್ರತಿವರ್ಷ ಸುಮಾರು 19 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು, ದೇಶ–ವಿದೇಶಗಳಿಂದ ಬಂದು ವಿದ್ಯಾಭ್ಯಾಸ ಮಾಡಿ, ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿಕೊಳ್ಳುವುದಲ್ಲದೆ ತಮ್ಮ ಬದುಕನ್ನೂ ವಿಶ್ವವ್ಯಾಪಿಯಾಗಿ ರೂಪಿಸಿಕೊಳ್ಳುತ್ತಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

3 ಸಾವಿರಕ್ಕೂ ಹೆಚ್ಚು ಬೋಧಕ, ಬೋಧಕೇತರರು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. 70ರ ದಶಕದಲ್ಲಿ ದಾವಣಗೆರೆಯಲ್ಲಿ ಹತ್ತಿಗಿರಣಿಗಳು ಸೈರನ್ ಕೂಗುತ್ತಾ ಮ್ಯಾಂಚೆಸ್ಟರ್ ವಿಜೃಂಭಿಸುತ್ತಿರುವಾಗ ಸುಮಾರು 10 ಸಾವಿರ ಕಾರ್ಮಿಕರು ಮತ್ತು ಅವರ ಕುಟುಂಬ ದಾವಣಗೆರೆಯ ಜೀವಾಳವಾಗಿದ್ದರು. ಮ್ಯಾಂಚೆಸ್ಟರ್ ಬದಲಾದ ಕೈಗಾರಿಕೋದ್ಯಮದ ಹೊಡೆತಕ್ಕೆ ನಲುಗಿ ಕುಂದಿದಾಗ ಬಾಪೂಜಿ ವಿದ್ಯಾಸಂಸ್ಥೆಯ ಕೇಂಬ್ರಿಡ್ ಅಂಶ ಈಗ 19 ಸಾವಿರ ವಿದ್ಯಾರ್ಥಿಗಳ ಮತ್ತವರ ಕುಟುಂಬದಿಂದ ಜೀವತುಂಬಿಕೊಂಡಿದೆ.

ಶ್ರೀಯುತರು ತಮಗೆ 75 ವರ್ಷ ತುಂಬಿದಾಗ ನಡೆದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಹೀಗೆ ಹೇಳಿದ್ದರು– 'ನನಗೆ ದುಡಿಮೆ ಎಂದರೆ ಉಸಿರು. ಮನೆತನದ ವ್ಯಾಪಾರವನ್ನೂ ಬೃಹತ್ತಾಗಿ ಬೆಳೆಸಿದ್ದೇನೆ. ಆಮದು ಹಾಗೂ ರಫ್ತು ಆಗುವವರೆಗೆ ಅದು ವಿಸ್ತಾರಗೊಂಡಿದೆ. ನನ್ನ ಮೂವರು ಮಕ್ಕಳೂ ಶ್ರಮವಹಿಸಿ ದುಡಿಯುತ್ತಿದ್ದಾರೆ. ಸುತ್ತ–ಮುತ್ತಣ ಪ್ರದೇಶಗಳಿಗೂ ಅನುಕೂಲವಾಗುವಂತಹ ಕೈಗಾರಿಕೋದ್ಯಮಗಳನ್ನು ಸ್ಥಾಪಿಸಿದ್ದೇನೆ. ರೈತರಿಗೆ ನೆರವಾಗುವುದರ ಜೊತೆಗೆ ಅನೇಕರಿಗೆ ಉದ್ಯೋಗ ನೀಡಲು ಉದ್ಯಮ ಸಹಾಯವಾಗಿದೆ. ಸುದೀರ್ಘ ಅವಧಿಯ ಗೌರವ ಕಾರ್ಯದರ್ಶಿಯಾಗಿ ಬಾಪೂಜಿ ವಿದ್ಯಾಸಂಸ್ಥೆಯನ್ನು ಜ್ಞಾನದ ವಿವಿಧ ಶಾಖೆಗಳ ಆಗರವಾಗುವಂತೆ ಮಾಡಿ ಅಂತರರಾಷ್ಟ್ರೀಯ ಮಟ್ಟಕ್ಕೆ ತಲುಪಿಸಿದ್ದೇನೆ. ಇಷ್ಟೆಲ್ಲಾ ಆದರೂ ಬಡಜನರ ನೋವು, ನಿರಾಶೆ, ಆತಂಕಗಳನ್ನು ಕಳೆಯಲು ಸಾಧ್ಯವಾಗಿಲ್ಲ. ಆ ಜನರಿಗೆ ಬದುಕಿನ ಭರವಸೆ ಬರುವಂತೆ ಮಾಡಲು ರಾಜಕೀಯ ಆರಿಸಿಕೊಂಡಿದ್ದೇನೆ. ದೇವರು ನನಗೆ ಸಂಪತ್ತನ್ನು ನೀಡಿದ್ದಾನೆ. ಅದನ್ನು ನಾನು ಬಡಜನರಿಗೆ, ಸತ್ಪಾತ್ರರಿಗೆ ವಿನಿಯೋಗಿಸುತ್ತೇನೆ'. ಈ ಮಾತುಗಳು ಅವರ ಬದುಕಿನ ಖಚಿತ ದೃಷ್ಟಿಕೋನ ಆಗಿದೆ, ಚಿಂತನೆಗಳಾಗಿವೆ.

ದಾವಣಗೆರೆಯ ಮತ್ತು ದಾವಣಗೆರೆ ಜನರ ಶ್ರೇಯಸ್ಸಿಗಾಗಿ ಶ್ರೀಯುತರು ವಿಧಾನಸೌಧ ಪ್ರವೇಶಿಸಿದರು. ಪಾರ್ಲಿಮೆಂಟ್ ಪ್ರವೇಶಿಸಿದರು. ಜನಪ್ರತಿನಿಧಿಗಳಾಗಿ ಜನರ ಒಳಿತಿಗಾಗಿ ಅಹರ್ನಿಶಿ ಶ್ರಮಿಸಿದರು. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರಾಗಿ ನಾಡಿನಾದ್ಯಂತ ಗಣನೀಯ ಪ್ರಗತಿಪರ ಕ್ರಮಗಳನ್ನು ಕೈಗೊಂಡರು. ಅಪಾರ ದೈವಶ್ರದ್ಧೆಯ ಶ್ರೀಯುತರು ದೇವಸ್ಥಾನಗಳ ಅಭಿವೃದ್ಧಿಗೆ ದಾನ–ಧರ್ಮ ಮಾಡಿದರು. ಪ್ರತಿ ದಿವಸ ತಮ್ಮ ದೈವದ ಪೂಜೆಯನ್ನು ಸುಮಾರು ಅರ್ಧ ಗಂಟೆಗೂ ಮಿಕ್ಕಿ ಶ್ರದ್ಧೆಯಿಂದ ನೆರವೇರಿಸುತ್ತಾರೆ. ಯಾವುದೇ ಊರಲ್ಲಿರಲಿ, ಅವರ ದಿನಚರಿ ಪ್ರಾರಂಭವಾಗುವುದೇ ದೇವಸ್ಥಾನ ದರ್ಶನವೊಂದರಿಂದ. ಯಾವ ಊರಿನ ನಿಕಟ ಸಂಪರ್ಕ ಇದೆಯೋ ಅಲ್ಲಿನ ದೇವಸ್ಥಾನ, ಮಠಮಾನ್ಯಗಳಿಗೆ ಉದಾರವಾಗಿ ದಾನ ಮಾಡಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿ ಆಯ್ಕೆಯಾದ ನಂತರವೂ ಅವರ ಧಾರ್ಮಿಕ ಒಡನಾಟ ವಿಶೇಷವಾಗಿ ಮುಂದುವರಿದಿದೆ.

ಶ್ರೀಯುತರು ಕೊಡುಗೈ ದಾನಿಗಳು. ದೇಹಿ ಎಂದವರಿಗೆ ಇಲ್ಲ ಎಂದವರಲ್ಲ. ಸ್ಥಾವರಕ್ಕೆ ಹೇಗೆ ದಾನ ನೀಡುತ್ತಾರೋ ಹಾಗೆಯೇ ಬಡಬಗ್ಗರಿಗೆ ಅನುಕೂಲವಾಗುವಂತೆ ಸಮುದಾಯ ಭವನ, ಪ್ರಸಾದ ಭವನಗಳನ್ನು ನಿರ್ಮಾಣ ಮಾಡಿದ್ದಾರೆ. ರಾಜ್ಯದ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೊಂದು ವಿದ್ಯಾರ್ಥಿವೇತನ ನೀಡಲು ಆರೇಳು ವರ್ಷಗಳಿಂದ ಶಾಮನೂರು ಶಿವಶಂಕರಪ್ಪ ಜನಕಲ್ಯಾಣ ಟ್ರಸ್ಟ್ ಸ್ಥಾಪಿಸಿದ್ದಾರೆ. ಸುಮಾರು 8 ಕೋಟಿ ರೂಪಾಯಿಗಳನ್ನು ನಿಧಿಯಿಟ್ಟು ಅದರಲ್ಲಿ ಬರುವ ಬಡ್ಡಿಯಲ್ಲಿ ರಾಜ್ಯದಾದ್ಯಂತ ಪ್ರತಿಭಾವಂತ ಬಡವಿದ್ಯಾರ್ಥಿಗಳಿಗೆ ಮತ್ತು ಪತ್ರಕರ್ತರ ಮಕ್ಕಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿವೇತನ ಜಮಾ ಆಗುವಂತೆ ನೋಡಿಕೊಳ್ಳುತ್ತಿದ್ದಾರೆ. ಇಂತಹ ಸೇವೆಯನ್ನು ಗಮನಿಸಿಯೇ ಮಹತ್ವದ ಮಠಾಧೀಶರು 'ಧರ್ಮಚೂಡಾಮಣಿ' ಎಂಬ ಬಿರುದು ದಯಪಾಲಿಸಿದ್ದಾರೆ. ಶಿಕ್ಷಣದಲ್ಲಿನ ಸೇವೆಗಾಗಿ ಶಿಕ್ಷಣ ಸುಧಾಕರ ಎಂಬ ಅಭಿದಾನದ ಜೊತೆಗೆ ಕುವೆಂಪು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗೆ ಪಾತ್ರರಾಗಿದ್ದಾರೆ. 19ನೇ ಶತಮಾನದ ಅವರ ದಾವಣಗೆರೆಯ ಮಹತ್ವದ ಸೇವೆಗಾಗಿ 'ಶತಮಾನದ ಶ್ರೇಷ್ಠ' ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ತಮ್ಮ ಪುತ್ರ ಶ್ರೀ ಎಸ್.ಎಸ್. ಮಲ್ಲಿಕಾರ್ಜುನರ ಜೊತೆಗೂಡಿ ನಗರದ ಜನತೆಗೆ ಉಚಿತವಾಗಿ ಕೋವಿಡ್ ವ್ಯಾಕ್ಸಿನ್ ನೀಡುತ್ತಿರುವುದು ಅನನ್ಯ, ಪ್ರಶಂಸನೀಯ.

ಶಾಮನೂರು ಶಿವಶಂಕರಪ್ಪನವರದು ಮಾಗಿದ ಜೀವ, ಪಕ್ವ ಮನಸ್ಸಿನ ಮಹಾಚೇತನ. ಅವರದು ತೃಪ್ತ ಮತ್ತು ತುಂಬು ಸಂಸಾರ. ತಮ್ಮ ಶ್ರೀಮತಿಯವರಾದ ಪಾರ್ವತಮ್ಮನವರನ್ನು ಸದಾ ಸ್ಮರಿಸುವ ಶ್ರೀಯುತರು ಮೂವರು ಪುತ್ರರ, ಸೊಸೆಯಂದಿರ ಹಾಗೂ ನಾಲ್ವರು ಪುತ್ರಿಯರ, ಅಳಿಯಂದಿರ ಹಗೂ ಮೊಮ್ಮಕ್ಕಳ ಜೊತೆಗಿನ ಅವರ ವ್ಯಕ್ತಿತ್ವ ಆದರ್ಶನೀಯ. ಹಿರಿಯ ಚೇತನ ಶ್ರೀಯುತ ಶಾಮನೂರು ಶಿವಶಂಕರಪ್ಪ ಅವರು ಶತಾಯುಷಿಗಳಾಗಲಿ, ದಾವಣಗೆರೆ ಮತ್ತು ದಾವಣಗೆರೆಯ ಜನತೆಗೆ ಸದಾ ಒಳಿತು ಮಾಡಲಿ ಎಂದು ಆಶಿಸೋಣ.



ದಾವಣಗೆರೆಯಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಜೊತೆ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಉಭಯಕುಶಲೋಪರಿ ನಡೆಸಿದ ಕ್ಷಣ.

ದಾವಣಗೆರೆ ಜನರಿಗೆ ಲಸಿಕೆ ತಂದುಕೊಟ್ಟ 'ಅಮೃತ ಪುರುಷ'



ಕಳೆದ ವರ್ಷ ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಸಂತ್ರಸ್ತರಿಗೆ ಫುಡ್‌ಕಿಟ್ ವಿತರಿಸಿದ್ದರು.

ಬಿ.ಪಿ.ಎಚ್.

'ಕೊರೊನಾ ಸೋಂಕಿನಿಂದ ಜನ ಸಾಯುತ್ತಿದ್ದಾರೆ. ಸರ್ಕಾರ ಅಗತ್ಯ ಇರುವಷ್ಟು ಲಸಿಕೆಗಳನ್ನು ಪೂರೈಕೆ ಮಾಡಲಿಲ್ಲ. ಅದಕ್ಕಾಗಿ ದಾವಣಗೆರೆಯ ಜನರಿಗಾಗಿ ನಾನೇ ದುಡ್ಡು ಕೊಟ್ಟು ಲಸಿಕೆ ತರಿಸಿ ವಿತರಿಸುತ್ತಿದ್ದೇನೆ' ಎಂದು ಶಾಮನೂರು ಶಿವಶಂಕರಪ್ಪ ತಿಳಿಸಿದರು.

ಲಸಿಕೆ ಸಂಬಂಧಿಸಿದಂತೆ 'ಪ್ರಜಾವಾಣಿ'ಗೆ ಅವರು ನೀಡಿದ ಮಾಹಿತಿ ಇಂತಿದೆ.

• **ಸರ್ಕಾರ ಲಸಿಕೆ ನೀಡುತ್ತಿರುವಾಗ ನೀವೂ ನೀಡಬೇಕಾದ ಅನಿವಾರ್ಯ ಯಾಕೆ ಉಂಟಾಯಿತು?**

ಸರ್ಕಾರ ಎಲ್ಲಿ ನೀಡುತ್ತಿತ್ತು? ಎಲ್ಲ ಕಡೆಗಳಲ್ಲಿ ಬೇಡಿಕೆ ಇತ್ತು. ನಮ್ಮ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ 2 ಲಕ್ಷ ಜನರಿದ್ದಾರೆ. ಅಷ್ಟು ಮಂದಿಗೆ ಲಸಿಕೆ ಕೊಡಲು ₹ 18 ಕೋಟಿ ಆಗುತ್ತದೆ. ಅರ್ಧ ನಾನು ಕೊಡುತ್ತೇನೆ. ಅರ್ಧ ಸರ್ಕಾರ ಹಾಕಲಿ ಎಂದು ಸಲಹೆ ನೀಡಿದೆ. ಆದರೆ, ಸ್ಪಂದಿಸಲಿಲ್ಲ. ಬದಲಾಗಿ ಹಣವನ್ನು ಜಿಲ್ಲಾಧಿಕಾರಿಯ ಖಾತೆಗೆ ಹಾಕಿ ಎಂದು ವ್ಯಂಗ್ಯವಾಡಿದರು. ಲಸಿಕೆ ತಂದು ಮಾರಿಕೊಳ್ಳುತ್ತಾರೆ ಎಂದು ಟೀಕಿಸಿದರು. ಅವರು ಸ್ಪಂದಿಸಲಿಲ್ಲ ಎಂದು ನಾವು ಸುಮ್ಮನೆ ಕೂರಲಿಲ್ಲ. ನಾವೇ ತರಿಸಿ ಜನರಿಗೆ ನೀಡುತ್ತಿದ್ದೇವೆ. ಆಗ ಟೀಕೆ ಮಾಡಿದವರು ಈಗ ಮುಚ್ಚಿಕೊಂಡು ಕುಳಿತಿದ್ದಾರೆ.

• **ಅಷ್ಟು ಸುಲಭದಲ್ಲಿ ನಿಮಗೆ ಲಸಿಕೆ ಹೇಗೆ ಸಿಕ್ಕಿತು?**

ಸುಲಭದಲ್ಲಿ ಯಾವುದೂ ಸಿಕ್ಕಿಲ್ಲ. ಲಸಿಕೆ ತಯಾರಿಸುವ ಕಂಪನಿಗಳನ್ನು ಸಂಪರ್ಕಿಸಿದೆವು. ಅವರು ಆ ಪತ್ರ, ಈ ಪತ್ರ ಬೇಕು ಎಂದು ನಿರಕಾರಿಸಿದರು. ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಿದರು. ಬಳಿಕ ನಾವು 60 ಸಾವಿರ ಲಸಿಕೆಗೆ ₹ 4 ಕೋಟಿ ಕಟ್ಟಿದೆವು. ಮೊದಲ ಕಂತಿನಲ್ಲಿ 10 ಸಾವಿರ ಕೋವಿಶೀಲ್ಡ್ ಲಸಿಕೆ ನೀಡಿದರು. ಎರಡನೇ ಕಂತಿನಲ್ಲಿ 15 ಸಾವಿರ ಲಸಿಕೆ ಬರುತ್ತಿದೆ.

• **ನಿಮಗೆ ಲಸಿಕೆ ಸಿಗುತ್ತದೆಯಾದರೆ ಸರ್ಕಾರಕ್ಕೆ ಯಾಕೆ ಸಿಗುತ್ತಿಲ್ಲ?**

ಬೇಕು ಅಂದರೆ ಸಿಗುತ್ತದೆ. ಸರ್ಕಾರ ಅವರಿಗೆ ಬಾಕಿ ಹಣ ನೀಡಬೇಕಿದೆ. ಅಲ್ಲದೇ ನಾವು ಖಾಸಗಿಯವರು ತರಿಸುವಾಗ ಅದರ ಬೆಲೆ ಹೆಚ್ಚಿರುತ್ತದೆ. ಸರ್ಕಾರಕ್ಕೆ ಕಡಿಮೆ ಬೆಲೆಗೆ ಕಂಪನಿ ನೀಡಬೇಕಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಾಕಿ ಹಣ ನೀಡಿ ಖರೀದಿಸಿ ನೀಡಬೇಕು. ಇವರು ಡಿಸೆಂಬರ್, ಜನವರಿ ಎಂದರೆ ಆಗುತ್ತದೆಯೇ?

• **ಜನರಿಗೆ ಲಸಿಕೆ ಕೊಡಬೇಕು ಎಂದು ಯಾಕೆ ಅನ್ನಿಸಿತು?**

ಜನರು ಕಣ್ಣೆದುರೇ ಸಾಯುತ್ತಿರುವುದನ್ನು ನೋಡಲಾಗಲಿಲ್ಲ. ಎಲ್ಲರೂ ಲಸಿಕೆ ತೆಗೆದುಕೊಂಡಿದ್ದರೆ ಕೊರೊನಾ ಬಂದರೂ ಸಾವಿನ ದವಡೆಗೆ ಸಿಲುಕುತ್ತಿರಲಿಲ್ಲ. ಜನಸಾಮಾನ್ಯರಿಗೆ ನೆರವಾಗುವುದು ನನ್ನ ಕರ್ತವ್ಯ.

• **ಕೋವಿಡ್ ಮೊದಲ ಅಲೆಯಲ್ಲಿ ನಿಮಗೇ ಕೊರೊನಾ ಬಂದಿತ್ತು. ಆಗಿನ ಅನುಭವ ಹೇಗಿತ್ತು? ಕೊರೊನಾ ಎರಡನೇ ಅಲೆಗೂ ಆಗಿನದ್ದಕ್ಕೂ ಏನು ವ್ಯತ್ಯಾಸ?**

ಜನಪ್ರತಿನಿಧಿಯಾಗಿದ್ದರಿಂದ ಜನರು ಭೇಟಿಯಾಗುತ್ತಿರುತ್ತಾರೆ. ಅದಕ್ಕಾಗಿ ಆಗಾಗ ಕೊರೊನಾ ಪರೀಕ್ಷೆ ಮಾಡಿಸುತ್ತಿದ್ದೆ. ನಾಲ್ಕನೇ ಬಾರಿ ಪರೀಕ್ಷೆ ಮಾಡಿಸಿದಾಗ ಪಾಸಿಟಿವ್ ಬಂತು. ನಾನು ಬೆಂಗಳೂರಿನಲ್ಲಿ ನನ್ನ ಅಳಿಯನ 'ಸ್ಪರ್ಶ' ಆಸ್ಪತ್ರೆಗೆ ದಾಖಲಾದೆ. ಯಾವುದೇ ಕೊರೊನಾ ಲಕ್ಷಣಗಳಿರಲಿಲ್ಲ. ಗುಣಮುಖನಾಗಿ ಬಂದೆ. ದಾವಣಗೆರೆಗೆ ಬಂದಾಗಲೂ ನಾಲ್ಕು ದಿನ ಲಾಡ್ಜ್‌ನಲ್ಲಿದ್ದು ಬಳಿಕ ಮನೆ ಸೇರಿದೆ. ಮೊದಲ ಅಲೆಗಿಂತ ಎರಡನೇ ಅಲೆ ಹೆಚ್ಚು ಭೀಕರವಾಗಿದೆ. ಆಗ ಆಮ್ಲಜನಕದ ಅವಶ್ಯಕತೆ ಅಷ್ಟಿರಲಿಲ್ಲ. ಎರಡನೇ ಅಲೆಯಲ್ಲಿ ಆಮ್ಲಜನಕ ಕೊರತೆಯೇ ಹೆಚ್ಚು ಆಗಿದೆ.

• **ಆಮ್ಲಜನಕ ಕೊರತೆ ನೀಗಿಸಲು ಏನು ಮಾಡಿದ್ರಿ?**

ಈಗ ಕೊರತೆ ಇಲ್ಲ. ಕೆಲವು ಆಮ್ಲಜನಕ ಪ್ಲಾಂಟ್‌ಗಳು ನಿರ್ಮಾಣಗೊಂಡಿವೆ. ಕೆಲವು ನಿರ್ಮಾಣಗೊಳ್ಳುತ್ತಿವೆ. ನಮ್ಮ ಆಸ್ಪತ್ರೆಯಲ್ಲಿ ಕೂಡ ₹ 2.5 ಕೋಟಿ ವೆಚ್ಚದಲ್ಲಿ ದೊಡ್ಡಮಟ್ಟದ ಪ್ಲಾಂಟ್ ನಿರ್ಮಾಣವಾಗುತ್ತಿದೆ.

• **ರಾಜಕಾರಣಿಗಳಿಗೆ, ಜನರಿಗೆ ಏನು ಹೇಳಲು ಬಯಸುತ್ತೀರಿ?**

ಹಿಂದೆ ರಾಜಕಾರಣಕ್ಕೆ ಒಂದು ಮೌಲ್ಯ, ನೈತಿಕತೆ ಇತ್ತು. ಈಗ ದುಡ್ಡಿನ ಮೇಲೆಯೇ ರಾಜಕಾರಣ ನಡೆಯುತ್ತಿದೆ. ನ್ಯಾಯಯುತವಾಗಿರಿ. ಜನರನ್ನು ಸುಲಿಗೆ ಮಾಡಬೇಡಿ. ಸರಿಯಾದ ದಾರಿಯಲ್ಲಿ ನಡೆಯಿರಿ ಎಂದಷ್ಟೇ ರಾಜಕೀಯಕ್ಕೆ ಬರುತ್ತಿರುವ ಯುವ ಸಮುದಾಯಕ್ಕೆ ತಿಳಿಸುತ್ತೇನೆ. ಜನರು ಕೊರೊನಾ ಕಾಲದಲ್ಲಿ ಹೊರಗೆ ಬರಬೇಡಿ. ಸರ್ಕಾರದ ನಿಯಮ ಪಾಲನೆ ಮಾಡಿ. ಅನಗತ್ಯವಾಗಿ ಓಡಾಡಬೇಡಿ ಎಂದು ಜನರಿಗೆ ಹೇಳುತ್ತೇನೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್



ಶಾಮನೂರು ಶಿವಶಂಕರಪ್ಪ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ ಅವರು ತಮ್ಮ ನಿವಾಸದಲ್ಲಿ ಉಡುಪಿಯ ಪಲಿಮಾರು ಮಠದ ಯತಿ ವಿದ್ಯಾಧೀಶ ತೀರ್ಥ ಸ್ವಾಮೀಜಿ ಅವರ ಪಾದಪೂಜೆಯನ್ನು ನೆರವೇರಿಸಿದ ಕ್ಷಣ



ಖಾಸಗಿ ಕಾರ್ಯಕ್ರಮಕ್ಕಾಗಿ ದಾವಣಗೆರೆಗೆ ಬಂದಿದ್ದ ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಶಾಮನೂರು ಶಿವಶಂಕರಪ್ಪ ಅವರ ಕುಟುಂಬದ ಸದಸ್ಯರೊಂದಿಗೆ ಕಾಲಕಳೆದ ಕ್ಷಣ.



ಗದಗದ ತೋಂಟದಾರ್ಯ ಮಠಕ್ಕೆ ಭೇಟಿ ನೀಡಿದ್ದಾಗ ಶಾಮನೂರು ಶಿವಶಂಕರಪ್ಪ ಅವರನ್ನು ಅಂದಿನ ಪೀಠಾಧ್ಯಕ್ಷರಾಗಿದ್ದ ಸಿದ್ಧಲಿಂಗ ಸ್ವಾಮೀಜಿ ಅವರು ಸನ್ಮಾನಿಸಿದ್ದ ಕ್ಷಣ

ಶುಭ ಹಾರೈಕೆ



ದಾನ, ಧರ್ಮ ಹಾಗೂ ಸ್ನೇಹ ಶಾಮನೂರು ಶಿವಶಂಕರಪ್ಪ ಅವರಿಗೆ ದೇವರು ಕೊಟ್ಟ ಕೊಡುಗೆ. ಬಹಳ ಕೆಲಸಗಳಿಗೆ ತಮ್ಮ ಸ್ವಂತ ಹಣವನ್ನು ನೀಡಿದ್ದಾರೆ. ಇಳಿ ವಯಸ್ಸಿನಲ್ಲೂ ಅವರ ಜ್ಞಾಪಕ ಶಕ್ತಿ ಅಪಾರ. ರಾಜಕೀಯ ಹಾಗೂ ಉದ್ಯಮದಲ್ಲಿ ಅಪಾರ ಸಾಧನೆ ಮಾಡಿದ್ದಾರೆ.

ಬಿ.ಸಿ.ಉಮಾಪತಿ, ಉದ್ಯಮಿ



ಶಾಮನೂರು ಅವರದು ಸಮಗ್ರತೆಯ ವ್ಯಕ್ತಿತ್ವ. ಅವರಿಗೆ ದೈವಬಲ ಇದೆ. ಈಗಲೂ ಯುವಕರು ನಾಚುವಂತೆ ಕೆಲಸ ಮಾಡುತ್ತಾರೆ. ಸ್ವಲ್ಪವೂ ಅಧಿಕಾರದ ದರ್ಪ ಇಲ್ಲ. ಬಡವರ ಜೊತೆಗೂ ಬೆರೆಯುವ ಅಪರೂಪದ ಗುಣ ಅವರಲ್ಲಿದೆ.

ಸಯ್ಯದ್ ಸೈಫುಲ್ಲಾ, ಕೆಪಿಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿ



ಮಿತವಾದ ಆಹಾರ, ಆಲೋಚನೆಯನ್ನು ಮೈಗೂಡಿಸಿಕೊಂಡು ಜ್ಞಾನದ ಸಂಪತ್ತನ್ನು ಹೆಚ್ಚಿಸಿಕೊಂಡಿದ್ದಾರೆ. ಹಣದ ಮದ ಇಲ್ಲ. ಯಾವುದೇ ಸಮಸ್ಯೆಯನ್ನು ತಾಳ್ಮೆಯಿಂದ ಬಗೆಹರಿಸುವ ದೈವಭಕ್ತರು. ಶತ್ರುಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳುವ ಗುಣ ಅವರಲ್ಲಿದೆ.

ಅಣಬೇರು ರಾಜಣ್ಣ, ಹೋಟೆಲ್ ಉದ್ಯಮಿ



ಶಿಕ್ಷಣ, ಆರೋಗ್ಯ ಹಾಗೂ ರಾಜಕೀಯ ಕ್ಷೇತ್ರದಲ್ಲಿ ದಾವಣಗೆರೆ ಗುರುತಿಸಲು ಶಾಮನೂರು ಶಿವಶಂಕರಪ್ಪ ಅವರೇ ಕಾರಣ. ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿರುವ ಅವರು ಹಲವು ಸವಲತ್ತುಗಳನ್ನು ನೀಡಿದ್ದಾರೆ. ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಿ ನೆರವಾಗಿದ್ದಾರೆ. ಅವರು ಜಿಲ್ಲೆಯಲ್ಲಿ ಹುಟ್ಟಿರುವುದು ನಮ್ಮ ಪುಣ್ಯ.

ಎಚ್.ಬಿ.ಮಂಜಪ್ಪ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ



ದುಡಿಮೆ – ದಾಸೋಹಗಳನ್ನು ಮೈಗೂಡಿಸಿಕೊಂಡಿರುವ ಶಾಮನೂರು ಶಿವಶಂಕರಪ್ಪ ಅವರು ಶೋಷಿತ ಸಮುದಾಯಗಳ ಸೇವೆ ಮಾಡುತ್ತಾ ಬಂದಿದ್ದಾರೆ. ಯಾವುದೇ ಸಮುದಾಯವನ್ನು ನಿರ್ಲಕ್ಷಿಸಿಲ್ಲ. ಜಾತ್ಯತೀತ ಗುಣಗಳನ್ನು ಮೈಗೂಡಿಸಿಕೊಂಡವರು. ರಾಜಕೀಯದಲ್ಲಿ ಅವರೊಬ್ಬ ಅಜಾತಶತ್ರು.

ಡಿ.ಬಸವರಾಜ್, ಕೆಪಿಸಿಸಿ ವಕ್ತಾರ



ದಾವಣಗೆರೆಯ ಜನರ ಪಾಲಿನ ನಡೆದಾಡುವ ದೇವರು. ದಾನ, ಧರ್ಮದಲ್ಲಿ ಎಲ್ಲಾ ಸಮಾಜದವರಿಗೂ ಆದ್ಯತೆ ನೀಡಿದ್ದಾರೆ. ಸಮುದಾಯ ಭವನ, ದೇವಸ್ಥಾನಗಳ ನಿರ್ಮಾಣಕ್ಕೆ ಧನಸಹಾಯ ಮಾಡಿದ್ದಾರೆ. ಕಷ್ಟದಲ್ಲಿರುವವರು ಯಾರೇ ಬಂದರೂ ಅವರಿಗೆ 'ಇಲ್ಲ' ಎಂದು ಯಾವತ್ತು ಹೇಳಿದವರಲ್ಲ.

ಎ.ನಾಗರಾಜು, ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ



ಶಾಮನೂರು ಶಿವಶಂಕರಪ್ಪ ಅವರು ನಡೆದಾಡುವ ದೇವರು. ಅವರು ಶ್ರಮಜೀವಿಗಳು. ಸಮಾಧಾನವನ್ನು ಮೈಗೂಡಿಸಿಕೊಂಡಿದ್ದಾರೆ. ಉಚಿತವಾಗಿ ಕೋವಿಡ್ ಲಸಿಕೆ ನೀಡುವ ಮೂಲಕ ಇತರ ರಾಜಕಾರಣಿಗಳಿಗೆ ಮಾದರಿ. ಈಗ ನಡೆಯುತ್ತಿರುವ ಸ್ಮಾರ್ಟ್ ಸಿಟಿ ಕಾಮಗಾರಿಗಳು ಶಾಮನೂರು ಶಿವಶಂಕರಪ್ಪ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ ಅವರ ಕಾಲದಲ್ಲಿ ಆಗಿರುವಂತಹವು.

ದಿನೇಶ್ ಕೆ.ಶೆಟ್ಟಿ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ

ಅಜಾತ ಶತ್ರು, ಹೃದಯವಂತ ಎಸ್ಸೆಸ್

ಅಥಣಿ ವೀರಣ್ಣ

ಜನರಿಗಾಗಿ ಬದುಕಿರುವ, ಸದಾ ಅವರ ಕಷ್ಟಗಳಿಗೆ ಮರುಗುವ, ರಾಜ್ಯ ರಾಜಕಾರಣದಲ್ಲಿ ಅಜಾತ ಶತ್ರುವಾಗಿ ಜನ ಮೆಚ್ಚುಗೆಗೆ ಪಾತ್ರರಾಗಿರುವ ದಾವಣಗೆರೆ ಧಣಿ ಡಾ.ಶಾಮನೂರು ಶಿವಶಂಕರಪ್ಪ ಅವರೀಗ ತೊಂಬತ್ತು ತುಂಬಿರುವ ಅಮೃತ ಕಲಶ.

ತಮ್ಮನ್ನು ನಂಬಿರುವ ಜನತೆಗಾಗಿ ನಿರಂತರ ಅಮೃತವನ್ನೇ ಉಣಿಸುತ್ತ ಬಂದಿರುವ ಶಿವಶಂಕರಪ್ಪ ಅವರು ಎಲ್ಲರನ್ನೂ ಒಳಗೊಳ್ಳುವ ಶಾಂತ ಸಮುದ್ರದ ಹಾಗೆ. ಜನರ ಕಷ್ಟ ತಮ್ಮ ಕಷ್ಟ ಎಂದು ಭಾವಿಸಿ ಎಲ್ಲರನ್ನೂ ಪ್ರೀತಿಯಿಂದ ಕಾಣುವ ಹೃದಯವಂತ. ಬಂದದ್ದು ಬರಲಿ, ಆ ಶಿವನ ದಯೆ ಒಂದಿರಲಿ ಎನ್ನುವ ಶಿವಶಂಕರಪ್ಪನವರು ಯಾವುದಕ್ಕೂ ತಲೆ ಕೆಡಿಸಿಕೊಂಡವರಲ್ಲ. ನನ್ನ, ಅವರ ಸ್ನೇಹ ಸಂಬಂಧಕ್ಕೆ ಇದೀಗ ಐವತ್ತು ವರುಷ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಾಗುತ್ತದೆ.

ಹಳೆ ಭಾಗದ ಕಾಳಿಕಾ ದೇವಿ ರಸ್ತೆಯಲ್ಲಿ ಅವರ ಮನೆ, ಚೌಕಿಪೇಟೆಯಲ್ಲಿ ನಮ್ಮ ಮನೆ. ಅವರು ನಗರಸಭೆ ಅಧ್ಯಕ್ಷರಾಗಿದ್ದಾಗ ನನಗೆ ಅವರ ಪರಿಚಯವಾಯಿತು. ಅಲ್ಲಿಂದ ಶುರುವಾದ ನಮ್ಮ ಒಡನಾಟ ಐವತ್ತು ವರ್ಷಗಳವರೆಗೆ ಅದೇ ಮಧುರ ಬಾಂಧವ್ಯದಲ್ಲಿ ನಡೆದುಬಂದಿದೆ. ಅವರ ಜೊತೆ ದೇಶ-ವಿದೇಶಗಳನ್ನು ಸುತ್ತಿದ್ದೇನೆ. ಅವರು ಎಲ್ಲೇ ಹೋಗಲಿ ಅವರ ಒಡನಾಡಿಯಾಗಿರುತ್ತಿದ್ದೆ.



ಶಾಸಕ ಶಾಮನೂರು ಶಿವಶಂಕರಪ್ಪ ಅವರೊಂದಿಗೆ ಸಮಾಲೋಚನೆ ನಡೆಸುತ್ತಿರುವ ಲೆಕ್ಕಪರಿಶೋಧಕ ಅಥಣಿ ವೀರಣ್ಣ.

ಅವರದು ಶಿಸ್ತಿನ ಜೀವನ, ತಾಳ್ಮೆ ಹೆಚ್ಚು. ಯಾವುದಕ್ಕೂ ಚಿಂತೆ ಮಾಡದ ಗುಣ. ಜಾತಿ ತಾರತಮ್ಯ ಮಾಡಿದ್ದನ್ನು ನಾನೆಂದೂ ಕಂಡಿಲ್ಲ. ಹಲವು ಬಾರಿ ಅವರಿಗೆ ರಾಜ್ಯಸಭಾ ಟಿಕೆಟ್ ತಪ್ಪಿದರೂ ತಲೆ ಕಡಿಸಿಕೊಂಡವರಲ್ಲ.

ಅವರು ಎಂಎಲ್‌ಎ ಆಗದಿದ್ದಾಗಲೂ ವಿಧಾನಸೌಧಕ್ಕೆ ಹೋದರೆ ಅವರಿಗೆ ತುಂಬ ಬೆಲೆ ಇರುತ್ತಿತ್ತು. ದೇವರಾಜ ಅರಸು ಅವರಿಂದ ಹಿಡಿದು ಇಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರವರೆಗೆ ಎಲ್ಲ ಮುಖ್ಯ ಮಂತ್ರಿಗಳೂ ಅವರಿಗೆ ಆಪ್ತರೇ.

ತಮಗೆ ಕಂಡದ್ದನ್ನು ಕಂಡ ಹಾಗೆ ಹೇಳುವ ಜಾಯಮಾನದವರಾದ ಶಿವಶಂಕರಪ್ಪನವರು ಎಂದೂ ಒಳಗೊಂದು ಹೊರಗೊಂದು ಮಾಡಿದವರಲ್ಲ. ದಾನ ಧರ್ಮಗಳಿಗೆ ಹಿಂದೆ ಬಿದ್ದವರಲ್ಲ. ಬಡವರ ಕಷ್ಟಗಳಿಗೆ ಕರಗುವ ಅವರು ಬಡವರ ಬೆವರಿನ ಬೆಲೆ ಅರಿತವರು. 90ರ ಈ ವಯಸ್ಸಿನಲ್ಲೂ ಅವರ ಜೀವನೋತ್ಸಾಹ ಸ್ವಲ್ಪ ಕೂಡ ಕಡಿಮೆಯಾಗಿಲ್ಲ.

ದಾವಣಗೆರೆಯ ಅಭಿವೃದ್ಧಿಗೆ ಅವರು ಮತ್ತು ಅವರ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ್ ಕೊಡುಗೆ ಅಪಾರ. ಅಭಿವೃದ್ಧಿಯ ಹರಿಕಾರ ಎಂಬುದು ಅವರ ಪಾಲಿಗೆ ಕೇವಲ ಮಾತಾಗಿ ಉಳಿದಿಲ್ಲ. ಬೇರೆ ಪಕ್ಷಗಳಿಂದ ಉಪಮುಖ್ಯ ಮಂತ್ರಿ ಸ್ಥಾನದ ಆಮಿಷ ಬಂದರೂ ಕಾಂಗ್ರೆಸ್ ಪಕ್ಷ ನಿಷ್ಠೆಯನ್ನು ಅವರು ಎಂದೂ ಬಿಟ್ಟವರಲ್ಲ. ಹೀಗಾಗಿ ಅವರ ಸುದೀರ್ಘ ರಾಜಕೀಯ ಪಯಣದಲ್ಲಿ ಎಲ್ಲಿಯೂ ಕಪ್ಪುಚುಕ್ಕೆ, ಕುಂದು ಕಂಡುಬಂದಿಲ್ಲ. ಶಿವಶಂಕರಪ್ಪ ಅವರದು ನಡೆ ಶುದ್ಧ, ನುಡಿ ಶುದ್ಧ. ಒಂದು ರೀತಿಯಲ್ಲಿ ನಿಜವಾದ ಅಮೃತ ಪುರುಷರು ಅವರು.

ಅವರು ನುಡಿದಂತೆ ನಡೆಯುವವರು ಎಂಬುದಕ್ಕೆ ದಾವಣಗೆರೆ ಜನತೆಗೆ ಉಚಿತವಾಗಿ ಲಸಿಕೆ ತರಿಸಿಕೊಟ್ಟದ್ದೇ ದೊಡ್ಡ ಸಾಕ್ಷಿ. ನಾಲ್ಕೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ 60 ಸಾವಿರ ಜನರಿಗೆ ಈಗ ಲಸಿಕೆ ಹಾಕಿಸುತ್ತಿದ್ದು, ಶೀಘ್ರದಲ್ಲೇ ಮತ್ತಷ್ಟು ಲಸಿಕೆ ತರಿಸಲಿದ್ದಾರೆ. ರಾಜಕೀಯಕ್ಕಿಂತ ಜನರ ಜೀವ ಉಳಿಸುವುದು ಮುಖ್ಯ ಎಂದು ಭಾವಿಸಿರುವ ಅವರು ದಾವಣಗೆರೆ ಜನರ ಪಾಲಿಗೆ ಲಸಿಕೆ ಎಂಬ ಜೀವಾಮೃತವನ್ನು ಹಂಚಿದ ಧೀಮಂತ ಪ್ರಜಾಪಾಲಕರಾಗಿದ್ದಾರೆ.

ಕುಟುಂಬದ ವಿಚಾರದಲ್ಲೂ ಅವರು ಅದೃಷ್ಟವಂತರು. ಮಕ್ಕಳು, ಅಳಿಯಂದಿರು, ಸೊಸೆಯಂದಿರು ಎಲ್ಲರೂ ಇವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದು, ಇವರದು ಸಂತೃಪ್ತ ಜೀವನ ಎನ್ನಬಹುದು. ಶ್ರೀಯುತರು ಖಂಡಿತ ನೂರು ವರ್ಷ ದಾಟಿ ಮುನ್ನಡೆಯುತ್ತಾರೆ. ಅದನ್ನು ಕಣ್ತುಂಬ ನೋಡುವ ಭಾಗ್ಯ ನಮ್ಮದಾಗಲಿ ಎಂದು ಹಾರೈಸುತ್ತೇನೆ.

(ಲೇಖಕರು ಹಿರಿಯ ಲೆಕ್ಕಪರಿಶೋಧಕರು)



ಕಳೆದ ವರ್ಷ ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಬಡವರಿಗೆ ಮೊಟ್ಟೆ ವಿತರಿಸಿದ್ದರು.



ದಾವಣಗೆರೆಯಲ್ಲಿ ರಂಜಾನ್ ಸಮಯದಲ್ಲಿ ಮುಸ್ಲಿಂ ಸಮುದಾಯದವರು ಹಮ್ಮಿಕೊಂಡಿದ್ದ ಇಫ್ತಾರ್ ಕೂಟದಲ್ಲಿ ಪಾಲ್ಗೊಂಡಿದ್ದ ಶಾಸಕ ಶಾಮನೂರು ಶಿವಶಂಕರಪ್ಪ



ದಾವಣಗೆರೆಯ ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನಲ್ಲಿ ಕೋವಿಡ್ ಪರೀಕ್ಷೆ ನಡೆಸುವ ಪ್ರಯೋಗಾಲಯವನ್ನು ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ ಉದ್ಘಾಟಿಸಿದರು.



ದಾವಣಗೆರೆಯ ಹದಡಿಯಲ್ಲಿ ನಡೆದ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಚಾಲನೆ ನೀಡಿದ ಕ್ಷಣ.



ಶಾಮನೂರು ಶಿವಶಂಕರಪ್ಪ ಅವರ ಜನ್ಮದಿನದಂದು ಪುತ್ರ ಎಸ್.ಎಸ್. ಮಲ್ಲಿಕಾರ್ಜುನ ಅವರು ಕೇಕ್ ತಿನ್ನಿಸಿದರು. ಡಾ.ಪ್ರಭಾ ಮಲ್ಲಿಕಾರ್ಜುನ ಇದ್ದಾರೆ.



ಕಳೆದ ವರ್ಷ ಲಾಕ್‌ಡೌನ್ ಸಮಯದಲ್ಲಿ ಸಂತ್ರಸ್ತರಿಗೆ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಫುಡ್ ಕಿಟ್ ವಿತರಿಸಿದರು.

‘ಕೊರೊನಾ ವೈರಸ್‌ನ ಡೆಲ್ಟಾ ಪ್ಲಸ್ ತಳಿ ಕಳವಳಕಾರಿಯಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌ಗೆ ಕಾರಣವಾಗುವ ‘ಸಾರ್ಸ್–ಕೋವ್–2’ ವೈರಸ್‌ನ ನೂತನ ‘ಡೆಲ್ಟಾ ಪ್ಲಸ್’ ತಳಿ ಬಗ್ಗೆ ಸದ್ಯಕ್ಕೆ ಕಳವಳಪಡುವ ಅಗತ್ಯವಿಲ್ಲ. ವೈರಸ್‌ನ ಈ ತಳಿ ಎಷ್ಟು ಮಾರಕ ಹಾಗೂ ಇದರ ಪ್ರಸರಣದ ತೀವ್ರತೆ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ.ವಿನೋದ್ ಪೌಲ್ ಮಂಗಳವಾರ ಹೇಳಿದ್ದಾರೆ.

‘ಸದ್ಯಕ್ಕೆ ಈ ತಳಿಯನ್ನು ‘ಕುತೂಹಲಕಾರಿ’ ಎನ್ನಲಾಗಿದ್ದು, ಕಳವಳಕಾರಿ ಎಂಬುದಾಗಿ ವರ್ಗೀಕರಣ ಮಾಡಿಲ್ಲ. ಸದ್ಯ ಲಭ್ಯವಿರುವ ವರದಿಗಳ ಪ್ರಕಾರ, ದೇಶದಲ್ಲಿ ಈ ತಳಿಯ 8 ಸೋಂಕಿನ ಪ್ರಕರಣಗಳು ಮಾತ್ರ ಕಂಡು ಬಂದಿವೆ’ ಎಂದು ಅವರು ಹೇಳಿದ್ದಾರೆ.

ಕೊರೊನಾ ವೈರಸ್‌ನ ನೂತನ ತಳಿಯನ್ನು ‘ಡೆಲ್ಟಾ ಪ್ಲಸ್’ ಅಥವಾ ‘ಎವೈ.1’ ಎಂದು ಹೆಸರಿಸಲಾಗಿದೆ.

ಬಿಬಿಎಂಪಿ: ಕೋವಿಡ್ ಲಾಕ್‌ಡೌನ್: ಎರಡನೇ ಹಂತದ ತೆರವು– ಎಚ್ಚರಿಕೆ ಅಗತ್ಯ

‘ದೇವಸ್ಥಾನ ಪ್ರವೇಶ, ಮದುವೆ ನಿರ್ಬಂಧ ಸಡಿಲಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆಯನ್ನು ಹದ್ದುಬಸ್ತಿಗೆ ತರಲು ಜಾರಿಗೊಳಿಸಿರುವ ಲಾಕ್‌ಡೌನ್ ತೆರವಿನ ಎರಡನೇ ಹಂತದಲ್ಲಿ ದೇವಸ್ಥಾನಗಳ ಮುಕ್ತ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ಬಗ್ಗೆ ಹಾಗೂ ಮದುವೆ ಸಮಾರಂಭಗಳ ಮೇಲಿನ ನಿಯಂತ್ರಣ ಕ್ರಮಗಳ ಸಡಿಲಿಕೆ ಬಗ್ಗೆ ಬಿಬಿಎಂಪಿ ಸಹಮತ ಹೊಂದಿಲ್ಲ.

‘ಹಿಂದಿನ ಅನುಭವ ಆಧರಿಸಿ ಹೇಳುವುದಾದರೆ ದೇವಸ್ಥಾನಗಳಲ್ಲಿ ಹಾಗೂ ಮದುವೆ ಸಮಾರಂಭಗಳಲ್ಲಿ ಸೋಂಕು ಹರಡುವ ಸಾಧ್ಯತೆ ಹೆಚ್ಚು ಇದೆ. ಇವುಗಳಿಗೆ ಅವಕಾಶ ಕಲ್ಪಿಸುವ ಮುನ್ನ ತಜ್ಞರ ಅಭಿಪ್ರಾಯ ಪಡೆದು ಕ್ರಮ ಕೈಗೊಳ್ಳುವ ಅವಶ್ಯಕತೆ ಇದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಲಾಕ್‌ಡೌನ್ ಅನ್ನು ಇನ್ನಷ್ಟು ಸಡಿಲಗೊಳಿಸುವ ಸಮಯ ಬಂದಿದೆ. ಯಾವೆಲ್ಲ ನಿರ್ಬಂಧಗಳನ್ನು ಸಡಿಲಗೊಳಿಸಬೇಕು ಎಂಬ ಬಗ್ಗೆ ಸರ್ಕಾರ ಮಟ್ಟದಲ್ಲಿ ಚಿಂತನೆ ನಡೆಯುತ್ತಿದೆ. ಜೀವನಾವಶ್ಯಕ ವಸ್ತುಗಳ ಖರೀದಿಗೆ ಅವಕಾಶ ಕಲ್ಪಿಸುವ ಅಗತ್ಯವಿದೆ. ಕಾರ್ಖಾನೆಗಳಿಗೆ, ನಿರ್ಮಾಣ ಕಾರ್ಯಗಳಿಗೆ ಅಗತ್ಯವಿರುವ ಸಾಮಗ್ರಿ ಖರೀದಿಗೆ ಪೂರ್ತಿ ಅವಕಾಶ ಕಲ್ಪಿಸುವ ಚಿಂತನೆ ಇದೆ. ಆಯ್ದ ವಲಯಗಳಿಗೆ ಮಾತ್ರ ಪೂರ್ತಿ ನಿರ್ಬಂಧ ಸಡಿಲಿಕೆ ಮೂಲಕ ಹಂತ ಹಂತವಾಗಿ ಲಾಕ್‌ಡೌನ್ ತೆರವುಗೊಳಿಸಲಿದ್ದೇವೆ’ ಎಂದರು.



ಗೌರವ್ ಗುಪ್ತಾ

‘ಅಂಗಡಿ ಮಳಿಗೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಿಸುವುದಕ್ಕೆ ಲಾಕ್‌ಡೌನ್ ತೆರವಿನ ಮುಂದಿನ ಹಂತದಲ್ಲಿ ಅವಕಾಶ ಕೊಡಬೇಕು. ಎಲ್ಲ ರೀತಿಯ ಮಳಿಗೆಗಳನ್ನು ತೆರೆಯಲು ಒಮ್ಮೆಲೇ ಅವಕಾಶ ಕಲ್ಪಿಸಿದರೆ ಪರಿಸ್ಥಿತಿ ನಿಯಂತ್ರಣ ತಪ್ಪಲಿದೆ. ವಾಸ್ತವಿಕ ಅಂಶಗಳನ್ನು ಆಧರಿಸಿ ಕ್ರಮಕೈಗೊಳ್ಳುವ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟರು.

‘ಸದ್ಯ ಹೋಟೆಲ್‌ಗಳಲ್ಲಿ ಪಾರ್ಸೆಲ್‌ಗೆ ಮಾತ್ರ ಅವಕಾಶ ಇದೆ. ದರ್ಶಿನಿಗಳು, ಸಣ್ಣಪುಟ್ಟ ಹೋಟೆಲ್‌ಗಳನ್ನು ತೆರೆಯಲು ಹಾಗೂ ಅಲ್ಲೇ ಊಟ ಮಾಡಲು ಅವಕಾಶ ಕೊಡಬೇಕು ಎಂಬ ಬೇಡಿಕೆ ಇರುವುದು ನಿಜ. ಆದರೆ, ಕೋವಿಡ್ ಸೋಂಕು ಹರಡುತ್ತಿರುವುದರಿಂದ, ಅದರಿಂದಾಗುವ ಅಪಾಯವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಸಾರ್ವಜನಿಕರ ಆರೋಗ್ಯ ಕಾಪಾಡುವ ಬಗ್ಗೆಯೂ ಎಚ್ಚರ ವಹಿಸಬೇಕು. ಅದೇ ವೇಳೆ ಬಡವರಿಗೆ ಊಟ ಒದಗಿಸಬೇಕಾಗಿದೆ. ಈ ಸಲುವಾಗಿ ಇಂದಿರಾ ಕ್ಯಾಂಟೀನ್‌ಗಳ ಮೂಲಕ ಆಹಾರ ಪೊಟ್ಟಣಗಳನ್ನು ಉಚಿತವಾಗಿ ವಿತರಿಸುತ್ತಿದ್ದೇವೆ’ ಎಂದರು.

ಮಾರುಕಟ್ಟೆಗಳಲ್ಲಿ ವಹಿವಾಟಿಗೆ ಅವಕಾಶ ಕಲ್ಪಿಸುವ ಕುರಿತು ಪ್ರತಿಕ್ರಿಯಿಸಿದ ಗೌರವ್ ಗುಪ್ತ, ‘ಲಾಕ್‌ಡೌನ್ ತೆರವಿನ ಎರಡನೇ ಹಂತದಲ್ಲಿ ಮಾರುಕಟ್ಟೆಗಳಲ್ಲಿನ ಮಳಿಗೆಗಳು ವಹಿವಾಟು ನಡೆಸಲು ಅವಕಾಶ ಕಲ್ಪಿಸಿದರೆ ಅವು ಜನದಟ್ಟಣೆ ಪ್ರದೇಶವಾಗಿ ಮಾರ್ಪಡುತ್ತದೆ. ಒಂದೇ ಕಡೆ ಜನ ಸೇರಿದರೆ ಮತ್ತೆ ಸಮಸ್ಯೆ ಆಗುತ್ತದೆ’ ಎಂದರು.

‘ಮಾಲ್‌ಗಳು, ಜಿಮ್‌ಗಳೂ ಜೀವನಕ್ಕೆ ಅವಶ್ಯಕ. ಆದರೆ, ಅವುಗಳಿಗೆ ನಿರ್ಬಂಧ ವಿಧಿಸದೇ ಒಮ್ಮೆಲೇ ತೆರೆಯಲು ಅನುವು ಮಾಡಿಕೊಟ್ಟರೆ ಸೋಂಕು ಹರಡುವಿಕೆ ಹೆಚ್ಚುವ ಅಪಾಯ ಇದೆ. ಈ ಬಗ್ಗೆ ಉನ್ನತ ಮಟ್ಟದಲ್ಲಿ ಚರ್ಚೆ ನಡೆಸಿದ ಬಳಿಕ ಸರ್ಕಾರವೇ ನಿರ್ಧಾರ ಕೈಗೊಳ್ಳಲಿದೆ’ ಎಂದು ಅವರು ಸ್ಪಷ್ಟಪಡಿಸಿದರು.

‘ಅನವಶ್ಯಕ ಸೌಕರ್ಯ ಕಡಿತ’

‘ನಮ್ಮಲ್ಲಿ ಕೆಲ ತಿಂಗಳ ಹಿಂದೆ ಅವಶ್ಯಕತೆಗೆ ತಕ್ಕಂತೆ ವಾರ್ ರೂಂಗಳು, ಶವ ಸಾಗಾಟ ವಾಹನಗಳು ಹಾಗೂ ಆಂಬ್ಯುಲೆನ್ಸ್‌ಗಳ ಸಂಖ್ಯೆ ಹೆಚ್ಚಿಸಿದ್ದೆವು. ಇವುಗಳಲ್ಲಿ ಅನವಶ್ಯಕವಾಗಿರುವ ಕೆಲವು ಸೌಕರ್ಯಗಳನ್ನು ಕಡಿತಗೊಳಿಸುತ್ತೇವೆ. ಆದರೆ, ಚಿಕಿತ್ಸಾ ನಿರ್ಧಾರ ಕೇಂದ್ರಗಳನ್ನು (ಟ್ರಯಾಜಿಂಗ್ ಸೆಂಟರ್) ಮುಂದುವರಿಸುತ್ತೇವೆ. ಕೋವಿಡ್ ಮೂರನೇ ಅಲೆ ಕಾಣಿಸಿಕೊಂಡರೆ ಅದನ್ನು ನಿಯಂತ್ರಿಸಲು ಏನೆಲ್ಲ ಸೌಕರ್ಯಗಳ ಅಗತ್ಯ ಇರುತ್ತದೆಯೋ, ಅವುಗಳನ್ನು ಮುಂದುವರಿಸುತ್ತೇವೆ. ಮುಂಜಾಗ್ರತಾ ರೂಪದಲ್ಲಿ ಅವುಗಳಿಗೆ ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿಯನ್ನು ನಿಯೋಜಿಸಬೇಕಾಗುತ್ತದೆ’ ಎಂದು ಗೌರವ್ ಗುಪ್ತ ತಿಳಿಸಿದರು.



ಬದುಕು...

ಲಾಕ್‌ಡೌನ್ ಸಡಿಲಿಸಿರುವ ಕಾರಣ ವ್ಯಾಪಾರಿಯೊಬ್ಬರು ದ್ವಿಚಕ್ರ ವಾಹನದ ಮುಂಭಾಗದಲ್ಲಿ ಪತ್ನಿಯನ್ನು ಕೂರಿಸಿಕೊಂಡು ಬೆಂಗಳೂರಿಗೆ ಬರುತ್ತಿರುವ ದೃಶ್ಯ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಹತ್ತಿರ ಮಂಗಳವಾರ ಕಂಡುಬಂತು - ಪ್ರಜಾವಾಣಿ ಚಿತ್ರ/ ರಂಜು ಪಿ.

ಕೋವಿಡ್ ಯೋಧರಿಗೆ ಬಿಎಸ್‌ವೈ ತಾಯ್ತನದ ಸಾಂತ್ವನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹೆಸರೆತ್ತಲು ಜನ ಭೀತಿ ಪಡುತ್ತಿದ್ದರೆ ಅಂತಹವರ ಸ್ವ್ಯಾಬ್ ತೆಗೆದು, ಇಂಜೆಕ್ಷನ್ ಕೊಟ್ಟು, ವೆಂಟಿಲೇಟರ್ ಹಾಕುವ ಕೆಲಸದಲ್ಲಿ ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು ಜೀವ ಕಾಪಾಡಿದವರು ಆರೋಗ್ಯ ಸಿಬ್ಬಂದಿಗಳಾದ ವೈದ್ಯರು, ನರ್ಸ್‌ಗಳು. ಅವರ ಜತೆ ಜತೆಗೆ ದುಡಿದವರು ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು.

ಸದಾ ಸೋಂಕಿತರ ಆರೈಕೆಯಲ್ಲಿ ಇರುವ ಕಾರಣ ಈ ಸಿಬ್ಬಂದಿಯೊಂದಿಗೆ ಬೆರೆಯಲು ಜನ ಭಯಪಡುತ್ತಿದ್ದಾರೆ. ಅಂಥವರ ಜತೆ ವಿಡಿಯೊ ಸಂವಾದ ನಡೆಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ನಿಮ್ಮೊಂದಿಗೆ ಸರ್ಕಾರ ಇದೆ ಎಂಬ ಧೈರ್ಯ ತುಂಬಿದ್ದಾರೆ.

ಕೋವಿಡ್ ಆರಂಭ ಆದಾಗಿನಿಂದ ನಿರಂತರವಾಗಿ ದಣಿದಿದ್ದ ವೈದ್ಯಕೀಯ ಸಿಬ್ಬಂದಿಯನ್ನು ತಾವೇ ಮಾತನಾಡಿಸಿ ಅವರ ಹೃದಯ ಮುಟ್ಟುವ ಕೆಲಸವನ್ನು ಮುಖ್ಯಮಂತ್ರಿ ಮಾಡಿದರು.

ಅಪಾಯವನ್ನೂ ಲೆಕ್ಕಿಸದೆ ಸೋಂಕಿತರ ಶುಶ್ರೂಷೆಯಲ್ಲಿ ನಿರತರಾದವರನ್ನು ನಗುಮುಖದೊಂದಿಗೆ ಮಾತನಾಡಿಸಿ ಅವರ ಕಷ್ಟ, ಕಾರ್ಪಣ್ಯಗಳನ್ನು ಮುಕ್ತ ಮನಸಿನಿಂದ ಆಲಿಸಿದರು. ಅಷ್ಟೇ ಅಲ್ಲದೇ, ‘ನಿಮ್ಮ ಸುರಕ್ಷತೆಗೆ ವಹಿಸಿರುವ ಎಚ್ಚರಿಕೆ ಏನು‘ ಎಂದು ಕೇಳಿ ತಿಳಿದುಕೊಂಡರು. ‘ಲಸಿಕೆ ಪಡೆದಿದ್ದೀರಾ, ನಿಮ್ಮ ಪ್ರಾಣವೂ ನಮಗೆ ಮುಖ್ಯ’ ಎಂದು ಹೇಳುವ ಮೂಲಕ ಅವರಲ್ಲಿ ಚೈತನ್ಯ ತುಂಬಿದರು.

‘ಸದಾ ಕೋವಿಡ್ ರೋಗಿಗಳ ಜೊತೆಯೇ ಇದ್ದು ಆರೈಕೆ ಮಾಡಿದ್ದೀರಿ. ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿ ರಾಜ್ಯದ ಅಮೂಲ್ಯ ಆಸ್ತಿ. ನಿಮ್ಮ ಕರ್ತವ್ಯ ಅನುಕರಣೀಯ’ ಎಂದು ಬಣ್ಣಿಸಿ ಅವರಲ್ಲಿ ಹೊಸ ಹುರುಪು ತುಂಬುವ ಕೆಲಸ ಮಾಡಿದರು.

ಸೇವೆ ಸಂದರ್ಭದಲ್ಲಿ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಸಂವಾದ ವೇಳೆ ನೇರವಾಗಿ ಪ್ರಶ್ನಿಸಿದ ಮುಖ್ಯಮಂತ್ರಿ, ‘ಕೋವಿಡ್ ಸಂದರ್ಭ ತಂದೊಡ್ಡಿರುವ ಸವಾಲುಗಳನ್ನು ಮಾನವೀಯ ನೆಲೆಗಟ್ಟಿನಲ್ಲಿ ಸಮರ್ಥವಾಗಿ ಎದುರಿಸಬೇಕಿದೆ. ಲಭ್ಯವಿರುವ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ, ಪಾರದರ್ಶಕತೆಯಿಂದ ಬಳಸುವ ಅಗತ್ಯವಿದೆ’ ಎಂದು ಅವರಲ್ಲಿ ಕರ್ತವ್ಯದ ಜವಾಬ್ದಾರಿಯನ್ನೂ ಹೆಚ್ಚಿಸಿದರು.

ಮನೆಗೆ ಬನ್ನಿ ಎಂದು ಆಮಂತ್ರಣ ಕೊಟ್ಟ ಸಿ.ಎಂ

ಅಂಗನವಾಡಿ ಕಾರ್ಯಕರ್ತೆಯಾದ ಬೆಳಗಾವಿ ಜಿಲ್ಲೆ ಬೈಲಹೊಂಗಲದ ಮಂಜುಳಾ ಸಂಗಮೇಶ್ ಅವರನ್ನು ‘ಬೆಂಗಳೂರಿಗೆ ಬಂದಾಗ ಮನೆಗೆ ಬಂದು ಆತಿಥ್ಯ ಸ್ವೀಕರಿಸಿ’ ಎಂದು ಕರೆಯುವ ಮೂಲಕ ಯಡಿಯೂರಪ್ಪ ತಾಯಿ ಹೃದಯ ಮೆರೆದರು.

‘ಕುಟುಂಬದ ಎಲ್ಲಾ ನಾಲ್ವರಿಗೂ ಕೋವಿಡ್ ಸೋಂಕು ತಗುಲಿತ್ತು. ನಾಲ್ವರೂ ಚಿಕಿತ್ಸೆ ಪಡೆದೆವು. ಅತ್ತೆ ಸೇರಿ ಮೂವರೂ ಹುಷಾರಾಗಿ ಮನೆಗೆ ಬಂದೆವು. ಆದರೆ ಪತಿ ಸಾವಿಗೀಡಾದರು’ ಎಂದು ಗಿರಿಜಾ ಅವರು ಹೇಳಿದಾಗ ಮುಖ್ಯಮಂತ್ರಿ ಅವರ ಕಣ್ಣಾಲಿ ಒದ್ದೆಯಾದವು. ಬಳಿಕ, ಮಂಜುಳಾ ಅವರಿಗೆ ಸಾಂತ್ವನ ಹೇಳಿದ ಮುಖ್ಯಮಂತ್ರಿ ಅವರಿಗೆ ಧೈರ್ಯ ತುಂಬಿದರು.

ಕೋವಿಡ್: 5 ಸಾವಿರಕ್ಕೆ ಇಳಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ ಸಂಜೆ 5ರವರೆಗಿನ ಹಿಂದಿನ 24 ಗಂಟೆಗಳ ಅವಧಿಯಲ್ಲಿ 5,041 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಇವು ಎರಡೂವರೆ ತಿಂಗಳ ಅವಧಿಯಲ್ಲಿ ವರದಿಯಾದ ಕನಿಷ್ಠ ಪ್ರಕರಣಗಳಾಗಿವೆ.

ಸೋಂಕು ದೃಢ ಪ್ರಮಾಣವು ಶೇ 3.80ಕ್ಕೆ ಇಳಿಕೆಯಾಗಿದೆ. ಹೊಸ ಪ್ರಕರಣಗಳು ಬೀದರ್ (2) ಹಾಗೂ ರಾಯಚೂರಿನಲ್ಲಿ (5) ಕನಿಷ್ಠ ಸಂಖ್ಯೆ ವರದಿಯಾಗಿದ್ದು, ಬಾಗಲಕೋಟೆ, ಬೆಳಗಾವಿ, ಕೊಡಗು ಸೇರಿದಂತೆ 14 ಜಿಲ್ಲೆಗಳಲ್ಲಿ ಎರಡಂಕಿಗೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 985 ಮಂದಿ ಹಾಗೂ ಹಾಸನದಲ್ಲಿ 522 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ವರದಿಯಾಗಿವೆ.

ಈ ತಿಂಗಳು 15 ದಿನಗಳಲ್ಲಿ 1.72 ಲಕ್ಷ ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 27.77 ಲಕ್ಷ ದಾಟಿದೆ. ಕೊರೊನಾ ಸೋಂಕಿತರಲ್ಲಿ 115 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಸುಮಾರು 2 ತಿಂಗಳ ಅವಧಿಯಲ್ಲಿ ವರದಿಯಾದ ಕನಿಷ್ಠ ಮರಣ ಪ್ರಕರಣಗಳು ಇವಾಗಿವೆ. ಆದರೆ, ಮರಣ ಪ್ರಮಾಣ ದರವು ಶೇ 2.28ಕ್ಕೆ ಏರಿಕೆಯಾಗಿದೆ.

ರಾಜ್ಯದ 23 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ 26 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 16 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ.

ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 33,148ಕ್ಕೆ ತಲುಪಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 1.62 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 14,785 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 25.81 ಲಕ್ಷ ದಾಟಿದೆ.

ವಿದೇಶ ಪ್ರಯಾಣ: 28 ದಿನಕ್ಕೆ ಎರಡನೇ ಡೋಸ್

ವಿದ್ಯಾಭ್ಯಾಸ ಹಾಗೂ ಉದ್ಯೋಗ ಸಂಬಂಧ ವಿದೇಶಕ್ಕೆ ತೆರಳುವ ಅಭ್ಯರ್ಥಿಗಳಿಗೆ 28 ದಿನಗಳ ಬಳಿಕ ‘ಕೋವಿಶೀಲ್ಡ್’ ಲಸಿಕೆಯ ಎರಡನೇ ಡೋಸ್ ನೀಡಲಾಗುತ್ತದೆ.

ಈ ಬಗ್ಗೆ ಕ್ರಮಕೈಗೊಳ್ಳುವಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಅವರು ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಸದ್ಯ ವಿದೇಶಕ್ಕೆ ತೆರಳುವವರಿಗೆ 12ರಿಂದ 16 ವಾರಗಳ ಅಂತರದಲ್ಲಿಯೇ ‘ಕೋವಿಶೀಲ್ಡ್’ ಲಸಿಕೆಯ ಎರಡನೇ ಡೋಸ್ ನೀಡಲಾಗುತ್ತಿತ್ತು. ಇದರಿಂದ ವಿದೇಶಕ್ಕೆ ತೆರಳುವವರಿಗೆ ಸಮಸ್ಯೆಯಾಗಿತ್ತು.

‘ವಿದೇಶಕ್ಕೆ ತೆರಳುವ ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ಅಂತರರಾಷ್ಟ್ರೀಯ ಮಟ್ಟದ ಒಲಿಂಪಿಕ್ಸ್‌ಗಾಗಿ ಟೋಕಿಯೊಗೆ ತೆರಳುವ ಕ್ರೀಡಾಪಟುಗಳಿಗೆ 28 ದಿನಗಳ ಬಳಿಕ ಲಸಿಕೆ ಒದಗಿಸಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯ ನಿರ್ದೇಶನ ನೀಡಿದೆ.

ಸ್ವಯಂ ಘೋಷಣಾ ಪ್ರಮಾಣ ಪತ್ರದಲ್ಲಿ ಅಭ್ಯರ್ಥಿನೀಡುವ ಮಾಹಿತಿಯನ್ನು ಪಡೆದು, ದಾಖಲೆಗಳನ್ನು ಪರಿಶೀಲಿಸಿ, ದೃಢೀಕರಣ ಪತ್ರ ನೀಡಬೇಕು. ಅದನ್ನು ಕೋವಿನ್ ಪೋರ್ಟಲ್‌ನಲ್ಲಿ ಅಪ್‌ಡೇಟ್ ಮಾಡಬೇಕು’ ಎಂದು ತಿಳಿಸಿದ್ದಾರೆ.

‘ಮೊದಲ ಡೋಸ್ ಲಸಿಕೆ ಪಡೆಯುವಾಗ ನೋಂದಣಿಗಾಗಿ ಪಾಸ್‌ಪೋರ್ಟ್ ನಂಬರ್ ನೀಡದಿದ್ದ ಫಲಾನುಭವಿಗಳು ಎರಡನೇ ಡೋಸ್ ಪಡೆಯಲು ಲಸಿಕೆ ಪ್ರಮಾಣಪತ್ರವನ್ನು ಒದಗಿಸಬೇಕು’ ಎಂದು ಸೂಚಿಸಿದ್ದಾರೆ.

‘ಕೋವಿರಕ್ಷಾ’ ಉತ್ಪನ್ನ ಬಿಡುಗಡೆ

ಬೆಂಗಳೂರು: ನೂತನ್ ಲ್ಯಾಬ್ಸ್ ಕಂಪನಿಯು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ‘ಕೋವಿರಕ್ಷಾ’ ಉತ್ಪನ್ನವನ್ನು ಮಂಗಳವಾರ ಬಿಡುಗಡೆ ಮಾಡಲಾಯಿತು.

‘14 ತಿಂಗಳ ಅಧ್ಯಯನ ಹಾಗೂ ಪರಿಶ್ರಮದಿಂದ ಈ ಉತ್ಪನ್ನ ಅಭಿವೃದ್ಧಿಪಡಿಸಿದ್ದೇವೆ. ಇದಕ್ಕಾಗಿ ದೇಶದ ಪ್ರಮುಖ ಸಂಶೋಧನಾ ಸೌಲಭ್ಯ ಹಾಗೂ ಪರಿಣತರ ನೆರವು ಪಡೆಯಲಾಗಿದೆ. ಹಿಂದಿನ ಮೂರು ತಿಂಗಳಲ್ಲಿ ರಾಜ್ಯದ 10 ಸಾವಿರಕ್ಕೂ ಹೆಚ್ಚು ಜನರ ಮೇಲೆ ಇದನ್ನು ಪ್ರಯೋಗಿಸಿದ್ದು, ಸಕಾರಾತ್ಮಕ ಫಲಿತಾಂಶ ದೊರೆತಿದೆ. ರಾಜ್ಯ ಆಯುಷ್ ಇಲಾಖೆಯ ಅನುಮೋದನೆಯೂ ಸಿಕ್ಕಿದೆ. ಕೇಂದ್ರದ ಆಯುಷ್ ಇಲಾಖೆಯ ಅನುಮೋದನೆಗೂ ಅರ್ಜಿ ಸಲ್ಲಿಸಿದ್ದೇವೆ’ ಎಂದು ನೂತನ್ ಲ್ಯಾಬ್ಸ್‌ನ ನಿರ್ದೇಶಕ ಹಾಗೂ ವಿಜ್ಞಾನಿ ಎಚ್.ಎಸ್.ನೂತನ್ ತಿಳಿಸಿದರು.

‘ಆಧುನಿಕ ವಿಜ್ಞಾನ ಹಾಗೂ ಭಾರತೀಯ ಪರಂಪರೆಯ ಔಷಧ ಪದ್ಧತಿ ಅನ್ವಯಿಸಿಕೊಂಡು ಈ ಉತ್ಪನ್ನವನ್ನು ಆವಿಷ್ಕರಿಸಿದ್ದೇವೆ. 10 ಎಂ.ಎಲ್. ದ್ರಾವಣವನ್ನೊಳಗೊಂಡ ಒಂದು ಬಾಟಲ್‌ಗೆ ₹300 ಮೊತ್ತ ನಿಗದಿಪಡಿಸಲಾಗಿದೆ. ಇದು ಎಲ್ಲಾ ಔಷಧ ಅಂಗಡಿಗಳಲ್ಲೂ ಲಭ್ಯವಿರಲಿದೆ. ಕೈ, ಮೂಗು, ಗಂಟಲು ಮತ್ತು ಮುಖಗವಸಿನ ಹೊರಭಾಗದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ದ್ರಾವಣ ಲೇಪಿಸಿದರೆ 3 ಗಂಟೆಗಳಿಗೂ ಹೆಚ್ಚು ಕಾಲ ವೈರಾಣುವಿನಿಂದ ರಕ್ಷಿಸುತ್ತದೆ. ಮನೆಯಿಂದ ಹೊರ ಹೋಗುವಾಗ ಇದನ್ನು ಬಳಸಬೇಕು. ಸೋಂಕಿತರೂ ಇದನ್ನು ಉಪಯೋಗಿಸಬಹುದು. ಮಕ್ಕಳಿಗೂ ಇದು ಉಪಯುಕ್ತ’ ಎಂದರು.

ಆರ್‌ಎಸ್‌ಎಸ್‌ನ ದಕ್ಷಿಣ ಮಧ್ಯ ಕ್ಷೇತ್ರೀಯ ಕ್ಷೇತ್ರ ಕಾರ್ಯವಾಹ ನಾ. ತಿಪ್ಪೇಸ್ವಾಮಿ, ನೂತನ್ ಲ್ಯಾಬ್ಸ್‌ನ ಸಲಹೆಗಾರ ವೇಣು ಶರ್ಮಾ, ಐಐಎಸ್‌ಸಿಯ ಡೇನಿಯಲ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ವೂಡೆ ಪಿ.ಕೃಷ್ಣ ಇದ್ದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

11,99,143 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
83,195 ▲	11,00,612 ▲	15,335 ▲

ದಿನದ ಏರಿಕೆ

ಹೊಸ ಪ್ರಕರಣ	985 ▼
ಗುಣಮುಖ	2,818 ▲
ಸಾವು	116 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

‘ಹಸಿರು ಶಿಲೀಂಧ್ರ’ ಸೋಂಕು ಪ್ರಕರಣ ವರದಿ

ಇಂದೋರ್ (ಪಿಟಿಐ): ಕೋವಿಡ್ ಗುಣಮುಖರಾಗಿದ್ದ 34 ವರ್ಷದ ವ್ಯಕ್ತಿಯಲ್ಲಿ ‘ಹಸಿರು ಶಿಲೀಂಧ್ರ’ (ಗ್ರೀನ್ ಫಂಗಸ್) ಸೋಂಕು ಕಾಣಿಸಿಕೊಂಡಿದೆ.

ರೋಗಿಯನ್ನು ಮುಂಬೈನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಇಲ್ಲಿನ ಶ್ರೀ ಅರವಿಂದೊ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ ಎದೆ ರೋಗಗಳ ವಿಭಾಗದ ಮುಖ್ಯಸ್ಥ ಡಾ.ರವಿ ದೋಸಿ ತಿಳಿಸಿದ್ದಾರೆ.

‘ಕೋವಿಡ್‌ನಿಂದ ಗುಣಮುಖರಾದರೂ ಜ್ವರ, ಮೂಗಿನಿಂದ ರಕ್ತಸ್ರಾವ ಕಾಣಿಸಿಕೊಂಡಿತ್ತು. ಕಪ್ಪು ಶಿಲೀಂಧ್ರ ಸೋಂಕು ತಗುಲಿರಬಹುದು ಎಂಬ ಶಂಕೆಯಿಂದ ಪರೀಕ್ಷೆ ಮಾಡಲಾಯಿತು. ಅವರಿಗೆ ‘ಹಸಿರು ಶಿಲೀಂಧ್ರ’ ಸೋಂಕು ತಗುಲಿರುವುದು ದೃಢಪಟ್ಟಿತು’ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಶಾಲಾ ಶುಲ್ಕ ಸಂಘರ್ಷ ಪರಿಹರಿಸಿ ಸಿ.ಎಂಗೆ ಸಿದ್ದರಾಮಯ್ಯ ಪತ್ರ

ಬೆಂಗಳೂರು: ‘ಶುಲ್ಕ ವಿಚಾರದಲ್ಲಿ ಪೋಷಕರು ಮತ್ತು ಶಾಲಾ ಆಡಳಿತ ಮಂಡಳಿಗಳ ನಡುವೆ ಉಂಟಾಗಿರುವ ಸಂಘರ್ಷವನ್ನು ಸರ್ಕಾರ ತಕ್ಷಣ ಪರಿಹರಿಸಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

‘ಶುಲ್ಕವನ್ನು ಸರ್ಕಾರವೇ ನಿರ್ಧರಿಸಬೇಕು. ಈ ನಿರ್ಧಾರ ಜಾರಿಯಾಗುವಂತೆ ಕ್ರಮ ವಹಿಸಬೇಕು. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ತಡೆಹಿಡಿದಿರುವ ವೇತನ ನೀಡಬೇಕು’ ಎಂದೂ ಪತ್ರದಲ್ಲಿ ಆಗ್ರಹಿಸಿದ್ದಾರೆ.

‘ಖಾಸಗಿ ಶಾಲಾ ಆಡಳಿತ ಮಂಡಳಿಗಳು ಬ್ಯಾಂಕ್‌ಗಳಿಗೆ ಪಾವತಿಸಬೇಕಾದ ಕೊರೊನಾ ಅವಧಿಯಲ್ಲಿನ ಸಾಲದ ಮೇಲಿನ ಬಡ್ಡಿ ಮತ್ತಿತರ ವಿಚಾರಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಹೊರೆ ತಗ್ಗಿಸಲು ಕ್ರಮವಹಿಸಬೇಕು. ತರಗತಿಗಳು ನಡೆಯಲಿಲ್ಲವೆಂದು ಖಾಸಗಿ ಶಾಲೆ-ಕಾಲೇಜುಗಳು ಶಿಕ್ಷಕರಿಗೆ ಸಂಬಳವನ್ನು ನೀಡಿಲ್ಲ. ಪೋಷಕರ ಒತ್ತಾಯಕ್ಕೆ ಮಣಿದ ಸರ್ಕಾರ ಕಳೆದ ವರ್ಷ ಬೋಧನಾ ಶುಲ್ಕದಲ್ಲಿ ಶೇ 30ರಷ್ಟು ವಿನಾಯಿತಿ ನೀಡಿ ಆದೇಶ ಹೊರಡಿಸಿತ್ತು. ಆದರೆ, ಈ ಆದೇಶ ಕೂಡಾ ಜಾರಿಗೆ ಬರಲಿಲ್ಲ’ ಎಂದಿದ್ದಾರೆ.

‘ಸಾರಿಗೆ ಶುಲ್ಕ ಸೇರಿ ಇತರೆ ಶುಲ್ಕವನ್ನೂ ಶಾಲೆಗಳು ಕಟ್ಟಿಸಿಕೊಂಡಿವೆ. ಇಂಥ ಸಂದರ್ಭದಲ್ಲಿ ಸರ್ಕಾರ ನಿಷ್ಕ್ರಿಯವಾಗಿ ಕೂರುವುದು ಅಸಾಮರ್ಥ್ಯದ, ಲಾಬಿಗೆ ಮಣಿದಿರುವುದರ ಲಕ್ಷಣ. ಸರ್ಕಾರದ ಆದೇಶಕ್ಕೆ ಕಿಮ್ಮತ್ತು ಕೊಡದ ಖಾಸಗಿ ಶಿಕ್ಷಣ ಸಂಸ್ಥೆಗಳ ಬಗ್ಗೆ ಏನು ಕ್ರಮವಹಿಸಲಾಗಿದೆ. ಪೂರ್ತಿ ಶುಲ್ಕ ಕಟ್ಟಲಾಗದ ಮಕ್ಕಳಿಗೆ ಮುಂದಿನ ತರಗತಿಗಳಿಗೆ ಪ್ರವೇಶ ನೀಡದ ಶಾಲೆಗಳ ವಿಚಾರದಲ್ಲಿ ಏನು ಕ್ರಮ ವಹಿಸಲಾಗಿದೆ ಎಂದು ತಿಳಿಸಬೇಕು’ ಎಂದು ಒತ್ತಾಯಿಸಿದ್ದಾರೆ.



ರಸ್ತೆ, ಪಾದಚಾರಿ ಮಾರ್ಗದಲ್ಲಿ ವಾಹನ ನಿಲ್ಲಿಸಿದರೆ ದಂಡ

ಬೆಂಗಳೂರು: ರಸ್ತೆ ಮತ್ತು ಪಾದಚಾರಿ ಮಾರ್ಗಗಳಲ್ಲಿ ವಾಹನ ನಿಲುಗಡೆ ಮಾಡುವವರ ವಿರುದ್ಧ ಮೋಟಾರು ವಾಹನ ಕಾಯ್ದೆ, ಮೋಟಾರು ವಾಹನ ನಿಯಮ ಮತ್ತು ಕರ್ನಾಟಕ ಪೊಲೀಸ್ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿ, ದಂಡ ವಿಧಿಸುವಂತೆ ಗೃಹ ಇಲಾಖೆ ಮಂಗಳವಾರ ಸುತ್ತೋಲೆ ಹೊರಡಿಸಿದೆ.

ಪಾದಚಾರಿ ಮಾರ್ಗಗಳಲ್ಲಿ ವಾಹನ ನಿಲುಗಡೆ ಮಾಡುವವರಿಗೆ ₹ 500ರಿಂದ ₹ 1,000ದವರೆಗೆ ದಂಡ ವಿಧಿಸಬೇಕು. ರಸ್ತೆಯಲ್ಲಿ ವಾಹನ ನಿಲುಗಡೆ ಮಾಡಿ ಸಂಚಾರಕ್ಕೆ ಅಡ್ಡಿಪಡಿಸುವವರಿಗೆ ಪ್ರತಿ ಗಂಟೆಗೆ ₹ 50ರಂತೆ ದಂಡ ವಿಧಿಸಬೇಕು ಎಂದು ಎಲ್ಲ ಪೊಲೀಸ್ ಕಮಿಷನರ್‌ಗಳು, ಎಸ್‌ಪಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

ಪಾದಚಾರಿ ಮಾರ್ಗಗಳ ಅತಿಕ್ರಮಣ ಪ್ರಶ್ನಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ಬಳಿಕ ಹೈಕೋರ್ಟ್ ನೀಡಿರುವ ಆದೇಶದ ಅನುಸಾರ ಈ ಸುತ್ತೋಲೆ ಹೊರಡಿಸಲಾಗಿದೆ. ಪಾದಚಾರಿ ಮಾರ್ಗಗಳ ಮೇಲೆ ವಾಹನ ನಿಲುಗಡೆ ಮಾಡುವವರು, ರಸ್ತೆ ವಾಹನ ನಿಲ್ಲಿಸುವವರು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಪಾಯಕಾರಿ ರೀತಿಯಲ್ಲಿ ವಾಹನ ನಿಲುಗಡೆ ಮಾಡಿ, ಹೋಗುವವರ ವಿರುದ್ಧ ಕ್ರಮಕ್ಕೆ ಸೂಚಿಸಲಾಗಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.72 ಕೋಟಿ ▲	2.96 ಕೋಟಿ ▲
ಸಕ್ರಿಯ ಪ್ರಕರಣ	1.17 ಕೋಟಿ ▼	8.61 ಲಕ್ಷ ▼
ಗುಣಮುಖ	16.16 ಕೋಟಿ ▲	2.83 ಕೋಟಿ ▲
ಸಾವು	38.32 ಲಕ್ಷ ▲	3.79 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.2 ಲಕ್ಷ ▲	57,678 ▲
ಗುಣಮುಖ	4.59 ಲಕ್ಷ ▲	1.02 ಲಕ್ಷ ▲
ಸಾವು	6,780 ▼	2,489 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅರ್ಜೆಂಟಿನಾ	ಬ್ರೆಜಿಲ್	ಕೊಲಂಬಿಯಾ
21,292	40,865 ▲	24,376 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಅರ್ಜೆಂಟಿನಾ
51.78 ▼	11.12 ▼	3.10 ▼

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.14 ಲಕ್ಷ ▲
ದೆಹಲಿ	24,851 ▲
ತಮಿಳುನಾಡು	30,068 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	59.24 ▲
ಕೇರಳ	27.48 ▲
ತಮಿಳುನಾಡು	23.78 ▲

ಪ್ರಜಾವಾಣಿ ಗ್ರಾಫಿಕ್ಸ್

ಚಿತ್ರಾವಳಿ











1. ಲಾಕ್‌ಡೌನ್ ಸಡಿಲಿಕೆ ಹಿನ್ನೆಲೆಯಲ್ಲಿ ವಲಸೆ ಕಾರ್ಮಿಕರು ನಗರಕ್ಕೆ ಮರಳುತ್ತಿದ್ದು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಎದುರು ಮಂಗಳವಾರ ಪ್ರಯಾಣಿಕರ ದಟ್ಟಣೆ ಕಂಡುಬಂತು
2. ಕೆ.ಆರ್.ವೃತ್ತದ ಬಳಿ ಸಂಚಾರ ದಟ್ಟಣೆ ಕಂಡು ಬಂತು
3. ವಿವಿಧ ಊರುಗಳಿಂದ ನಗರಕ್ಕೆ ವಾಪಸಾಗುವವರನ್ನು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಎದುರು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಯಿತು
4. ಸ್ಯಾಂಕಿ ಕೆರೆಯ ಉದ್ಯಾನದಲ್ಲಿ ಜನರು ವ್ಯಾಯಾಮ, ವಾಯುವಿಹಾರದಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರಗಳು
5. ಗೋವಿಂದರಾಜನಗರ ಕ್ಷೇತ್ರದ ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಚಿವ ವಿ.ಸೋಮಣ್ಣ ಕೋವಿಡ್ ಸೇನಾನಿ ಗಳಿಗೆ ಮಂಗಳವಾರ ದಿನಸಿ ಕಿಟ್ ವಿತರಿಸಿದರು. ರಾಜ್ಯ ಬಿಜೆಪಿ ಯುವ ಮೋರ್ಚಾ ಮುಖಂಡ ಅರುಣ್ ಸೋಮಣ್ಣ, ಪಾಲಿಕೆಯ ಮಾಜಿ ಸದಸ್ಯರಾದ ಕೆ.ಉಮೇಶ್ ಶೆಟ್ಟಿ, ಮೋಹನ್ ಕುಮಾರ್, ವಾಗೀಶ್, ರಾಮಪ್ಪ, ಬಿಜೆಪಿ ಮಂಡಲ ಅಧ್ಯಕ್ಷ ವಿಶ್ವನಾಥಗೌಡ, ಮುಖಂಡ ಉಮಾಶಂಕರ್, ಕೊಳಚೆ ನಿರ್ಮೂಲನೆ ಮಂಡಳಿ ನಿರ್ದೇಶಕ ಕ್ರಾಂತಿರಾಜು ಇದ್ದರು.

ನೊಂದವರಿಗೆ 'ಉಸಿರು' ಹಂಚುತ್ತಿದ್ದ ಸಂಚಾರಿ ವಿಜಯ್

‘ಬಾಲಕಿ ತೀರಿಕೊಂಡಾಗ ಬಿಕ್ಕಿ ಬಿಕ್ಕಿ ಅತ್ತಿದ್ರು’

• ಜಿ.ಶಿವಕುಮಾರ

ಬೆಂಗಳೂರು: ‘ಸಂಚಾರಿ ವಿಜಯ್ ಸಿನಿಮಾದಲ್ಲಷ್ಟೇ ಅಲ್ಲ, ನಿಜ ಜೀವನದಲ್ಲೂ ನಾಯಕರಾಗಿದ್ದರು. ಕೋವಿಡ್‌ನಿಂದಾಗಿ ಜೀವನ್ಮರಣದ ನಡುವೆ ಹೋರಾಡುತ್ತಿದ್ದ 12 ವರ್ಷದ ಹುಡುಗಿಯೊಬ್ಬಳನ್ನು ಉಳಿಸಲು ತುಂಬಾ ಪ್ರಯತ್ನ ಪಟ್ಟಿದ್ದರು. ಸತತ ಮೂರು ದಿನ ಹಗಲು ರಾತ್ರಿ ಎನ್ನದೇ, ಸರಿಯಾಗಿ ಊಟ, ನಿದ್ರೆ ಕೂಡ ಮಾಡದೇ ಓಡಾಡಿದ್ದರು. ಕೊನೆಗೂ ಆ ಹುಡುಗಿ ಬದುಕಲಿಲ್ಲ. ಆಗ ಬಿಕ್ಕಿ ಬಿಕ್ಕಿ ಅತ್ತಿದ್ದರು. ಅವರನ್ನು ನಾವೇ ಸಮಾಧಾನಪಡಿಸಬೇಕಾಗಿತ್ತು’ ...

ಚಿತ್ರ ಸಾಹಿತಿ ಕವಿರಾಜ್ ಹೀಗೆ ಹೇಳುವಾಗ ಅವರ ಮನಸ್ಸು ಭಾರವಾದಂತಿತ್ತು.

‘ನಾವು ‘ಉಸಿರು’ ತಂಡ ಕಟ್ಟಿ ಕೊಂಡು ಕೆಲಸ ಮಾಡುತ್ತಿರುವುದು ಗೊತ್ತಾದ ಬಳಿಕ ಸಂದೇಶ ರವಾನಿಸಿದ್ದ ಅವರು ನನ್ನನ್ನೂ ನಿಮ್ಮ ತಂಡದಲ್ಲಿ ಸೇರಿಸಿಕೊಳ್ಳಿ ಎಂದು ವಿನಮ್ರದಿಂದ ವಿನಂತಿಸಿದ್ದರು. ತಾನು ರಾಷ್ಟ್ರಪ್ರಶಸ್ತಿ ವಿಜೇತ ನಟ ಎಂಬ ಅಹಂ ಅವರಲ್ಲಿ ಕಿಂಚಿತ್ತೂ ಇರಲಿಲ್ಲ. ಆಹಾರದ ಕಿಟ್ ಗಾಗಿ ರಾಜ್ಯದ ವಿವಿಧೆಡೆಯಿಂದ ಕರೆಗಳು ಬರುತ್ತಿದ್ದವು. ಅಲ್ಲಿಗೆ ತಾವೇ ಹೊರಟು ಬಿಡುತ್ತಿದ್ದರು. ನೀವು ಬೇಡ ಬೇರೆ ಯಾರನ್ನಾದರೂ ಕಳಿಸೋಣ ವೆಂದರೂ ಒಪ್ಪುತ್ತಿರಲಿಲ್ಲ. ನಾನೇ ಹೋಗುತ್ತೇನೆ ಎಂದು ಹಟ ಹಿಡಿದು ಬಿಡುತ್ತಿದ್ದರು. ಆಶ್ಚರ್ಯಪಡುವಷ್ಟು ಒಳ್ಳೆಯತನ ಅವರಲ್ಲಿತ್ತು’ ಎಂದು ಸ್ಮರಿಸಿದರು.



ಕವಿರಾಜ್

‘ಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಸದಾ ಹಾತೊರೆಯುತ್ತಿದ್ದರು. ಎಷ್ಟೇ ಹೊತ್ತಾದರೂ ಸರಿ ಅಪರಿಚಿತರ ಮನೆ ಬಾಗಿಲು ತಟ್ಟಿ ಆಹಾರದ ಕಿಟ್ ಕೊಟ್ಟು ಬರುತ್ತಿದ್ದರು. ನಟನೆಯ ಜೊತೆಗೆ ಸಮಾಜ ಸೇವೆಗೂ ತಮ್ಮನ್ನು ಸಮರ್ಪಿಸಿಕೊಂಡಿದ್ದರು. ತಂಡದಲ್ಲಿ ಸಾಮಾನ್ಯ ಕೆಲಸಗಾರನ ಹಾಗೆ ಇದ್ದರು. ಅವರ ಒಳ್ಳೆಯ ಗುಣಗಳನ್ನು ನೋಡಿ ನಾನು ದಂಗಾಗಿದ್ದೆ. ಕಿಟ್‌ಗಳು ಅರ್ಹರ ಕೈ ಸೇರುತ್ತಿಲ್ಲ ಎಂಬ ಭಾವನೆ ಅವರಲ್ಲಿ ಮೂಡಿತ್ತು. ಅದನ್ನು ನಮ್ಮ ಬಳಿ ಹೇಳಿಕೊಂಡಿದ್ದರು. ನಂತರ ನಾವೇ ಬಂಡೀಪುರ, ನಾಗರಹೊಳೆಗೆ ಹೋಗಿ ಅಲ್ಲಿನ ಹಾಡಿಗಳಲ್ಲಿ ವಾಸಿಸುತ್ತಿದ್ದ ಆದಿವಾಸಿಗಳಿಗೆ ಕಿಟ್ ವಿತರಿಸಿದ್ದೆವು’ ಎಂದು ನೆನಪಿಸಿಕೊಂಡರು.

ಪ್ರಜಾವಾಣಿ ವಿಶೇಷ

‘ಆದಿವಾಸಿಗಳ ಮನೆಯ ಮೇಲ್ಛಾವಣಿಗಳು ಕಿತ್ತು ಹೋಗಿರುವುದನ್ನು ಕಂಡು ತುಂಬಾ ನೊಂದಿದ್ದರು. ಅವರ ಮನೆಗಳಿಗೆಲ್ಲಾ ಟಾರ್ಪಾಲಿನ್ ಹಾಕಿಸ ಬೇಕು ಎಂಬ ಆಸೆ ಅವರಿಗಿತ್ತು. ಅದು ಸಾಕಾರಗೊಳ್ಳುವ ಮುನ್ನವೇ ಹೋಗಿಬಿಟ್ಟರು. ಅವರ ಆಸೆ ನಾವು ಈಡೇರಿಸುತ್ತೇವೆ’ ಎಂದರು.



ಮಗುವಿನ ಜೊತೆ ಸಂಚಾರಿ ವಿಜಯ್–ಫೇಸ್‌ಬುಕ್ ಚಿತ್ರ

‘ರಾತ್ರಿ 2 ಅಥವಾ 3 ಗಂಟೆಯೇ ಆಗಿರಲಿ, ಯಾರು ಎಲ್ಲೇ ಕರೆದರೂ ಒಂದಿಷ್ಟೂ ಯೋಚಿಸದೆ ಬೈಕ್ ಅಥವಾ ಕಾರು ಹತ್ತಿ ಹೊರಟೇ ಬಿಡು ತ್ತಿದ್ದರು. ಸಿನಿಮಾವೊಂದಕ್ಕೆ ತಾವು ತೆಗೆದು ಕೊಳ್ಳುವ ಸಂಭಾವನೆಯ ಒಂದಷ್ಟು ಮೊತ್ತವನ್ನು ಸಮಾಜ ಸೇವೆಗಾಗಿಯೇ ಮೀಸಲಿಟ್ಟಿದ್ದರು. ಆ ಕ್ಷಣಕ್ಕೆ ತಮ್ಮ ಬಳಿ ಹಣ ಇಲ್ಲದಿದ್ದರೆ ಸ್ನೇಹಿತರಿಂದ ಪಡೆದು ಕಷ್ಟದಲ್ಲಿದ್ದವರಿಗೆ ಕೊಡುತ್ತಿದ್ದರು. ಅವರು ಅಷ್ಟು ಉದಾರಿ. ಅಂತಹ ಒಳ್ಳೆಯ ವ್ಯಕ್ತಿಯನ್ನು ಭಗವಂತ ಇಷ್ಟು ಬೇಗ ಕರೆದುಕೊಳ್ಳಬಾರದಿತ್ತು’ ಎನ್ನುತ್ತಾ ಸ್ನೇಹಿತರೊಬ್ಬರು ಭಾವುಕರಾದರು.

‘ಕೋವಿಡ್ ಎರಡನೇ ಅಲೆ ವೇಳೆ ಅವರು ಒಂದೇ ಒಂದು ದಿನ ಮನೆಯಲ್ಲಿದ್ದವರಲ್ಲ. ಕೊಡಗು ದುರಂತ ಹಾಗೂ ಉತ್ತರ ಕರ್ನಾಟಕದಲ್ಲಿ ನೆರೆ ಹಾವಳಿಯಿಂದ ಜನ ಸಂಕಷ್ಟಕ್ಕೆ ಸಿಲುಕಿದ್ದಾಗಲೂ ಆಹಾರದ ಕಿಟ್‌ಗಳಿದ್ದ ಕಾರನ್ನು ತಾವೇ ಚಲಾಯಿಸಿಕೊಂಡು ಹೋಗಿ ಅವುಗಳನ್ನು ಕೊಟ್ಟು ಬಂದಿದ್ದರು’ ಎಂದರು.

ಸಂಕ್ಷಿಪ್ತ ಸುದ್ದಿ

19ಕ್ಕೆ ಆನ್‌ಲೈನ್ ಕಾರ್ಯಾಗಾರ

ಬೆಂಗಳೂರು: ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಕಿಡ್ಡಿಪೈ ಸಂಸ್ಥೆಯು 6ರಿಂದ 16 ವರ್ಷದ ಮಕ್ಕಳಿಗಾಗಿ ಇದೇ 19ರಂದು ಮಧ್ಯಾಹ್ನ 3 ಗಂಟೆಗೆ ಆನ್‌ಲೈನ್ ಕಾರ್ಯಾಗಾರ ಉಚಿತವಾಗಿ ಹಮ್ಮಿಕೊಂಡಿದೆ

ಮಕ್ಕಳಿಗಾಗಿ ಯೋಗಕ್ಕೆ ಸಂಬಂಧಿಸಿದ ರಸಪ್ರಶ್ನೆ, ಒಗಟು ಹಾಗೂ ಹಲವು ಆಟಗಳು ಇರಲಿವೆ. ಅತಿಥಿಯಾಗಿ ಆರ್ಟ್ ಆಫ್ ಲಿವಿಂಗ್‌ನ ಹಿರಿಯ ಸಿಬ್ಬಂದಿ ಹೆಟಲ್ ಎಂ.ಪೆಂಡ್ಸೆ ಭಾಗವಹಿಸಲಿದ್ದಾರೆ.

ಆಸಕ್ತರು http://bit.ly/june-19-event ಮೂಲಕ ನೋಂದಣಿಯಾಗಬಹುದು. ಹೆಚ್ಚಿನ ಮಾಹಿತಿಗೆ 98453-49742 ಅಥವಾ kiddypi@subhanu.com ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹಾನಗಲ್ ಕ್ಷೇತ್ರಕ್ಕೆ ಅಭ್ಯರ್ಥಿ ಘೋಷಿಸಿದ ಜೆಡಿಎಸ್

ಬೆಂಗಳೂರು: ಶಾಸಕ ಸಿ.ಎಂ. ಉದಾಸಿ ಅವರ ನಿಧನದಿಂದ ತೆರವಾಗಿರುವ ಹಾನಗಲ್ ವಿಧಾನಸಭಾ ಕ್ಷೇತ್ರಕ್ಕೆ ನಡೆಯಲಿರುವ ಉಪ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿ ನಿಯಾಜ್ ಶೇಖ್ ಕಣಕ್ಕಿಳಿಯಲಿದ್ದಾರೆ ಎಂದು ಜೆಡಿಎಸ್ ಪ್ರಕಟಿಸಿದೆ.

ಕಾಂಗ್ರೆಸ್ ಪಕ್ಷದ ಅಸಂಘಟಿತ ಕಾರ್ಮಿಕರ ಘಟಕದ ಹಾವೇರಿ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿದ್ದ ನಿಯಾಜ್ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ಮಂಗಳವಾರ ಭೇಟಿಮಾಡಿ, ಪಕ್ಷ ಸೇರಿದರು. ಆ ಬಳಿಕ ಅವರನ್ನೇ ಹಾನಗಲ್ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವುದಾಗಿ ಕುಮಾರಸ್ವಾಮಿ ಪ್ರಕಟಿಸಿದ್ದಾರೆ.

'ವರ್ಚುಯಲ್' ಯೋಗಾಭ್ಯಾಸ

ಬೆಂಗಳೂರು: ಇದೇ 21ರಂದು ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಕ್ರೀಡಾ ಮತ್ತು ಯುವಜನ ಸಬಲೀಕರಣ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವರ್ಚುಯಲ್ ವೇದಿಕೆ ಮೂಲಕ ಯೋಗಾಭ್ಯಾಸ ನಡೆಸಲಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಏಳನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸಂಬಂಧ ನಡೆದ ಪೂರ್ವಭಾವಿ ಸಭೆಯ ಬಳಿಕ ಮಾತನಾಡಿದ ಅವರು, 'ಕೋವಿಡ್ ಕಾರಣದಿಂದ ಈ ವರ್ಷ ಯೋಗ ದಿನಾಚರಣೆಯನ್ನು ಅತ್ಯಂತ ಸರಳವಾಗಿ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದು, ಕೇವಲ 100 ಜನರು ಭಾಗಿಯಾಗಲಿದ್ದಾರೆ. ಅಂದು ಬೆಳಿಗ್ಗೆ 7ರಿಂದ 8 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ' ಎಂದರು.

ಈ ವರ್ಷದ ಯೋಗ ದಿನಾಚರಣೆ ಕ್ರೀಡಾ ಮತ್ತು ಯುವಜನ ಸಬಲೀಕರಣ, ನಿಮ್ಹಾನ್ಸ್, ಪರಿವರ್ತನಾ ಯೋಗಾ ಪ್ರತಿಷ್ಠಾನ ಹಾಗೂ ಆರ್ಟ್ ಆಫ್ ಲಿವಿಂಗ್ ಸಹಯೋಗದಲ್ಲಿ ನಡೆಯಲಿದೆ. ಸೋಂಕಿನ ಕಾಯಿಲೆ ಇರುವ ಕಾರಣಕ್ಕೆ ಈ ಕಾರ್ಯಕ್ರಮಕ್ಕೆ ಕೋವಿಡ್-19, ಯುವಜನರು, ಯೋಗ, ಧ್ಯಾನ ಎಂಬ ಶೀರ್ಷಿಕೆ ನೀಡಲಾಗಿದೆ ಎಂದರು.

ಸಚಿವ ನಾರಾಯಣಗೌಡ ಅವರು ವರ್ಚುವಲ್ ಮೂಲಕ ಸಭೆಯಲ್ಲಿ ಭಾಗವಹಿಸಿದರು.

ನಿಧನ ವಾರ್ತೆ

ಬಿ.ಎಚ್.ಬೈರೇಗೌಡ



ಹೆಸರಘಟ್ಟ: ಕಾಂಗ್ರೆಸ್ ಮುಖಂಡ, ಬ್ಯಾತ ಗ್ರಾಮದ ನಿವಾಸಿಯಾದ ಬಿ.ಎಚ್.ಬೈರೇಗೌಡ (89) ಅವರು ವಯೋಸಹಜ ಕಾಯಿಲೆಗಳಿಂದ ನಿಧನರಾದರು.

ಅವರಿಗೆ ಪತ್ನಿ, ನಾಲ್ವರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ. ಬ್ಯಾತ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿದ್ದ ಅವರು ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ, ಪಶು ವೈದ್ಯಕೀಯ ಮತ್ತು ಆಯುರ್ವೇದ ಚಿಕಿತ್ಸಾಲಯಗಳನ್ನು ಸ್ಥಾಪನೆ ಮಾಡಲು ಶ್ರಮಿಸಿದ್ದರು. ಮೃತರ ಅಂತ್ಯಕ್ರಿಯೆಯು ಬ್ಯಾತ ಗ್ರಾಮದಲ್ಲಿ ಮಂಗಳವಾರ ಮಧ್ಯಾಹ್ನ ನೆರವೇರಿತು.

ರಾಮಚಂದ್ರ ರಾವ್



ಉಡುಪಿ: ಮಾಜಿ ಕರ್ನಲ್ ರಾಮಚಂದ್ರ ರಾವ್ (88) ಸೋಮವಾರ ರಾತ್ರಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಒಬ್ಬ ಪುತ್ರಿ ಇದ್ದಾರೆ.

29 ವರ್ಷ ಭೂಸೇನೆಯಲ್ಲಿ ವಿವಿಧ ಹುದ್ದೆಗಳನ್ನು ನಿಭಾಯಿಸಿದ ರಾಮಚಂದ್ರ ರಾವ್ ಅವರು, ಚೀನಾ ಯುದ್ಧ, ಪಾಕಿಸ್ತಾನ ಯುದ್ಧ ಹಾಗೂ ಬಾಂಗ್ಲಾ ವಿಮೋಚನೆಯ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. 1960ರಲ್ಲಿ ಸೇನೆ ಸೇರಿದ್ದ ಅವರು 1963 ರಲ್ಲಿ ಕ್ಯಾಪ್ಟನ್, ನಂತರ ಮೇಜರ್, ಲೆಫ್ಟಿನಂಟ್ ಕರ್ನಲ್, ಕರ್ನಲ್ ಹುದ್ದೆಗೇರಿದ್ದರು. ನಿವೃತ್ತಿಯ ಬಳಿಕ ಉಡುಪಿಯ ಬಡಾನಿಡಿಯೂರಿನಲ್ಲಿ ನೆಲೆಸಿದ್ದರು.

ಬಿಬಿಎಂಪಿ: 2021–22ನೇ ಸಾಲಿನ ಬಜೆಟ್‌ನ ಪರಿಷ್ಕೃತ ಗಾತ್ರ ₹ 9,951 ಕೋಟಿಗೆ ಪರಿಷ್ಕರಣೆ

₹665 ಕೋಟಿ ಹೆಚ್ಚುವರಿ ಸೇರ್ಪಡೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿಯ 2021–22ನೇ ಸಾಲಿನ ಬಜೆಟ್‌ಗೆ ನಗರಾಭಿವೃದ್ಧಿ ಇಲಾಖೆ ಮಂಗಳವಾರ ಅನುಮೋದನೆ ನೀಡಿದೆ.

ಬಿಬಿಎಂಪಿಯು ಅಂಗೀಕರಿಸಿ ಕಳುಹಿಸಿದ ಬಜೆಟ್‌ನಲ್ಲಿ ಅನಗತ್ಯ ಕಾರ್ಯಕ್ರಮಗಳಿಗೆ ಕತ್ತರಿ ಹಾಕಿ ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡುವುದು ವಾಡಿಕೆ. ಹಾಗಾಗಿ ಇಲಾಖೆಯಿಂದ ಅನುಮೋದನೆಗೊಳ್ಳುವಾಗ ಬಜೆಟ್ ಗಾತ್ರ ಕುಗ್ಗುತ್ತಿತ್ತು. ಇದೇ ಮೊದಲ ಬಾರಿ ಬಿಬಿಎಂಪಿ ಅಂಗೀಕರಿಸಿದ್ದ ಬಜೆಟ್ ಗಾತ್ರವನ್ನು ಹೆಚ್ಚಿಸಿ ಅನುಮೋದನೆ ನೀಡಲಾಗಿದೆ.

ಬಿಬಿಎಂಪಿಯು 2021–22ನೇ ಸಾಲಿಗೆ ₹ 9,286.80 ಕೋಟಿ ಗಾತ್ರದ ಬಜೆಟ್ ಮಂಡಿಸಿ ಅಂಗೀಕರಿಸಿತ್ತು. ನಗರಾಭಿವೃದ್ಧಿ ಇಲಾಖೆಯು ಈ ಮೊತ್ತವನ್ನು ಪರಿಷ್ಕರಿಸಿ ಒಟ್ಟು ₹ 9,951.8 ಕೋಟಿ ಗಾತ್ರದ ಬಜೆಟ್‌ಗೆ ಅನುಮೋದನೆ ನೀಡಿದೆ.

ಅನುದಾನ ಹೆಚ್ಚಳ ಏತಕ್ಕೆ: ಬಜೆಟ್ ವಾಸ್ತವಕ್ಕೆ ಹತ್ತಿರ ಇರಬೇಕು ಎಂಬ ಕಾರಣಕ್ಕೆ ಬಿಬಿಎಂಪಿ ಬಿಗಿ ಕ್ರಮಗಳನ್ನು ಅನುಸರಿಸಿತ್ತು. ಇಷ್ಟು ವರ್ಷ ಬಜೆಟ್‌ನಲ್ಲಿ ಮೇಯರ್, ಉಪ ಮೇಯರ್, ಆಯುಕ್ತರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆಯಡಿ ಬಳಸುವುದಕ್ಕೆ ವಿಶೇಷ ಅನುದಾನ ಕಾಯ್ದಿರಿಸಲಾಗುತ್ತಿತ್ತು. ಆದರೆ, ಈ ಸಲ ಮುಖ್ಯ ಆಯುಕ್ತರ ವಿವೇಚನೆಯ ಬಳಕೆಗೆ ₹ 20 ಕೋಟಿ ಕಾಯ್ದಿರಿಸಿದ್ದು ಬಿಟ್ಟರೆ, ಉಳಿದವರು ವಿವೇಚನೆಯಡಿ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಅನುದಾನ ಮೀಸಲಿಟ್ಟಿರಲಿಲ್ಲ. ಈ ಕೋಟಾದಡಿ ಪ್ರಗತಿಯಲ್ಲಿರುವ ಕಾಮಗಾರಿಗಳಿಗಾಗಿ ₹ 65 ಕೋಟಿಯನ್ನು ಮಾತ್ರ ಕಾಯ್ದಿರಿಸಲಾಗಿತ್ತು.

ನಗರಾಭಿವೃದ್ಧಿ ಇಲಾಖೆಯು ₹ 385 ಕೋಟಿ ಮೊತ್ತವನ್ನು ವಿವೇಚನಾ ಬಳಕೆಗೆ ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಿದೆ. ಈ ಮೊತ್ತದಲ್ಲಿ ಸಿಂಹಪಾಲು (₹ 250 ಕೋಟಿ) ಜಿಲ್ಲಾ ಉಸ್ತುವಾರಿ ಸಚಿವರಿಗೆ ಲಭಿಸಲಿದೆ. ಬೆಂಗಳೂರು ನಗರ ಜಿಲ್ಲೆಯ ಉಸ್ತುವಾರಿ ಹೊಣೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಬಳಿಯೇ ಇದೆ. ಇನ್ನುಳಿದಂತೆ ಮೇಯರ್‌ಗೆ ₹50 ಕೋಟಿ, ಉಪಮೇಯರ್‌ಗೆ ₹ 35 ಕೋಟಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ₹ 15 ಕೋಟಿ ಅನುದಾನ ಹೆಚ್ಚುವರಿಯಾಗಿ ಹಂಚಿಕೆ ಮಾಡಲಾಗಿದೆ. ಸದ್ಯ ಮೇಯರ್, ಉಪಮೇಯರ್ ಹಾಗೂ ಸ್ಥಾಯಿ ಸಮಿತಿಗಳ ಅಧಿಕಾರ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಕೈಯಲ್ಲಿದೆ. ನಗರಾಭಿವೃದ್ಧಿ ಇಲಾಖೆಗೂ ಅವರೇ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ. ಸುಮಾರು ₹ 100 ಕೋಟಿ ಅನುದಾನ ಅವರ ವಿವೇಚನಾ ಬಳಕೆಗೆ ಲಭಿಸಲಿದೆ. ಮುಖ್ಯ ಆಯುಕ್ತರ (ಗೌರವ್ ಗುಪ್ತ) ವಿವೇಚನಾ ಬಳಕೆಗೆ ಕಾಯ್ದಿರಿಸಿದ್ದ ಮೊತ್ತವನ್ನು ₹ 35 ಕೋಟಿಗೆ ಪರಿಷ್ಕರಿಸಲಾಗಿದೆ.

'ವಿವೇಚನೆಯಡಿ ಬಳಸುವುದಕ್ಕೆ ಅನುದಾನವನ್ನು ಕಾಯ್ದಿರಿಸದಿದ್ದರೆ ಅನಿವಾರ್ಯ ಇರುವ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಅವಕಾಶವಿಲ್ಲ. ಹಾಗಾಗಿ ₹ 385 ಕೋಟಿಯನ್ನು ಹೆಚ್ಚುವರಿಯಾಗಿ ಸೇರ್ಪಡೆ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ರಾಜ್ಯ ಸರ್ಕಾರದ ಅನುದಾನದಲ್ಲಿ ಕೈಗೊಳ್ಳುವ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಪ್ರೀಮಿಯಂ ಮೊತ್ತವನ್ನು (ಕಾಮಗಾರಿಯ ಟೆಂಡರ್ ನೀಡುವಾಗ ಆಡಳಿತಾತ್ಮಕ ಅನುಮೋದನೆ ಪಡೆದ ಮೊತ್ತಕ್ಕೆ ಹೆಚ್ಚುವರಿಯಾಗಿ ಭರಿಸಬೇಕಾಗುವ ಮೊತ್ತ) ಪಾಲಿಕೆಯೇ ಭರಿಸಬೇಕಾಗುತ್ತದೆ. ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಟೆಂಡರ್‌ಗಳಿಗೆ ಅನುಮೋದನೆ ನೀಡುವಾಗಲೇ ಸರ್ಕಾರ ಈ ಷರತ್ತು ವಿಧಿಸಿದೆ. ಟೆಂಡರ್ ಪ್ರೀಮಿಯಂ ಮೊತ್ತ ಭರಿಸುವುದಕ್ಕೆ 2021–22ನೇ ಸಾಲಿನ ಬಜೆಟ್‌ನಲ್ಲಿ ಬಿಬಿಎಂಪಿ ಯಾವುದೇ ಅನುದಾನವನ್ನು ಕಾಯ್ದಿರಿಸಿರಲಿಲ್ಲ. ಹಾಗಾಗಿ ರಾಜ್ಯ ಸರ್ಕಾರದ ಅನುದಾನಕ್ಕೆ ಪೂರಕ ಅನುದಾನ (ಮ್ಯಾಚಿಂಗ್ ಕಾಂಟ್ರಿಬ್ಯೂಷನ್) ಬಳಕೆಗೆ ಹಣವಿರಲಿಲ್ಲ. ನಗರಾಭಿವೃದ್ಧಿ ಇಲಾಖೆಯು ಟೆಂಡರ್ ಪ್ರೀಮಿಯಂ ಭರಿಸಲು ₹ 300 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಹೆಚ್ಚುವರಿಯಾಗಿ ಸೇರ್ಪಡೆ ಮಾಡಿದೆ.

ಕಳೆದ ಸಾಲಿನ (2020-21) ಸಾಲಿನ ಬಜೆಟ್‌ನಲ್ಲಿ ಪಾಲಿಕೆಯು ರಾಜ್ಯ ಸರ್ಕಾರದ ಅನುದಾನಕ್ಕೆ ಪೂರಕ ಅನುದಾನವನ್ನು ಮೀಸಲಿಟ್ಟಿತ್ತು. ಆದರೆ, ಬಜೆಟ್‌ಗೆ ಅನುಮೋದನೆ ಪಡೆದ ಬಳಿಕ ಆ ಮೊತ್ತವನ್ನು ಮರುಹಂಚಿಕೆ ಮಾಡಿತ್ತು. ಈ ರೀತಿ ಅನುದಾನ ಮರುಹಂಚಿಕೆ ತಡೆಯುವ ಉದ್ದೇಶದಿಂದ ಈ ಸಲ ರಾಜ್ಯ ಸರ್ಕಾರದ ಅನುದಾನಕ್ಕೆ ಪೂರಕವಾಗಿ ಮೀಸಲಿಡುವ ಅನುದಾನವನ್ನು ಪ್ರತ್ಯೇಕ ಖಾತೆಯ (ಎಸ್ಕ್ರೊ ಖಾತೆ) ಮೂಲಕ ಬಳಸಬೇಕು. ಯಾವುದೇ ಕಾರಣಕ್ಕೂ ಮರುಹಂಚಿಕೆ ಮಾಡಬಾರದು ಎಂದು ನಗರಾಭಿವೃದ್ಧಿ ಇಲಾಖೆ ಷರತ್ತು ವಿಧಿಸಿದೆ.

ಬಜೆಟ್ ಗಾತ್ರವನ್ನು ಹೆಚ್ಚಿಸಿದರೂ, ಬಿಬಿಎಂಪಿ ಸ್ವೀಕೃತಿ ₹ 9,291.33 ಕೋಟಿ ಮಾತ್ರ ಇದೆ. ಹಾಗಾಗಿ ಹೆಚ್ಚುವರಿ ಸೇರ್ಪಡೆಯ ₹ 665 ಕೋಟಿ ಹೊಂದಿಸುವುದು ಎಲ್ಲಿಂದ ಎಂಬ ಪ್ರಶ್ನೆ ಉದ್ಭವವಾಗಿದೆ. ಹಾಗಾಗಿ ಎಂದಿನಂತೆ ಈ ಬಾರಿಯೂ ಬಿಬಿಎಂಪಿಯದು ಕೊರತೆ ಬಜೆಟ್ ಆಗಿಯೇ ಮುಂದುವರಿದಿದೆ.

₹ 4919.5 ಕೋಟಿ ಕಡಿತ

ಮೇಯರ್ ಗೌತಮ್ ಕುಮಾರ್ ಅವಧಿಯಲ್ಲಿ ಬಿಬಿಎಂಪಿ 2020–21ನೇ ಸಾಲಿಗೆ ₹ 11,972.89 ಕೋಟಿ ಗಾತ್ರದ ಬಜೆಟ್ ಅಂಗೀಕರಿಸಿತ್ತು. ನಗರಾಭಿವೃದ್ಧಿ ಇಲಾಖೆಯು ಬಜೆಟ್ ಗಾತ್ರವನ್ನು ₹ 11,718.54 ಕೋಟಿಗೆ ಕಡಿತಗೊಳಿಸಿ ಅನುಮೋದನೆ ನೀಡಿತ್ತು. ಈ ಸಾಲಿನ ಪರಿಷ್ಕೃತ ಬಜೆಟ್‌ಗೆ ಇಲಾಖೆ ಮಂಗಳವಾರ ಅನುಮೋದನೆ ನೀಡಿದೆ. ಬಜೆಟ್ ಗಾತ್ರವನ್ನು₹ 6,799.04 ಕೋಟಿಗೆ ಕಡಿತಗೊಳಿಸಲಾಗಿದೆ. ಬಜೆಟ್ ಗಾತ್ರವು ₹ 4,919.5 ಕೋಟಿಗಳಷ್ಟು ಕಡಿತಗೊಂಡಿದೆ.

ಅಂಕಿ-ಅಂಶಗಳು

₹ 9,286.80 ಕೋಟಿ
ಬಿಬಿಎಂಪಿಯು ನಗರಾಭಿವೃದ್ಧಿ ಇಲಾಖೆಗೆ ಅನುಮೋದನೆಗಾಗಿ ಕಳುಹಿಸಿದ್ದ 2021–22ನೇ ಸಾಲಿನ ಬಜೆಟ್ ಗಾತ್ರ

₹ 9,951.80 ಕೋಟಿ
ಇಲಾಖೆಯು ಅನುಮೋದನೆ ನೀಡಿರುವ ಬಜೆಟ್ ಗಾತ್ರ

ವಿವೇಚನಾ ಬಳಕೆ ಅನುದಾನ ಪರಿಷ್ಕರಣೆ ವಿವರ (₹ ಕೋಟಿಗಳಲ್ಲಿ)

ಯಾರಿಗೆ	ಬಾಕಿ ಮೊತ್ತ	ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ	ಹೊಸ ಕಾಮಗಾರಿಗಳಿಗೆ	ಒಟ್ಟು
ಮೇಯರ್	32.28	10	50	92.28
ಉಪಮೇಯರ್	27.95	15	35	77.95
ಮುಖ್ಯ ಆಯುಕ್ತರು	6.48	10	35	51.48
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ	21.72	15	15	51.72
ಜಿಲ್ಲಾ ಉಸ್ತುವಾರಿ ಸಚಿವರು	32.20	15	250	297.20

ಸತೀಶ ಜಾರಕಿಹೊಳಿ ಪುತ್ರ, ಪುತ್ರಿ ರಾಜಕೀಯ ಪ್ರವೇಶ

ಬೆಳಗಾವಿ: ಯಮಕನಮರಡಿ ಕ್ಷೇತ್ರದ ಶಾಸಕರೂ ಆಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ತಮ್ಮ ಪುತ್ರ ರಾಹುಲ್ ಜಾರಕಿಹೊಳಿ ಅವರನ್ನು ನಗರದ ಕಾಂಗ್ರೆಸ್ ಭವನದಲ್ಲಿ ನಡೆದ ಯುವ ಕಾಂಗ್ರೆಸ್ ಪದಾಧಿಕಾರಿಗಳ ಸಭೆಯಲ್ಲಿ ಪರಿಚಯಿಸಿದರು. ಇದರೊಂದಿಗೆ, ಸಕ್ರಿಯ ರಾಜಕಾರಣಕ್ಕೆ ಪುತ್ರನ ಪ್ರವೇಶದ ಸಂದೇಶ ರವಾನಿಸಿದರು.

'ರಾಹುಲ್ ಮಂಗಳವಾರದಿಂದಲೇ ಜಿಲ್ಲೆಯಾದ್ಯಂತ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲಿದ್ದಾರೆ' ಎಂದು ಸತೀಶ ಪ್ರಕಟಿಸಿದರು. ರಾಹುಲ್ ಅವರನ್ನು ಪಾಲ್ಗೊಂಡಿದ್ದ ಸದಸ್ಯರು ಹಾಗೂ ಮುಖಂಡರು ಸ್ವಾಗತಿಸಿದರು.

ತಾವು ನಿರ್ದೇಶಕರಾಗಿರುವ ಸತೀಶ ಶುಗರ್ಸ್ ಲಿಮಿಟೆಡ್ ವತಿಯಿಂದ ಸದಸ್ಯರಿಗೆ ಸ್ಯಾನಿಟೈಸರ್ ಮತ್ತು ಮಾಸ್ಕ್‌ಗಳನ್ನು ರಾಹುಲ್ ವಿತರಿಸಿದರು. ಈ ವೇಳೆ ಮಾತನಾಡಿದ ಸತೀಶ, 'ರಾಜಕೀಯದಲ್ಲಿ ತೊಡಗಿಸಿಕೊಳ್ಳುವವರು ಮೊದಲು ಸಮಾಜ, ಸೇವೆ ಹಾಗೂ ಪಕ್ಷ ಎಂದರೇನು ಎನ್ನುವುದನ್ನು ತಿಳಿದುಕೊಳ್ಳಬೇಕು. ಆಗ ಮಾತ್ರ ಯಶಸ್ವಿಯಾಗಲು ಸಾಧ್ಯ' ಎಂದರು.

'ಪುತ್ರ ರಾಹುಲ್ ಹಾಗೂ ಪ್ರಿಯಾಂಕಾ ಅಧಿಕೃತವಾಗಿ ಜಿಲ್ಲಾ ರಾಜಕಾರಣದಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಪಕ್ಷ ಸಂಘಟನೆಗಾಗಿ ನಾನು ರಾಜ್ಯದಾದ್ಯಂತ ಸಂಚರಿಸಬೇಕಾಗುತ್ತದೆ. ಹೀಗಾಗಿ, ಪುತ್ರ ಮತ್ತು ಪುತ್ರಿ ಇನ್ಮುಂದೆ ಜಿಲ್ಲೆಯಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗುತ್ತಾರೆ. ಪಕ್ಷ ಸಂಘಟನೆ ಮೂಲಕ ಅವರು ಸಾಮರ್ಥ್ಯ ಪ್ರದರ್ಶಿಸಬೇಕು. ಪಕ್ಷ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು' ಎಂದು ಸಲಹೆ ನೀಡಿದರು.

'ಇಬ್ಬರೂ ಮೂರು ತಿಂಗಳ ಹಿಂದೆಯೇ ಅಧಿಕೃತವಾಗಿ ಪಕ್ಷದ ಸದಸ್ಯತ್ವ ಪಡೆದಿದ್ದಾರೆ. ಇಬ್ಬರ ಮೇಲೂ ಸಾಕಷ್ಟು ಜವಾಬ್ದಾರಿ ಇದೆ. ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತಾರೆ ಎಂಬ ವಿಶ್ವಾಸವಿದೆ' ಎಂದರು.

'ಬ್ಯಾಂಕ್ ಲಾಭಾಂಶ ವಿತರಿಸಿ'

ಬೆಂಗಳೂರು: 'ಆರ್‌ಬಿಐನ ಡಿವಿಡೆಂಡ್ (ಲಾಭಾಂಶ) ನಿಧಿಯನ್ನು ಕೇಂದ್ರ ಸರ್ಕಾರ ಅಕ್ರಮವಾಗಿ ಬಳಸಿಕೊಂಡು, ವಿವಿಧ ಬ್ಯಾಂಕುಗಳ ಷೇರುದಾರರಿಗೆ ಲಾಭ ನೀಡದೆ ಅನ್ಯಾಯ ಮಾಡಿದೆ. ಸಹಕಾರಿ ಬ್ಯಾಂಕುಗಳ ಉಳಿವಿಗಾಗಿ ಕೂಡಲೇ ಲಾಭಾಂಶವನ್ನು ಷೇರುದಾರರಿಗೆ ನೀಡಬೇಕು' ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಕಾನೂನು ಘಟಕದ ಅಧ್ಯಕ್ಷ ನಂಜಪ್ಪ ಕಾಳೇಗೌಡ ಆಗ್ರಹಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,'ಷೇರುದಾರರು ತಮ್ಮ ಷೇರುಗಳನ್ನು ವಾಪಸ್ ತೆಗೆದುಕೊಂಡಲ್ಲಿ, ಸಹಕಾರಿ ಬ್ಯಾಂಕುಗಳು ಮುಚ್ಚಬೇಕಾದ ಪರಿಸ್ಥಿತಿ ಎದುರಾಗಲಿದೆ' ಎಂದರು.

'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸಹಕಾರಿ ಬ್ಯಾಂಕುಗಳನ್ನು ಮುಚ್ಚಲು ಹೊರಟಿದೆ. ಆರ್‌ಬಿಐನಿಂದ ₹99,122 ಕೋಟಿ ಲಾಭಾಂಶ ನಿಧಿಯನ್ನು ಕಸಿದುಕೊಂಡಿದೆ. ಆದರೆ, ಷೇರುದಾರರಿಗೆ ಲಾಭದ ಹಣ ನೀಡಿಲ್ಲ' ಎಂದು ಆರೋಪಿಸಿದರು.

'ರಾಜ್ಯದಲ್ಲಿ ಸುಮಾರು 261 ಹಾಗೂ ದೇಶದಲ್ಲಿ 1,481 ಸಹಕಾರಿ ಬ್ಯಾಂಕುಗಳಿವೆ. ಇವೆಲ್ಲವೂ ಜನ ಸಾಮಾನ್ಯನ ಬದುಕಿನ ಅಂಗ. ರಾಜ್ಯ ಸರ್ಕಾರವೂ ಸಹಕಾರಿ ಬ್ಯಾಂಕುಗಳನ್ನು ಹತ್ತಿಕ್ಕುವ ಕೇಂದ್ರದ ನಡೆಗೆ ಬೆಂಬಲವೆಂಬಂತೆ ಮೌನವಾಗಿದೆ. ಈ ಬಗ್ಗೆ ರಾಜ್ಯ ಸಹಕಾರ ಸಚಿವರು ಕೂಡಲೇ ಸ್ಪಷ್ಟೀಕರಣ ನೀಡಬೇಕು' ಎಂದು ಆಗ್ರಹಿಸಿದರು.

ಪಿಯುಸಿ ಪರೀಕ್ಷೆ ಪ್ರಶ್ನಿಸಿ ಅರ್ಜಿ: ನಿಲುವು ತಿಳಿಸಲು ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುತ್ತೀರ್ಣರಾಗಿ ಪುನಃ ಪರೀಕ್ಷೆ ತೆಗೆದುಕೊಂಡಿರುವ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಮಾತ್ರ ದ್ವಿತೀಯ ಪಿಯುಸಿ ಪರೀಕ್ಷೆ ನಡೆಸುವ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿದೆ. ಈ ವಿಷಯದಲ್ಲಿ ನಿಲುವು ಸ್ಪಷ್ಟಪಡಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ನೀಡಿದೆ.

'ಮೊದಲ ಬಾರಿಗೆ ಪರೀಕ್ಷೆ ಬರೆಯುವವರಿಗೆ ಕೋವಿಡ್ ಕಾರಣಕ್ಕೆ ಪರೀಕ್ಷೆ ನಡೆಸದೆ ಪುನರಾವರ್ತಿತ ವಿದ್ಯಾರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗಬೇಕು ಎಂಬುದು ತಾರತಮ್ಯ ಆಗಲಿದೆ. ಪ್ರಥಮ ಪಿಯುಸಿ ಅಂಕಗಳನ್ನು ಆಧರಿಸಿ ಅವರನ್ನೂ ಮುಂದಿನ ತರಗತಿಗೆ ಪ್ರವೇಶ ಪಡೆಯಲು ಅವಕಾಶ ನೀಡಿ ಸಮಾನತೆ ಕಾಪಾಡಬೇಕು' ಎಂದು ಕೋರಿ ಜ್ಞಾನಮಂದಿರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಸ್.ವಿ. ಶ್ರೀನಿವಾಸಗೌಡ ಅರ್ಜಿ ಸಲ್ಲಿಸಿದ್ದಾರೆ.

ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ನೇತೃತ್ವದ ವಿಭಾಗೀಯ ಪೀಠ, 'ಪ್ರಥಮ ಪಿಯುಸಿ ಅಂಕಗಳನ್ನೇ ಆಧರಿಸಿ ಈ ವಿದ್ಯಾರ್ಥಿಗಳನ್ನೂ ಮುಂದಿನ ತರಗತಿಗೆ ಕಳುಹಿಸಲು ಸಾಧ್ಯವೇ' ಎಂದು ಪ್ರಶ್ನಿಸಿತು.

'ಪದವಿ ಪೂರ್ವ ಶಿಕ್ಷಣ ಇಲಾಖೆ ತನ್ನ ನಿಲುವನ್ನು ಜೂ.17ರೊಳಗೆ ಸ್ಪಷ್ಟಪಡಿಸಬೇಕು' ಎಂದು ತಿಳಿಸಿ ವಿಚಾರಣೆ ಮುಂದೂಡಿತು.

> **ಎರಡನೇ ಪಿಯುಸಿ ಪರೀಕ್ಷೆ ಕುರಿತು ಹೈಕೋರ್ಟ್ ನೀಡಿರುವ ಆದೇಶವನ್ನು ಪದವಿ ಪೂರ್ವ ಶಿಕ್ಷಣ ಮಂಡಳಿ ಅಧ್ಯಯನ ಮಾಡಿ ಪರಾಮರ್ಶೆ ನಡೆಸಲಿದೆ. ಬಳಿಕ, ತನ್ನ ನಿಲುವನ್ನು ಕೋರ್ಟ್‌ಗೆ ತಿಳಿಸುತ್ತದೆ**
> **ಎಸ್. ಸುರೇಶ್ ಕುಮಾರ್,** ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ

ಜಿಂದಾಲ್‌ಗೆ ಭೂಮಿ: ಕೋರ್ಟ್ ಆದೇಶವೇ ಅಂತಿಮ

ಬೆಂಗಳೂರು: 'ಬಳ್ಳಾರಿ ಜಿಲ್ಲೆಯಲ್ಲಿ 3,667 ಎಕರೆ ಸರ್ಕಾರಿ ಭೂಮಿಯನ್ನು ಜೆಎಸ್‌ಡಬ್ಲ್ಯು ಕಂಪನಿಗೆ ಮಾರಾಟ ಮಾಡುವ ಸರ್ಕಾರದ ನಿರ್ಧಾರವು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ಹೈಕೋರ್ಟ್ ತಿಳಿಸಿದೆ.

ಭೂಮಿ ಪರಭಾರೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ಏಪ್ರಿಲ್ 26ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಭೂಮಿ ಮಾರಾಟ ಮಾಡುವ ಸಂಬಂಧ ನಿರ್ಧಾರ ಕೈಗೊಳ್ಳಲಾಗಿದ್ದರೂ, ನಂತರ ಸಭೆಯಲ್ಲಿ ಇದನ್ನು ದೃಢಪಡಿಸಿಲ್ಲ' ಎಂದು ಸರ್ಕಾರದ ಪರ ವಕೀಲರು ಮಾಹಿತಿ ನೀಡಿದರು. ಜಾಗ ಮಾರಾಟದ ಬಗ್ಗೆ ನಿಲುವು ಸ್ಪಷ್ಟಪಸುವಂತೆ ಹಿಂದಿನ ವಿಚಾರಣೆ ವೇಳೆ ಪೀಠ ನಿರ್ದೇಶನ ನೀಡಿತ್ತು.

'ಸಚಿವ ಸಂಪುಟದ ಸಭೆಯಲ್ಲೇ ಕೆಲವರು ವಿರೋಧಿಸಿದ್ದರೂ, ಸರ್ಕಾರಿ ಭೂಮಿವನ್ನು ಕಡಿಮೆ ದರದಲ್ಲಿ ಮಾರಾಟ ಮಾಡಲಾಗುತ್ತಿದೆ' ಎಂದು ಅರ್ಜಿದಾರ ಕೆ.ಎ. ಪಾಲ್ ಆರೋಪಿಸಿದ್ದಾರೆ.

ವೃಷಭಾವತಿ ನದಿ ಪುನಶ್ಚೇತನ: ಸಭೆ ನಡೆಸಲು ಸೂಚನೆ

ಬೆಂಗಳೂರು: ವೃಷಭಾವತಿ ನದಿ ಪುನಶ್ಚೇತನ ಸಂಬಂಧ ಎಲ್ಲ ಸಹಭಾಗಿ ಸಂಸ್ಥೆಗಳ ಸಭೆ ನಡೆಸುವಂತೆ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವಕೀಲರಾದ ಗೀತಾ ಮಿಶ್ರಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ರಾಷ್ಟ್ರೀಯ ಪರಿಸರ ಮತ್ತು ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆ (ನೀರಿ) ಸಲ್ಲಿಸಿರುವ ಮಧ್ಯಂತರ ವರದಿಯ ಶಿಫಾರಸುಗಳ ಬಗ್ಗೆ ಚರ್ಚೆ ನಡೆಸಿ' ಎಂದು ತಿಳಿಸಿದೆ. ವಿಚಾರಣೆಯನ್ನು ಜುಲೈ 13ಕ್ಕೆ ಮುಂದೂಡಿತು. 'ವೃಷಭಾವತಿ ಪುನರುಜ್ಜೀವನದ ಬಗ್ಗೆ ನೀರಿ ವರದಿ ಸಲ್ಲಿಸಿದೆ. ಇದನ್ನು ಆಧರಿಸಿ ಸರ್ವೆ ನಡೆಸಿ ನದಿಯ ಬಫರ್ ವಲಯವನ್ನು ಗುರುತಿಸಬೇಕು' ಎಂದು ಬೆಂಗಳೂರು ನಗರ ಜಿಲ್ಲೆಯ ಅಧಿಕಾರಿಗಳಿಗೆ ತಿಳಿಸಿತು.

'ಒತ್ತುವರಿ ತೆರವು ಮಾಡಬೇಕು. ನದಿಗೆ ಹರಿಬಿಡುವ ತ್ಯಾಜ್ಯ ತಡೆಯಬೇಕು' ಎಂದು ನೀರಿ ತನ್ನ ವರದಿಯಲ್ಲಿ ತಿಳಿಸಿದೆ.

ಸಿ.ಎಂ ಮನೆ ಮುಂದೆ ಪ್ರತಿಭಟನೆ: ಪೊಲೀಸರ ತಡೆ

ಪ್ರಜಾವಾಣಿ ವಾರ್ತೆ



ಮುಖ್ಯಮಂತ್ರಿಯವರ ಮನೆಗೆ ಮಂಗಳವಾರ ಕಾಲ್ನಡಿಗೆಯಲ್ಲಿ ತೆರಳಲು ಯತ್ನಿಸಿದ ಜನಾಗ್ರಹ ಆಂದೋಲನದ ಸದಸ್ಯರನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ಯುತ್ತಿರುವುದು – ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ಬಿಗಿ ಕ್ರಮ ಕೈಗೊಳ್ಳುವಂತೆ ಹಾಗೂ ಲಾಕ್‌ಡೌನ್‌ನಿಂದ ತೊಂದರೆಗೆ ಸಿಲುಕಿರುವ ಎಲ್ಲರಿಗೂ ಪರಿಹಾರ ನೀಡುವಂತೆ ಆಗ್ರಹಿಸಿ ಮುಖ್ಯಮಂತ್ರಿಯವರ ಮನೆ ಎದುರು ಮಂಗಳವಾರ ಪ್ರತಿಭಟನೆ ನಡೆಸಲು ಯತ್ನಿಸಿದ ಎಡಪಕ್ಷಗಳ ಮುಖಂಡರು ಮತ್ತು ಜನಾಗ್ರಹ ಆಂದೋಲನದ ಸದಸ್ಯರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

ಎಲ್ಲರಿಗೂ ಉಚಿತವಾಗಿ ಕೋವಿಡ್ ಲಸಿಕೆ, ಆದಾಯ ತೆರಿಗೆ ವ್ಯಾಪ್ತಿಗೆ ಬಾರದ ಎಲ್ಲ ಕುಟುಂಬಗಳಿಗೆ ತಿಂಗಳಿಗೆ ತಲಾ 10 ಕೆ.ಜಿ ಆಹಾರ ಧಾನ್ಯ ಮತ್ತು ₹ 10,000 ಪರಿಹಾರ ನೀಡುವಂತೆ ಆಗ್ರಹಿಸಿ ಸಿಪಿಎಂ, ಸಿಪಿಐ, ಎಸ್‌ಯುಸಿಐ, ಸಿಪಿಎಂಎಲ್, ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಮತ್ತು ಸ್ವರಾಜ್ ಇಂಡಿಯಾ ಮುಖಂಡರು ಮುಖ್ಯಮಂತ್ರಿಯವರ ನಿವಾಸದ ಎದುರು ಪ್ರತಿಭಟನೆ ನಡೆಸಲು ಯತ್ನಿಸಿದರು.

ಗಾಂಧಿ ಭವನದಿಂದ ಮೆರವಣಿಗೆಯಲ್ಲಿ ಹೊರಡಲು ಸಿದ್ಧರಾಗುತ್ತಿದ್ದ ಸಿಪಿಎಂ ರಾಜ್ಯ ಕಾರ್ಯದರ್ಶಿ ಯು. ಬಸವರಾಜ, ಮುಖಂಡ ಡಾ.ಕೆ. ಪ್ರಕಾಶ್, ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಸಾತಿ ಸುಂದರೇಶ್, ಮುಖಂಡ ಎಚ್.ವಿ. ಅನಂತ ಸುಬ್ಬರಾವ್, ಸಿಪಿಎಂಎಲ್ ರಾಜ್ಯ ಸಮಿತಿ ಕಾರ್ಯದರ್ಶಿ ಕ್ಲಿಫ್ಟನ್ ಡಿ. ರೊಜಾರಿಯೊ, ಎಸ್‌ಯುಸಿಐ ರಾಜ್ಯ ಸಮಿತಿ ಕಾರ್ಯದರ್ಶಿ ಕೆ. ಉಮಾ, ಫಾರ್ವರ್ಡ್ ಬ್ಲಾಕ್ ರಾಜ್ಯ ಸಮಿತಿ ಕಾರ್ಯದರ್ಶಿ ಜಿ. ಶಿವಶಂಕರ್, ಸ್ವರಾಜ್ ಇಂಡಿಯಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಚಾಮರಸ ಮಾಲಿ ಪಾಟೀಲ, ಮುಖಂಡ ಬಡಗಲಪುರ ನಾಗೇಂದ್ರ ಮತ್ತು ಆರ್‌ಪಿಐ ರಾಜ್ಯ ಘಟಕದ ಅಧ್ಯಕ್ಷ ಮೋಹನ್ ರಾಜ್ ಅವರನ್ನು ಪೊಲೀಸರು ವಶಕ್ಕೆ ಪಡೆದರು. ಕೆಲ ಸಮಯದ ಬಳಿಕ ಎಲ್ಲರನ್ನೂ ಬಿಡುಗಡೆ ಮಾಡಲಾಯಿತು.

ಅರ್ಧದಲ್ಲೇ ತಡೆ: ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಬಡವರು ಮತ್ತು ಕೂಲಿ ಕಾರ್ಮಿಕರಿಗೆ ಸಮಗ್ರ ಪ್ಯಾಕೇಜ್ ನೀಡುವಂತೆ ಒತ್ತಾಯಿಸಿ ಜನಾಗ್ರಹ ಆಂದೋಲನದ ಸದಸ್ಯರು ಮುಖ್ಯಮಂತ್ರಿಯವರ ಮನೆಗೆ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದರು. ಮಾರ್ಗ ಮಧ್ಯದಲ್ಲೇ ಅವರನ್ನು ಬಂಧಿಸಿ ಕರೆದೊಯ್ಯಲಾಯಿತು.

ಜನಾಗ್ರಹ ಆಂದೋಲನದ ಮುಖಂಡರಾದ ಮಾವಳ್ಳಿ ಶಂಕರ್, ಕೋಡಿಹಳ್ಳಿ ಚಂದ್ರಶೇಖರ್, ಎಸ್. ಬಾಲನ್, ವಿ. ನಾಗರಾಜ್, ಹಬೀಬುಲ್ಲಾ, ಕುಮಾರ್ ಸಮತಳ ಸೇರಿದಂತೆ 40ಕ್ಕೂ ಹೆಚ್ಚು ಜನರನ್ನು ಪೊಲೀಸರು ವಶಕ್ಕೆ ಪಡೆದು, ಸ್ವಲ್ಪ ಸಮಯದ ಬಳಿಕ ಬಿಡುಗಡೆ ಮಾಡಿದರು. ನಂತರ ಎಲ್ಲರೂ ಮೌರ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಜಿಯೊ ಫೈಬರ್ ಪೋಸ್ಟ್‌ಪೇಯ್ಡ್ ಸೇವೆ

ನವದೆಹಲಿ (ಪಿಟಿಐ): ರಿಲಯನ್ಸ್ ಜಿಯೊ ಕಂಪನಿಯು ಗುರುವಾರದಿಂದ ಜಿಯೊ ಫೈಬರ್ ಪೋಸ್ಟ್‌ಪೇಯ್ಡ್ ಬ್ರಾಡ್‌ಬ್ಯಾಂಡ್ ಸೇವೆ ಆರಂಭಿಸಲಿದ್ದು, ಹೊಸ ಸಂಪರ್ಕಗಳಿಗೆ ಇನ್‌ಸ್ಟಾಲೇಷನ್ ಶುಲ್ಕ ಇರುವುದಿಲ್ಲ ಎಂದು ಕಂಪನಿಯ ಮೂಲಗಳು ತಿಳಿಸಿದೆ.

ಹೊಸ ಪೋಸ್ಟ್‌ಪೇಯ್ಡ್ ಸಂಪರ್ಕಕ್ಕೆ ಬಯಸುವವರು, ಆರು ತಿಂಗಳ ಅಥವಾ 12 ತಿಂಗಳ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಪ್ರತಿ ತಿಂಗಳ ಯೋಜನೆಯ ದರವು ₹ 399ರಿಂದ ಆರಂಭವಾಗುತ್ತದೆ.ಸದ್ಯ ಹೊಸ ಸಂಪರ್ಕಕ್ಕೆ ಕಂಪನಿ ₹ 1,500 ಇನ್‌ಸ್ಟಾಲೇಷನ್ ಶುಲ್ಕ ತೆಗೆದುಕೊಳ್ಳುತ್ತಿದೆ.

ಕೊರೊನಾ ಕಾಡಿದ ಸಮಯ 18ರಿಂದ ಸರಣಿ ಚಿಂತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಲಾಕ್‌ಡೌನ್ ಆರಂಭದಿಂದಲೇ ಫೇಸ್‌ಬುಕ್ ಲೈವ್ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿರುವ 'ಪ್ರಜಾವಾಣಿ' ಈಗ ಸರಣಿ ಚಿಂತನ ಮಾಲೆಯೊಂದನ್ನು ಆಯೋಜಿಸುತ್ತಿದೆ.

'ಕೊರೋನಾ ಕಾಡಿದ ಸಮಯ, ಆಗಿದ್ದು - ಆಗಬೇಕಾದ್ದು' ಎಂಬ ಶೀರ್ಷಿಕೆಯಡಿ 10 ದಿನಗಳ ಕಾಲ ನಡೆಯಲಿರುವ ಈ ಚಿಂತನ ಮಾಲೆ ಜೂನ್ 18ರಿಂದ ಪ್ರತಿದಿನ ಸಂಜೆ 6ರಿಂದ 7 ಗಂಟೆಯವರೆಗೆ ಪ್ರಸಾರವಾಗಲಿದೆ. (ಪ್ರಸಾರವಾಗಲಿರುವ ಫೇಸ್‌ಬುಕ್ ಪುಟ fb.com/prajavani.net)

ಕಾರ್ಯಕ್ರಮದ ವಿವರ ಹೀಗಿದೆ



ಶುಕ್ರವಾರ, 18ನೇ ಜೂನ್
ಖ್ಯಾತ ರಂಗ ನಿರ್ದೇಶಕಿ, ಚಲನಚಿತ್ರ ನಟಿ ಹಾಗೂ ಗಾಯಕಿ
ಬಿ.ಜಯಶ್ರೀ
ಸೋಲಿಸ ಬ್ಯಾಡ, ಗೆಲಿಸಯ್ಯ- (ರಂಗಭೂಮಿ)



ಶನಿವಾರ, 19 ನೇ ಜೂನ್
ಪ್ರತಿಭಾ ಪ್ರಹ್ಲಾದ್
ಅಂತರರಾಷ್ಟ್ರೀಯ ನೃತ್ಯ ಕಲಾವಿದೆ ಹಾಗೂ ಮುಖ್ಯ ಸಂಘಟಕಿ, ದೆಹಲಿ ಅಂತರರಾಷ್ಟ್ರೀಯ ಕಲಾ ಉತ್ಸವ
ಶಾಸ್ತ್ರೀಯ ಕಲೆಗಳ ತಹತಹ




ಭಾನುವಾರ, 20 ನೇ ಜೂನ್
ಐ.ಎಂ.ವಿಠಲ ಮೂರ್ತಿ
ನಿವೃತ್ತ ಐಎಎಸ್ ಅಧಿಕಾರಿ
ಆಡಳಿತ ಮತ್ತು ದಕ್ಷತೆ



ಸೋಮವಾರ, 21 ನೇ ಜೂನ್
ಡಾ. ಪುರುಷೋತ್ತಮ ಬಿಳಿಮಲೆ,ನಿವೃತ್ತ ಪ್ರಾಧ್ಯಾಪಕ, ಜೆ. ಎನ್.ಯು. ಕನ್ನಡ ಪೀಠ, ನವದೆಹಲಿ
ಸಾಹಿತಿ ಮತ್ತು ಸಾಹಿತ್ಯ



ಮಂಗಳವಾರ, 22ನೇ ಜೂನ್
ಪ್ರೊ.ಹಿ.ಚಿ.ಬೋರಲಿಂಗಯ್ಯ ವಿಶ್ರಾಂತ ಕುಲಪತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಅನಾಥರಾದ ಜಾನಪದ ಕಲಾವಿದರು



ಬುಧವಾರ, 23 ನೇ ಜೂನ್
ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಕವಿಗಳು
ಶೋಷಿತರ ಸಂಕಟಗಳು



ಗುರುವಾರ, 24 ನೇ ಜೂನ್
ಪ್ರೊ.ಚಂದನ್ ಗೌಡ, ಪ್ರಾಧ್ಯಾಪಕ ಶ್ರೀ ರಾಮಕೃಷ್ಣ ಹೆಗಡೆ ಪೀಠ, ಐಸೆಕ್, ಬೆಂಗಳೂರು.
ಸಾಮಾಜಿಕ ತಲ್ಲಣಗಳು



ಶುಕ್ರವಾರ, 25ನೇ ಜೂನ್
ಡಾ. ನಿರಂಜನಾರಾಧ್ಯ ವಿ.ಪಿ., ಅಭಿವೃದ್ಧಿ ಶಿಕ್ಷಣ ತಜ್ಞ ಹಾಗೂ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯ ಹರಿಕಾರ
ನತದೃಷ್ಟ ಶಾಲಾ ಮಕ್ಕಳು



ಶನಿವಾರ, 26 ನೇ ಜೂನ್
ಬಿ. ಸುರೇಶ, ಚಲನಚಿತ್ರ, ಕಿರುಚಿತ್ರ ನಟ, ನಿರ್ದೇಶಕ ಮತ್ತು ನಿರ್ಮಾಪಕ.
ಬಣ್ಣ ಕಳಚಿದ ಚಿತ್ರ / ಕಿರುತೆರೆ ಕಲಾವಿದರು



ಭಾನುವಾರ, 27 ನೇ ಜೂನ್
ಎನ್.ಮನು ಚಕ್ರವರ್ತಿ, ಸಮಾಜ ಚಿಂತಕ
ಆಗಿದ್ದು- ಆಗಬೇಕಾದ್ದು

ನೇರ ಪ್ರಸಾರದ ಸಮಯ: ಪ್ರತಿ ದಿನ ಸಂಜೆ 6 ರಿಂದ 7
(ರಂಗಕರ್ಮಿ ಶ್ರೀನಿವಾಸ ಕಪ್ಪಣ್ಣ ಅವರ ಸಂಯೋಜನೆಯಲ್ಲಿ ಈ ಸರಣಿ ಚಿಂತನ ಮಾಲೆ ಮೂಡಿಬರಲಿದೆ)

ಮಕ್ಕಳಿಗೆ ವಿದ್ಯಾಭ್ಯಾಸ; ಸಕಲ ನೆರವು– ಶಾಸಕರ ಆಶ್ವಾಸನೆ

ಸೋಲಿಗ ಕುಟುಂಬಕ್ಕೆ ತಾತ್ಕಾಲಿಕ ಆಶ್ರಯ

ಪ್ರಜಾವಾಣಿ ವಾರ್ತೆ



ಮಾಗಡಿ ಪಟ್ಟಣದ ತಿರುಮಲೆ ಕೊಳಚೆ ನಿರ್ಮೂಲನಾ ಮಂಡಳಿ ವಸತಿ ಗೃಹಕ್ಕೆ ಸೋಲಿಗ ಕುಟುಂಬವನ್ನು ಸ್ಥಳಾಂತರಿಸಲಾಗಿದೆ

ಪ್ರಜಾವಾಣಿ ಫಲಶ್ರುತಿ

ಮಾಗಡಿ: ಹಸಿವಿನಿಂದ ಕಂಗಾಲಾಗಿದ್ದ ಸೋಲಿಗ ಕುಟುಂಬಕ್ಕೆ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಾ. ಅಶ್ವತ ನಾರಾಯಣ ಅವರ ಸಲಹೆಯ ಮೇರೆಗೆ ಶಾಸಕ ಎ.ಮಂಜುನಾಥ್, ಪುರಸಭೆ ಮತ್ತು ತಾಲ್ಲೂಕು ಆಡಳಿತ ತಾತ್ಕಾಲಿಕ ವಸತಿ ವ್ಯವಸ್ಥೆ ಮಾಡಿ ಆಶ್ರಯ ನೀಡಿದ್ದಾರೆ.

'ಪ್ರಜಾವಾಣಿ'ಯಲ್ಲಿ ಜೂ.15ರಂದು 'ಸೋಲಿಗ ಕುಟುಂಬ ಹಸಿವಿನಿಂದ ಕಂಗಾಲು' ವಿಶೇಷ ಲೇಖನ ಪ್ರಕಟಿಸಿತ್ತು. ಇದರಿಂದ ಸ್ಥಳೀಯ ಶಾಸಕರು, ತಾಲ್ಲೂಕು ಆಡಳಿತ ಎಚ್ಚೆದ್ದು ಅನುಕೂಲ ಕಲ್ಪಿಸಲು ಮುಂದಾಗಿದೆ.

ಹುಣಸೆ ಮರದ ಕೆಳಗೆ ವಾಸವಾಗಿದ್ದ ನಿರ್ಗತಿಕ ಕುಟುಂಬದವರನ್ನು ಪುರಸಭೆ ಮತ್ತು ತಾಲ್ಲೂಕು ಆಡಳಿತ ವತಿಯಿಂದ ಟೆಂಪೋದಲ್ಲಿ ಕರೆದುಕೊಂಡು ತಿರುಮಲೆ ಬಳಿ ನಿರ್ಮಾಣ ಹಂತದಲ್ಲಿರುವ ವಸತಿಗೆ ಸೇರಿಸಿದರು.

ತಹಶೀಲ್ದಾರ್ ಬಿ.ಜಿ.ಶ್ರೀನಿವಾಸ ಮೂರ್ತಿ, ತಾಲ್ಲೂಕು ಪಂಚಾಯಿತಿ ಇಒ ಟಿ.ಪ್ರದೀಪ್, ಸರ್ಕಲ್ ಇನ್‌ಸ್ಪೆಕ್ಟರ್ ಬಿ.ರವಿ, ಪುರಸಭೆ ಎಂಜಿನಿಯರ್ ಪ್ರಶಾಂತ್. ಶಾಸಕರ ಆಪ್ತ ಸಹಾಯಕ ಸಿಡಗನಹಳ್ಳಿ ವೆಂಕಟೇಶ್, ತಾಲ್ಲೂಕು ಅಲೆಮಾರಿ ಅರೆಅಲೆಮಾರಿ ಸಂಘಟನೆ ಅಧ್ಯಕ್ಷ ಮಾರಯ್ಯ ದೊಂಬಿದಾಸ, ವೆಂಕಟೇಶ್ ಇದ್ದರು.

ಶಾಶ್ವತ ಅನುಕೂಲ: ಶಾಸಕ ಎ.ಮಂಜುನಾಥ್ ಮಾತನಾಡಿ, 'ತಿರುಮಲೆ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಾಣ ಹಂತದಲ್ಲಿನ ಮನೆಯೊಂದರಲ್ಲಿ ವಸತಿ ವ್ಯವಸ್ಥೆ ಕಲ್ಪಿಸಿದ್ದೇವೆ. ಆಧಾರ್ ಕಾರ್ಡ್, ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ಮಾಡಿಸಿಕೊಟ್ಟು, ಭೀಮ ಅವರ ಪುತ್ರ, ಪುತ್ರಿಯರನ್ನು ಸರ್ಕಾರಿ ಶಾಲೆಗೆ ದಾಖಲಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗುತ್ತದೆ. ಅವರ ಜೀವನ ನಿರ್ವಹಣೆಗೆ ಶಾಶ್ವತ ಅನುಕೂಲ ಮಾಡಲಾಗುತ್ತದೆ' ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ ದೂರವಾಣಿ ಮೂಲಕ ಪ್ರತಿಕ್ರಿಯಿಸಿ, 'ನಮ್ಮ ತೋಟದ ಮನೆಯಲ್ಲಿ ವಾಸಕ್ಕೆ ಅನುಕೂಲ ಮಾಡಿಕೊಡುತ್ತೇವೆ, ಕಳಿಸಿಕೊಡಿ ಎಂದು ಸುಂಕುತಿಮ್ಮನ ಪಾಳ್ಯದ ಲಕ್ಷ್ಮೀಕಾಂತ್ ಅವರನ್ನು ಕಳಿಸಿದ್ದೆ. ಭೀಮ ದಂಪತಿ ತೋಟಕ್ಕೆ ಹೋಗುವುದಿಲ್ಲ' ಎಂದರು.

ಬಿಜೆಪಿ ಮುಖಂಡ ಮುನಿರಾಜು ಗೌಡ ಪ್ರತಿಕ್ರಿಯಿಸಿ, ಸೋಲಿಗ ಕುಟುಂಬದ ಮಕ್ಕಳ ವಿದ್ಯಾಭ್ಯಾಸಕ್ಕೆ ತಗಲುವ ವೆಚ್ಚ ಭರಿಸುವುದಾಗಿ ತಿಳಿಸಿದರು.

ಸ್ಪಂದಿಸಿದ 'ಪ್ರಜಾವಾಣಿ' ಓದುಗರು

'ಪ್ರಜಾವಾಣಿ' ಓದುಗರಾದ ಆನೇಕಲ್ ತಾಲ್ಲೂಕು ಬೊಮ್ಮಸಂದ್ರದ ನಿವಾಸಿಗಳಾದ ಕವಿತಾ ಮತ್ತು ಶ್ರೀನಿವಾಸ್, ಸೋಲಿಗ ಕುಟುಂಬಕ್ಕೆ ಟೆಂಟ್, ನೂತನ ಉಡುಪುಗಳು, ಎಣ್ಣೆ, ಬೇಳೆ, ಬೆಲ್ಲ, ಅಕ್ಕಿ, ತರಕಾರಿ, ಹಣ್ಣು ಹಂಪಲು, ನೀಡಿದರು.

'ಪ್ರಜಾವಾಣಿ' ಓದುಗ ಶ್ರೀಪತಿಹಳ್ಳಿ ವಾಸು ₹5 ಸಾವಿರ ನಗದನ್ನು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಸ್ವಾಮಿ ಅವರಿಗೆ ನೀಡಿ, ಸೋಲಿಗ ಕುಟುಂಬಕ್ಕೆ ಅನುಕೂಲ ಮಾಡುವಂತೆ ತಿಳಿಸಿದರು. ಬೆಂಗಳೂರಿನ ಕಿರಣ ಮತ್ತು ಇತರೆ ಸಹಸ್ರಾರು ಓದುಗರು 'ಪ್ರಜಾವಾಣಿ' ಪತ್ರಿಕೆ ಓದಿ ಪ್ರತಿಕ್ರಿಯೆ ವ್ಯಕ್ತಪಡಿಸಿ, ತಮ್ಮಿಂದಾಗುವ ನೆರವು ನೀಡುವುದಾಗಿ ತಿಳಿಸಿದರು.

ಬಿಬಿಎಂಪಿ: ಬಸವನಗುಡಿ ಇ.ಇ. ಕಚೇರಿ ಸ್ಥಳಾಂತರ

ಬೆಂಗಳೂರು: ಬಿಬಿಎಂಪಿಯ ದಕ್ಷಿಣ ವಲಯದ ಬಸವನಗುಡಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಕಚೇರಿಯನ್ನು ಬನಶಂಕರಿ ಮೂರನೇ ಹಂತಕ್ಕೆ ಸ್ಥಳಾಂತರಿಸಲಾಗಿದೆ.

ತ್ಯಾಗರಾಜನಗರದ ಸಿ.ಟಿ. ಬೆಡ್‌ನ ಸಿ.ಕೆ.ಅಚ್ಚುಕಟ್ಟು ಮೈದಾನದ ಬಳಿಯ ಬಿಬಿಎಂಪಿ ಕಟ್ಟಡದಲ್ಲಿ ಬಸವನಗುಡಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಕಚೇರಿ ಇತ್ತು. ಈ ಸ್ಥಳದಲ್ಲಿ ವಿವಿಧೋದ್ದೇಶ ಬಳಕೆಯ ಕಟ್ಟಡ ನಿರ್ಮಾಣವಾಗಲಿದೆ. ಹಾಗಾಗಿ ಈಗಿರುವ ಕಟ್ಟಡವನ್ನು ತೆರವುಗೊಳಿಸಬೇಕಿದೆ. ಹಾಗಾಗಿ ಕಚೇರಿಯನ್ನು ಸ್ಥಳಾಂತರಿಸಲಾಗುತ್ತಿದೆ ಎಂದು ಕಾರ್ಯಪಾಲಕ ಎಂಜಿನಿಯರ್ ಧೀರೇಂದ್ರ ಕುಮಾರ್ ಮಾಹಿತಿ ನೀಡಿದ್ದಾರೆ.

ಕಚೇರಿಯ ಹೊಸ ವಿಳಾಸ: ಬನಶಂಕರಿ 3ನೇ ಹಂತ, ಶ್ರೀಕಂಠೇಶ್ವರ ಪಾರ್ಕ್, ವಿದ್ಯಾಪೀಠ ವಾರ್ಡ್, ಬೆಂಗಳೂರು ಒನ್ ಹತ್ತಿರ, ಬಿಬಿಎಂಪಿ ಕಟ್ಟಡ, ಚೆನ್ನಮ್ಮನಕೆರೆ ಅಚ್ಚುಕಟ್ಟು ಬೆಂಗಳೂರು-85.

ನಟ ಸಂಚಾರಿ ವಿಜಯ್‌ಗೆ ಚಿತ್ರರಂಗದಿಂದ ಕಂಬನಿಯ ವಿದಾಯ; ಹುಟ್ಟೂರು ಪಂಚನಹಳ್ಳಿಯಲ್ಲಿ ಅಂತ್ಯಕ್ರಿಯೆ

‘ಇಲ್ಲಿ ಹುಟ್ಟಿದೆ, ಅಲ್ಲಿ ಬದುಕಿದೆ...’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೂರ ತೀರದ ಕೂಗು ನಿನಗೀಗ ಕೇಳಿದೆ ಹೋಗು, ಇಲ್ಲಿ ಹುಟ್ಟಿದೆ ಅಲ್ಲಿ ಬದುಕಿದೆ...’ ತಾನೇ ನಟಿಸಿದ ‘ನಾನು ಅವನಲ್ಲ, ಅವಳು’ ಚಿತ್ರದ ಹಾಡಿಗೆ ಓಗೊಟ್ಟಂತೆ ಮೌನವಾಗಿಯೇ ನಡೆದಿದ್ದಾರೆ ನಟ ಸಂಚಾರಿ ವಿಜಯ್.

ಸಾವಿನ ಆಘಾತವನ್ನು ವಿಜಯ್ ಕುಟುಂಬಸ್ಥರಾಗಲಿ, ಸ್ನೇಹಿತರು, ರಂಗಭೂಮಿ ಹಾಗೂ ಚಿತ್ರರಂಗದ ಸಹಕಲಾವಿದರು ಕೊನೆಯಲ್ಲಿ ಕಳೆದ ಕೆಲ ವಾರಗಳಿಂದ ಜೊತೆಯಲ್ಲಿಯೇ ಇದ್ದ ‘ಉಸಿರು’ ತಂಡದ ಸದಸ್ಯರಾಗಲಿ ಒಪ್ಪಿಕೊಳ್ಳಲು ತಯಾರಿರಲಿಲ್ಲ. ಇದಕ್ಕೆ ಸಾಕ್ಷ್ಯ ಎಂಬಂತಿತ್ತು ರವೀಂದ್ರ ಕಲಾಕ್ಷೇತ್ರದ ಆವರಣ.

ಸಾವಿನಲ್ಲೂ ಸಾರ್ಥಕತೆ ಮೆರೆದು, ಇತರರಲ್ಲಿ ತಾನು ಜೀವಿಸಿದ ಅವರ ಕಾರ್ಯ ಜನಸಮೂಹವನ್ನೇ ರವೀಂದ್ರ ಕಲಾಕ್ಷೇತ್ರದತ್ತ ಸೆಳೆದಿತ್ತು. ಪಾರ್ಥಿವ ಶರೀರವನ್ನು ಕಲಾಕ್ಷೇತ್ರಕ್ಕೆ ತರುತ್ತಿದ್ದಂತೆ ಸ್ನೇಹಿತರು ಹಾಗೂ ಕುಟುಂಬಸ್ಥರ ಕಣ್ಣೀರಿನ ಕಟ್ಟೆ ಒಡೆದಿತ್ತು. ಅಣ್ಣನನ್ನು ಕಳೆದುಕೊಂಡ ಸಿದ್ದೇಶ್ ಅವರ ಸಂಕಟ, ಶಿಷ್ಯನನ್ನು ಕಳೆದುಕೊಂಡ ಮಂಗಳ ಅವರ ನೋವು ಮುಖಗವಸಿನ ಒಳಗೆ ಮುಖಭಾವನೆ ಮರೆಯಾಗಿದ್ದರೂ, ಕಣ್ಣಿನಲ್ಲೇ ಸ್ಪಷ್ಟವಾಗುತ್ತಿತ್ತು.



ಸಂಚಾರಿ ವಿಜಯ್ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದ ನಟ ಶಿವರಾಜ್‌ಕುಮಾರ್ –ಪ್ರಜಾವಾಣಿ ಚಿತ್ರ

ಅವರು ಇವತ್ತೇ ನಗುತ್ತಿಲ್ಲ: ‘ನಾನು ಅವನಲ್ಲ, ಅವಳು’ ಚಿತ್ರದ ಸಹನಟ ಸುಂದರ್ ವೀಣಾ, ‘ವಿಜಯ್ ಜೊತೆ ನಟಿಸಿದ್ದು ದೊಡ್ಡ ಅನುಭವ. ಇವತ್ತೇ ಮೊದಲು ಅವನು ನಗದಿರುವುದನ್ನು ನೋಡುತ್ತಿದ್ದೇನೆ’ ಎಂದು ಭಾವುಕರಾದರು.

‘ನಾನು ಅವನಲ್ಲ, ಅವಳು’ ಚಿತ್ರದ ಪಾತ್ರಕ್ಕೆ ಜೀವ ತುಂಬಲು ನಮ್ಮನ್ನು ಸಂಪರ್ಕಿಸಿ ಹಲವು ಬಾರಿ ಚರ್ಚೆ ನಡೆಸಿದ್ದರು’ ಎಂದರು ಸಾಮಾಜಿಕ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ.

ಕಲಿಯುವ ಆಸಕ್ತಿ ಇತ್ತು: ವಿಜಯ್ ಜೊತೆಗಿನ ಒಡನಾಟ ನೆನಪಿಸಿಕೊಂಡ ನಟ ಶಿವರಾಜ್‌ಕುಮಾರ್, ‘ಇಷ್ಟು ಚಿಕ್ಕ ವಯಸ್ಸಿನಲ್ಲಿ ದೂರ ಹೋಗುವುದು ನಮಗಿಂತ ಅವರ ಕುಟುಂಬಕ್ಕೇ ಹೆಚ್ಚಿನ ನೋವು ನೀಡಿರುತ್ತದೆ. ‘ಕಿಲ್ಲಿಂಗ್ ವೀರಪ್ಪನ್’ ಚಿತ್ರದ ಚಿತ್ರೀಕರಣದಲ್ಲಿ ಅವರನ್ನು ಹತ್ತಿರದಿಂದ ನೋಡಿದ್ದೆ. ವಿಭಿನ್ನವಾಗಿ ನಟಿಸುವ ಆಸೆ, ಕಲಿಯುವ ಆಸಕ್ತಿಯನ್ನು ಗಮನಿಸಿದ್ದೆ. ಅಂಗಾಂಗ ದಾನದಿಂದ ಅವರ ಒಟ್ಟು ವ್ಯಕ್ತಿತ್ವವೂ ತಿಳಿಯುತ್ತದೆ’ ಎಂದರು.

ಕಿಲ್ಲಿಂಗ್ ವೀರಪ್ಪನ್ ಚಿತ್ರದಲ್ಲಿ ನಟಿಸಿದ ನಟಿ ಪಾರುಲ್ ಯಾದವ್, ‘ಅವರು ತುಂಬಾ ಸರಳ ವ್ಯಕ್ತಿಯಾಗಿದ್ದರು. ತೋರಿಕೆ ಇರಲಿಲ್ಲ’ ಎಂದು ಕಣ್ಣೀರಿಟ್ಟರು.

ಸ್ನೇಹಿತನ ಕಳೆದುಕೊಂಡ ನಟ ನೀನಾಸಂ ಸತೀಶ್ ಅತೀವ ದುಃಖದಲ್ಲಿದ್ದರು. ‘ಇಂತಹ ಸ್ಥಿತಿ ಬರುತ್ತದೆ ಎಂದುಕೊಂಡಿರಲಿಲ್ಲ. ಹೋಟೆಲ್‌ನಲ್ಲಿ ಕೆಲಸ ಮಾಡಿ ತಮ್ಮಂದಿರನ್ನು ಓದಿಸಿ, ಊರಿನಲ್ಲಿ ಜಾತಿ ಸಮಸ್ಯೆ ಸೇರಿ ಬೇರೆ ಸಮಸ್ಯೆಯನ್ನು ಮೀರಿ ಬೆಳೆದಿದ್ದ. ಈಗ ಇಲ್ಲ ಎಂದು ನಂಬಲಾಗುತ್ತಿಲ್ಲ’ ಎಂದು ದುಃಖ ತಾಳದೆ ಕಣ್ಣೀರಾದರು.

‘ಶಂಕರ್‌ನಾಗ್, ಕರಿಬಸವಯ್ಯ, ಸುನಿಲ್ ಸಾಲಿಗೆ ಇವರೊಬ್ಬರು ಸೇರ್ಪಡೆಯಾದರು. ಇದು ಸಾವಿನ ಅಟ್ಟಹಾಸ. ಈ ದುರಂತದ ಸರಮಾಲೆ ಕೊನೆಯಾಗಲಿ

ನಾಗತಿಹಳ್ಳಿ ಚಂದ್ರಶೇಖರ್, ನಿರ್ದೇಶಕ

ಅಂಗಾಂಗ ದಾನ ಮಾಡಿದ ಕುಟುಂಬಕ್ಕೆ ಧನ್ಯವಾದ. ರಾಷ್ಟ್ರಪ್ರಶಸ್ತಿ ಪಡೆದ ಅವರಿಗೆ ಅಹಂಕಾರ ಇರಲಿಲ್ಲ. ಹೆಲ್ಮೆಟ್ ಇದ್ದಿದ್ದರೆ ಬದುಕುತ್ತಿದ್ದರೋ ಏನೋ.

ಮುಖ್ಯಮಂತ್ರಿ ಚಂದ್ರು, ನಟ

ಸಾವಿನಲ್ಲೂ ಸಾರ್ಥಕತೆ

ಬೆಂಗಳೂರು: ನಟ ಸಂಚಾರಿ ವಿಜಯ್ ಅವರು ಯಕೃತ್ತು, ಮೂತ್ರಪಿಂಡ ಸೇರಿದಂತೆ ವಿವಿಧ ಅಂಗಾಂಗಳನ್ನು ದಾನವಾಗಿ ನೀಡುವ ಮೂಲಕ ಸಾವಿನಲ್ಲೂ ಸಾರ್ಥಕತೆ ಕಂಡಿದ್ದಾರೆ. ಅವರಿಂದ ದಾನ ಪಡೆದ ಅಂಗಾಂಗಳನ್ನು ಗಂಭೀರ ಕಾಯಿಲೆ ಎದುರಿಸುತ್ತಿದ್ದವರಿಗೆ ಕಸಿ ಮಾಡಲಾಗಿದೆ.

ಅವರ ಮಿದುಳು ನಿಷ್ಕ್ರಿಯಗೊಂಡಿರುವುದನ್ನು ಸೋಮವಾರ ಘೋಷಿಸಿದ್ದ ಅಪೋಲೊ ಆಸ್ಪತ್ರೆಯ ವೈದ್ಯರು, ಕುಟುಂಬದ ಸದಸ್ಯರಿಂದ ಅಂಗಾಂಗ ದಾನದ ಪ್ರಕ್ರಿಯೆಗೆ ಸಮ್ಮತಿ ಪಡೆದಿದ್ದರು. ಬಳಿಕ ಅಂಗಾಂಗಳನ್ನು ಬೇರ್ಪಡಿಸಿ, ಸರ್ಕಾರದ ಜೀವಸಾರ್ಥಕತೆ ಸಂಸ್ಥೆಯಡಿ ಹೆಸರು ನೋಂದಣಿ ಮಾಡಿದ್ದ, ಅಂಗಾಂಗ ವೈಫಲ್ಯವಾಗಿರುವವರಿಗೆ ಕಸಿ ಮಾಡಲಾಗಿದೆ.

‘ಯಕೃತ್ತು, ಎರಡು ಮೂತ್ರಪಿಂಡ, ಹೃದಯದ ಕವಾಟ ಹಾಗೂ ಕಾರ್ನಿಯಾವನ್ನು ದಾನವಾಗಿ ಪಡೆಯಲಾಗಿದೆ. ಸಂಸ್ಥೆಯಲ್ಲಿ ಹೆಸರು ನೋಂದಾಯಿಸಿ, ಅಂಗಾಂಗಕ್ಕೆ ಎದುರು ನೋಡುತ್ತಿದ್ದವರಿಗೆ ಕಸಿ ಮಾಡಲು ಒದಗಿಸಲಾಗುತ್ತಿದೆ. ಯಕೃತ್ತನ್ನು 50 ವರ್ಷದ ಪುರುಷನಿಗೆ ನೀಡಲಾಗಿದೆ. ಎಡ ಮೂತ್ರಪಿಂಡವು 57 ವರ್ಷದ ಪುರುಷನಿಗೆ ನೆರವಾಗಿದ್ದು, ಈ ಎರಡೂ ಕಸಿಯನ್ನು ಅಪೋಲೊ ಆಸ್ಪತ್ರೆಯಲ್ಲೇ ನಡೆಸಲಾಗಿದೆ. ಬಲ ಮೂತ್ರಪಿಂಡವನ್ನು 34 ವರ್ಷದ ಮಹಿಳೆಗೆ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಕಸಿ ಮಾಡಲಾಗಿದೆ’ ಎಂದು ಜೀವಸಾರ್ಥಕತೆ ಸಂಸ್ಥೆಯು ತಿಳಿಸಿದೆ.

‘ಹೃದಯದ ಕವಾಟವನ್ನು ಜಯದೇವ ಹೃದ್ರೋಗ ಸಂಸ್ಥೆಗೆ ಹಾಗೂ ಕಾರ್ನಿಯಾವನ್ನು ಮಿಂಟೊ ಕಣ್ಣಿನ ಆಸ್ಪತ್ರೆಗೆ ನೀಡಲಾಗಿದೆ. ನೋಂದಾಯಿತ ಅರ್ಹರನ್ನು ಗುರುತಿಸಿ, 14 ದಿನಗಳಲ್ಲಿ ಕಸಿ ಮಾಡಲಾಗುತ್ತದೆ. ಈ ಎಲ್ಲ ಪ್ರಕ್ರಿಯೆಗಳು ಕಾನೂನಾತ್ಮಕವಾಗಿ ನಡೆಯುತ್ತದೆ. ಸಂಚಾರಿ ವಿಜಯ್ ಅವರ ಅಂಗಾಂಗಗಳು ಏಳು ಮಂದಿಗೆ ನೆರವಾಗಲಿದೆ’ ಎಂದು ಸಂಸ್ಥೆ ಹೇಳಿದೆ.

ಪಂಚಭೂತಗಳಲ್ಲಿ ಲೀನ

ಚಿಕ್ಕಮಗಳೂರು: ರಾಷ್ಟ್ರಪ್ರಶಸ್ತಿ ಪುರಸ್ಕೃತ ನಟ ಸಂಚಾರಿ ವಿಜಯ್ (ಬಿ. ವಿಜಯಕುಮಾರ್) ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವಗಳೊಂದಿಗೆ ಕಡೂರು ತಾಲ್ಲೂಕಿನ ಪಂಚನಹಳ್ಳಿಯಲ್ಲಿ ಮಂಗಳವಾರ ನೆರವೇರಿತು.

ವಿಜಯ್ ಅವರ ಸ್ನೇಹಿತ ರಾಘವೇಂದ್ರ ಅವರ ತೋಟದಲ್ಲಿ ವೀರಶೈವ ಸಂಪ್ರದಾಯದಂತೆ ಮಧ್ಯಾಹ್ನ 3.15ಕ್ಕೆ ಅಂತ್ಯಸಂಸ್ಕಾರ ನಡೆಯಿತು. ಆಡಿ ಬೆಳೆದ ಊರಿನ ಮಣ್ಣಿನಲ್ಲಿ ವಿಜಯ್ ಲೀನವಾದರು.

ಅಣ್ಣ ವಿರೂಪಾಕ್ಷ ಮತ್ತು ತಮ್ಮ ಸಿದ್ದೇಶ್ ವಿಧಿ ವಿಧಾನ ನೆರವೇರಿಸಿದರು. ಕುಪ್ಪೂರು ಗದ್ದಿಗೆ ಮಠದ ಯತೀಶ್ವರ ಸ್ವಾಮೀಜಿ, ಮಾಡಾಳು ನಿರಂಜನ ಪೀಠದ ರುದ್ರಮುನಿ ಸ್ವಾಮೀಜಿ ವಿಧಿ ನಿರ್ವಹಿಸಿದರು.

ಪ್ರಜಾವಾಣಿ

ನಾನು ಲಸಿಕೆ ಹಾಕಿಸಿಕೊಂಡೆ ನೀವು?



ಕೊನೆಗೊಳಿಸುವ ಸಮಯ ಈಗ ಬಂದಿದೆ

ಇಷ್ಟೊಂದು ಕ್ರೂರವಾದ ಖಳನನ್ನು ನಾವು ಎಲ್ಲಿಯೂ ನೋಡಿರಲಿಲ್ಲ. ಹೌದು, ನಾನು ಕೊರೊನಾ ವೈರಸ್ ಕುರಿತು ಮಾತನಾಡುತ್ತಿರುವೆ. ಅದು ನಮ್ಮೆಲ್ಲರನ್ನು ಮನೆಯೊಳಗೆ ಲಾಕ್ ಮಾಡಿಬಿಟ್ಟಿದೆ. ಎಲ್ಲಿ ನೋಡಿದರೂ ಸಾವು ನೋವು. ಇದನ್ನೆಲ್ಲಾ ನೋಡಲು, ಓದಲು ತುಂಬಾ ಕಷ್ಟ ಆಗುತ್ತಿದೆ. ಆದರೆ, ಅಂತಹ ಸಂಕಷ್ಟವನ್ನು ಕೊನೆಗೊಳಿಸುವ ಸಮಯ ಈಗ ಬಂದಿದೆ. ಬನ್ನಿ ನಾವೆಲ್ಲಾ ಸುರಕ್ಷಿತವಾಗಿರೋಣ. ಲಸಿಕೆ ತೆಗೆದುಕೊಂಡು ಎಲ್ಲರೂ ಸುರಕ್ಷಿತವಾಗಿರೋಣ. ನೀವು ತಪ್ಪದೆ ಲಸಿಕೆ ಹಾಕಿಸಿಕೊಳ್ಳಿ.

ಪ್ರಿಯಾಮಣಿ, ನಟಿ

ಲಸಿಕೆ ಪಡೆಯಿರಿ; ಪಿಡುಗು ತಡೆಯಿರಿ

#ವ್ಯಾಕ್ಸಿನ್‌ಗೆ ಜೈ ಕೊರೊನಾಗೆ ಬೈ

‘ಮೆಣಸಿನಕಾಯಿ ಬೀಜ ಇಲಾಖೆ ವಿತರಿಸಿಲ್ಲ’

ಚಾಮರಾಜನಗರ: ‘ಮೆಣಸಿನ ಬಿತ್ತನೆ ಬೀಜವನ್ನು ಸರ್ಕಾರ ಪೂರೈಕೆ ಮಾಡುವುದಿಲ್ಲ. ಸಿಜೆಂಟಾ ಎಂಬ ಖಾಸಗಿ ಕಂಪನಿ ಪೂರೈಸುತ್ತದೆ’ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದ್ದಾರೆ.

ಬಳ್ಳಾರಿಯಲ್ಲಿ ಮೆಣಸಿನಕಾಯಿ ಬೀಜ ಖರೀದಿಗೆ ಜನರು ಮುಗಿಬಿದ್ದು, ಪೊಲೀಸರು ಲಾಠಿ ಪ್ರಹಾರ ಮಾಡಿದ ಘಟನೆಯ ಬಗ್ಗೆ ಕೇಳಿದ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

‘ಆ ಮೆಣಸಿಗೆ ಹೆಚ್ಚು ಬೇಡಿಕೆ ಇರುವುದರಿಂದ ಸ್ವಲ್ಪ ಹೆಚ್ಚು ಕಡಿಮೆ ಆಗಿದೆ. ನಾವು 14 ಬೆಳೆಗಳಿಗೆ ಮಾತ್ರ ಸಬ್ಸಿಡಿ ಕೊಟ್ಟು ಬೀಜ ಪೂರೈಸುತ್ತೇವೆ’ ಎಂದು ಸಚಿವರು ಸ್ಪಷ್ಟಪಡಿಸಿದರು.

‘ಖಾಸಗಿ ಬಸ್‌ಗಳು ರಸ್ತೆಗೆ ಇಳಿಯಲ್ಲ’


ಮಂಗಳೂರು: ‘ಖಾಸಗಿ ಬಸ್ ಮಾಲೀಕರ ಬೇಡಿಕೆಗೆ ರಾಜ್ಯ ಸರ್ಕಾರ ಸ್ಪಂದಿಸಿಲ್ಲ. ಹೀಗಾಗಿ, ರಾಜ್ಯದಲ್ಲಿ ಲಾಕ್‌ಡೌನ್ ಸಡಿಲಿಕೆಯಾದರೂ ಬಸ್‌ಗಳನ್ನು ರಸ್ತೆಗೆ ಇಳಿಸದಿರಲು ನಿರ್ಧರಿಸಲಾಗಿದೆ’ ಎಂದು ರಾಜ್ಯ ಖಾಸಗಿ ಬಸ್ ಮಾಲೀಕರ ಒಕ್ಕೂಟದ ಅಧ್ಯಕ್ಷ ರಾಜವರ್ಮ ಬಲ್ಲಾಳ್ ತಿಳಿಸಿದ್ದಾರೆ.

‘ಒಂದು ವರ್ಷದಿಂದ ಖಾಸಗಿ ಬಸ್ ಮಾಲೀಕರು ಸಂಕಷ್ಟದಲ್ಲಿದ್ದಾರೆ. ಡೀಸೆಲ್ ದರ ಏರಿದ್ದರೂ ಪ್ರಯಾಣ ದರ ಹೆಚ್ಚಳಕ್ಕೆ ಸರ್ಕಾರ ಒಪ್ಪುತ್ತಿಲ್ಲ. ಮತ್ತಷ್ಟು ನಷ್ಟ ಅನುಭವಿಸಲು ನಾವು ಸಿದ್ಧರಿಲ್ಲ. ಸರ್ಕಾರ ತಕ್ಷಣ ನಮ್ಮನ್ನು ಮಾತುಕತೆಗೆ ಕರೆದು, ಸಮಸ್ಯೆಯನ್ನು ಆಲಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘50 ಸಾವಿರಕ್ಕೂ ಅಧಿಕ ಖಾಸಗಿ ಬಸ್ ಕಾರ್ಮಿಕರು ಕೆಲಸವಿಲ್ಲದೆ ತೊಂದರೆಯಲ್ಲಿದ್ದಾರೆ. ಸರ್ಕಾರ ತಕ್ಷಣ ನೆರವು ನೀಡಬೇಕು’ ಎಂದು ಒತ್ತಾಯಿಸಿದರು.


ಪ್ರಜಾವಾಣಿ ಬುಧವಾರ, 16 ಜೂನ್ 2021

ತಂತ್ರಜ್ಞಾನ





ಇತ್ತೀಚೆಗೆ ಸಾಮಾಜಿಕ ಮಾಧ್ಯಮದಲ್ಲಿ ತೀರಾ ಕ್ಲೀಷೆ ಶೀರ್ಷಿಕೆಗಳಿರುವ ಸುದ್ದಿಗಳು 'ಬೆಚ್ಚಿ ಬೀಳ್ತೀರಾ...', '...ಗೊತ್ತಾ?' – ಎಂಬಂಥ ಶಬ್ದಗಳೇ ಪುನರಾವರ್ತನೆ ಆಗುತ್ತಿರುತ್ತವೆ. ಇಂಥ ಸುದ್ದಿ ತಡೆಯುವುದು ಹೇಗೆ?



ಹುಷಾರ್! ಬೆಚ್ಚಿಬೀಳಬೇಡಿ!!

ಕೃಷ್ಣ ಭಟ್

ಇತ್ತೀಚೆಗೆ ಸಾಮಾಜಿಕ ಮಾಧ್ಯಮದಲ್ಲಿ ತೀರಾ ಕ್ಲೀಷೆ ಶೀರ್ಷಿಕೆಗಳಿರುವ ಸುದ್ದಿಗಳು ಹೆಚ್ಚು ಹೆಚ್ಚು ಕಣ್ಣಿಗೆ ಬೀಳುತ್ತಿವೆ. ಶೀರ್ಷಿಕೆಯಲ್ಲಿ 'ಬೆಚ್ಚಿ ಬೀಳ್ತೀರಾ...', '...ಗೊತ್ತಾ?' – ಎಂಬಂಥ ಶಬ್ದಗಳೇ ಪುನರಾವರ್ತನೆಯಾಗುತ್ತಿರುತ್ತವೆ. ಆದರೆ ಆ ಸುದ್ದಿಯ ಒಳ ಹೋದರೆ, ಅದರಲ್ಲಿ ಒಂದು ಸಾಲಿನ ಸುದ್ದಿಯನ್ನು ಬಿಟ್ಟು ಬೇರೇನೂ ಇರುವುದಿಲ್ಲ. ಇಂಥ ಸುದ್ದಿಗಳಿಗೆ ಸೋಷಿಯಲ್ ಮೀಡಿಯಾಗಳೇ ಬಂಡವಾಳ. ಫೇಸ್‌ಬುಕ್‌ನಲ್ಲಿ ಇನ್‌ಸ್ಟಂಟ್ ಆರ್ಟಿಕಲ್ ಎಂಬ ಫೀಚರ್ ಇದೆ. ಇದನ್ನು ಕಳೆದ ಒಂದೆರಡು ವರ್ಷದ ಹಿಂದೆ ಭಾರತದಲ್ಲಿ ಪರಿಚಯಿಸಲಾಗಿತ್ತು. ಅಂದಿನಿಂದ ಈ ರೀತಿಯ 'ಬೆಚ್ಚಿ ಬೀಳಿಸುವ...' ಸುದ್ದಿಯ ಹಾವಳಿ ಶುರುವಾಯಿತು.

ಅಷ್ಟಕ್ಕೂ ಇದೇನೂ ಹೊಸ ಟ್ರೆಂಡ್ ಅಲ್ಲ. ಕೆಲವು ವರ್ಷಗಳ ಹಿಂದೆ ಟ್ಯಾಬ್ಲಾಯ್ಡ್ ಭಾರಿ ಪ್ರಚಾರಕ್ಕೆ ಬಂದಾಗ, ಅದರಲ್ಲಿ ಬೇರೆ ರೀತಿಯಲ್ಲಿ ದುಡ್ಡು ಮಾಡಬಹುದು ಅಂತ ಗೊತ್ತಾದಾಗ ಗಲ್ಲಿ ಗಲ್ಲಿಗೂ ಒಂದೊಂದು ಟ್ಯಾಬ್ಲಾಯ್ಡ್ ಹುಟ್ಟಿಕೊಂಡಿದ್ದವು. ಅದರ ಭಾಷೆಯೂ ಹೀಗೇ ಕ್ಲೀಷೆಯಾಗಿಯೇ ಇರುತ್ತಿದ್ದವು. ಆದರೆ, ಕಾಲ ಸರಿದ ಹಾಗೆ ಟ್ಯಾಬ್ಲಾಯ್ಡ್ ಟ್ರೆಂಡ್ ಕಡಿಮೆಯಾದ ಮೇಲೆ ಅವು ಮಾರುಕಟ್ಟೆಯಿಂದ ಮಾಯವಾದವು. ಇಂಟರ್ನೆಟ್ ಬಂದ ಮೇಲೆ ಈ ಮನಃಸ್ಥಿತಿ ಒಂಚೂರು ಬದಲಾಗಿ 'ಬೆಚ್ಚಿ ಬೀಳಿಸುವ...' ಕೆಲಸ ಶುರುವಾಗಿದೆ. ಇದಕ್ಕೆ ಈ ಸುದ್ದಿ ಮಾಡುವವರು ಎಷ್ಟು ಕಾರಣವೋ ಅಷ್ಟೇ ಪ್ರಮಾಣದಲ್ಲಿ ಫೇಸ್‌ಬುಕ್ ಮತ್ತು ನಾವೂ ಕಾರಣ.

ಫೇಸ್‌ಬುಕ್ ತನ್ನ ಅಲ್ಗಾರಿಥಂನಲ್ಲಿ ಇಂಥದ್ದೇ ಕಂಟೆಂಟ್ ಅನ್ನು ಹೆಚ್ಚು ನೋಡುತ್ತಾರೆ ಎಂಬುದನ್ನು ಕಂಡುಕೊಂಡು ಅದನ್ನೇ ಹೆಚ್ಚು ಹೆಚ್ಚು ನಮ್ಮ ಟೈಮ್‌ಲೈನ್‌ನಲ್ಲಿ ತೋರಿಸುತ್ತದೆ. ತಮಾಷೆ ಅಂದರೆ, ಇದೇ ವೆಬ್‌ಸೈಟ್‌ಗಳು ಗಂಭೀರವಾದ ಸುದ್ದಿ ಹಾಕಿದರೆ ಅದಕ್ಕೆ ಪ್ರಚಾರ ಸಿಗುವುದಿಲ್ಲ.

ವೆಬ್‌ಸೈಟ್‌ಗಳು ಒಂದು ಸುದ್ದಿಯನ್ನು ತಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟ ಮಾಡಿಕೊಂಡು, ಅದೇ ಸುದ್ದಿಯನ್ನು ಇನ್‌ಸ್ಟಂಟ್ ಆರ್ಟಿಕಲ್ ಆಗಿ ಫೇಸ್‌ಬುಕ್‌ನಲ್ಲಿ ಪ್ರಕಟಿಸುತ್ತವೆ. ದಿನಕ್ಕೆ ನಾಲ್ಕಾರು ಸುದ್ದಿಯನ್ನು ಇನ್‌ಸ್ಟಂಟ್ ಆರ್ಟಿಕಲ್ ಆಗಿ ಹಾಕುತ್ತ ಹೋಗಿ, ತಿಂಗಳಿಗೆ 40-50 ಸಾವಿರ ದುಡಿಯುವ ಸಣ್ಣ ಪುಟ್ಟ ವೆಬ್‌ಸೈಟ್‌ಗಳಿವೆ.

ಫೇಸ್‌ಬುಕ್ ಯಾವ ರೀತಿಯ ಲೇಖನಗಳನ್ನು ಹೆಚ್ಚು ಪ್ರೋತ್ಸಾಹಿಸುತ್ತದೆ ಎಂಬ ನಾಡಿಮಿಡಿತ ಸಿಕ್ಕರೆ ಸಾಕು. ಇವರು ಗೂಗಲ್ ಟ್ರಾನ್ಸ್‌ಲೇಟ್‌ನಿಂದಲಾದರೂ ವಿಷಯವನ್ನು ಅನುವಾದ ಮಾಡಿ, ಚೆಂದದ ಶೀರ್ಷಿಕೆ ಅಂಟಿಸಿ ಇನ್‌ಸ್ಟಂಟ್ ಆರ್ಟಿಕಲ್ ಮಾಡ್ತಾರೆ. ಅದನ್ನು ಫೇಸ್‌ಬುಕ್ ಒಂದು ದಿನಕ್ಕೆ ಸಾವಿರಾರು ವೀಕ್ಷಣೆ ಸಿಗುವ ಹಾಗೆ ಪ್ರಚಾರ ಮಾಡುತ್ತದೆ. ಎಲ್ಲರ ಟೈಮ್‌ಲೈನ್‌ನಲ್ಲೂ ಅದು ಕಾಣಿಸಿಕೊಳ್ಳುತ್ತದೆ. ಇನ್‌ಸ್ಟಂಟ್ ಆರ್ಟಿಕಲ್ ಮಾಡಿದರೆ, ಫೇಸ್‌ಬುಕ್‌ನದೇ ಬ್ರೌಸರ್‌ನಲ್ಲಿ ಸುದ್ದಿ ಓದಲು ಸಿಗುತ್ತದೆ. ಮೂರು ಸಾಲು ಸುದ್ದಿಯ ಮಧ್ಯೆ ಒಂದು ಜಾಹೀರಾತನ್ನು ಫೇಸ್‌ಬುಕ್ ತೋರಿಸುತ್ತದೆ. ಇಷ್ಟು ವೀಕ್ಷಣೆಗಳಿಗೆ ಇಷ್ಟು ಹಣ ಎಂದು ನಿಗದಿ ಮಾಡಿಕೊಂಡು ಫೇಸ್‌ಬುಕ್ ಈ ಲೇಖನವನ್ನು ಪ್ರಕಟಿಸಿದವನಿಗೆ ಕೊಡುತ್ತದೆ.

ಇಂಥ ಸುದ್ದಿ ತಡೆಯುವುದು ಹೇಗೆ?

ಇಂಥ ಸುದ್ದಿಯನ್ನು ನಮ್ಮ ಟೈಮ್‌ಲೈನ್‌ನಲ್ಲಿ ಕಾಣಿಸಿಕೊಳ್ಳದಂತೆ ತಡೆಯುವ ಅಧಿಕಾರ, ವಿಧಾನ ಕೈಯಲ್ಲೇ ಇದೆ.

- ಮೊದಲು, ನಾವು ಇಂಥ ಸುದ್ದಿ ಬಂದಾಗ ಅದರ ಶೀರ್ಷಿಕೆ ಓದುವುದಕ್ಕೂ ನಿಲ್ಲಬಾರದು. ಈ ಹಿಂದಿನ ಪೋಸ್ಟ್‌ಗಳನ್ನು ಹೇಗೆ ಸ್ಕ್ರಾಲ್ ಮಾಡಿಕೊಂಡು ಹೋಗುತ್ತಿದ್ದೀರೋ ಹಾಗೆಯೇ ಮುಂದೆ ಹೋಗಿ.
- ಸುದ್ದಿಗಳ ಮೇಲೆ ಕ್ಲಿಕ್ ಮಾಡಿ ತೆರೆದೇ ಓದಬೇಕು ಎಂದೇನಿಲ್ಲ. ಎಲ್ಲವನ್ನೂ ಸ್ಕ್ರೋಲ್ ಮಾಡಿಕೊಂಡು ಹೋಗುತ್ತಿದ್ದ ನಾವು ಇಂಥ ಸುದ್ದಿ ಕಂಡಾಗ 3 ಸೆಕೆಂಡು ನಿಂತು ಶೀರ್ಷಿಕೆ ಓದಿದರೂ ಸರಿ, ನಾವು ಅವರಿಗೆ ಸಂಭಾವ್ಯ ಗ್ರಾಹಕ ಆಗುತ್ತೇವೆ. ನಮಗೆ ಅಂಥದ್ದೇ ಸುದ್ದಿಗಳು ಕಾಣಿಸತೊಡಗುತ್ತವೆ. ತೆರೆದು ಓದಿದರಂತೂ ಕಥೆ ಮುಗಿಯಿತು. ಎಲ್ಲ ಇಂಥದ್ದೇ ಸುದ್ದಿಗಳು ಕಾಣಿಸಿಗುತ್ತದೆ.
- ಸ್ಕ್ರಾಲ್ ಮಾಡುವಾಗ ಇಂಥ ಸುದ್ದಿ ಕಣ್ಣಿಗೆ ಬಿದ್ದಾಗ 'Hide all from ....' ಅಂತ ಒತ್ತಿ. ಆಗ ನಿಮಗೆ ಇಂಥ ಸುದ್ದಿಗಳು ಟೈಮ್‌ಲೈನ್‌ನಲ್ಲಿ ಕಾಣಿಸುವುದಿಲ್ಲ.
- ಹೆಚ್ಚು ಹೆಚ್ಚು ಜನ ಹೀಗೆ ಮಾಡಿದಷ್ಟೂ ಫೇಸ್‌ಬುಕ್ ಅಲ್ಗಾರಿಥಂ ಕಲಿಯುತ್ತಾ ಹೋಗುತ್ತದೆ. 'ಓಹ್..! ಇಂಥದ್ದು ಜನರಿಗೆ ಇಷ್ಟವಾಗುತ್ತಿಲ್ಲ' ಎಂದು ಅದು ಅರ್ಥ ಮಾಡಿಕೊಂಡು ಬೇರೆ ರೀತಿಯ ಸುದ್ದಿಗಳನ್ನು ಕೊಡಲು ಶುರು ಮಾಡುತ್ತದೆ.

ಕೊನೆಯ ಮಾತು

ನಿಮ್ಮ ಕುತೂಹಲವೇ ಸಾಮಾಜಿಕ ಬಂಡವಾಳ. ಆದರೆ, ನಮ್ಮ ಕುತೂಹಲ ಬಳಸಿಕೊಂಡು ಸಾಮಾಜಿಕ ಮಾಧ್ಯಮಗಳು ಮತ್ತು ವೆಬ್‌ಸೈಟ್‌ಗಳು ಬಂಡವಾಳವನ್ನಾದರೂ ಮಾಡಿಕೊಳ್ಳಲಿ ಅಥವಾ ಅರಮನೆಯನ್ನಾದರೂ ಕಟ್ಟಿಕೊಳ್ಳಲಿ. ನಮ್ಮ ಅಭಿರುಚಿ ಉತ್ತಮವಾಗಿದೆ ಎಂದು ಅವರಿಗೆ ತೋರಿಸೋಣ. ಆ ಮೂಲಕ, ಅವರ ಅಭಿರುಚಿಯೂ ಸುಧಾರಿಸಲು. ಉಪಯುಕ್ತ, ಒಳನೋಟಗಳು ಇರುವ ಸುದ್ದಿಗಳನ್ನು ಅವರು ಪ್ರಕಟಿಸುವಂತಾಗಲಿ.

ಮೈಕ್ರೊಸಾಫ್ಟ್ ಎಡ್ಜ್ ಬದಲಾವಣೆಗಳೊಂದಿಗೆ

ಪೃಥ್ವಿರಾಜ್

ಅಂತರ್ಜಾಲದಲ್ಲಿ ಮಾಹಿತಿಯನ್ನು ಕಲೆ ಹಾಕುವುದಕ್ಕೆ, ಯಾವುದಾದರೂ ಸೇವೆ ಪಡೆಯುವುದಕ್ಕೆ – ಹೀಗೆ ಹಲವು ನಿತ್ಯಕೆಲಸಗಳಿಗೆ ಬ್ರೌಸರ್‌ಗಳು ನೆರವಾಗುತ್ತಿವೆ. ಆದರೆ ಅತ್ಯಂತ ಕಡಿಮೆ ಸಮಯದಲ್ಲಿ ಹೆಚ್ಚು ನಿಖರವಾಗಿ ಕಾರ್ಯ ನಿರ್ವಹಿಸುವುದರ ಜತೆಗೆ ಕಡಿಮೆ ಮೆಮೊರಿ ಹಾಗೂ ಪ್ರೊಸೆಸರ್ ಶಕ್ತಿಯನ್ನು ಕಡಿಮೆ ಪ್ರಮಾಣದಲ್ಲಿ ಬಳಸಿಕೊಂಡು, ಗೌಪ್ಯತೆಗೆ ಹೆಚ್ಚು ಆದ್ಯತೆ ನೀಡುವ ಬ್ರೌಸರ್‌ಗಳು ಎಲ್ಲರಿಗೂ ಇಷ್ಟವಾಗುತ್ತವೆ. ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮೈಕ್ರೊಸಾಫ್ಟ್ 'ಎಡ್ಜ್' ಬ್ರೌಸರ್ ಅಭಿವೃದ್ಧಿಪಡಿಸಲಾಗಿದೆ. ವಿಂಡೋಸ್ 10 ಅಪ್‌ಡೇಟ್ ಜತೆಯಲ್ಲೇ ಇದು ಬಳಕೆಗೆ ಬಂದಿದೆ.

ಸೈಟ್‌ಗಳು ಆ್ಯಪ್‌ಗಳಾಗಬಹುದು!

ನಿತ್ಯ ನೋಡುವಂತಹ ಕೆಲವು ವೆಬ್‌ಸೈಟ್‌ಗಳನ್ನು ಶಾರ್ಟ್‌ಕಟ್ ರೂಪದಲ್ಲಿ ಬಳಸಿಕೊಳ್ಳಲು ಸಮಸ್ಯೆಯಾಗುತ್ತಿದ್ದರೆ, ಎಡ್ಜ್‌ನಲ್ಲಿ ಈ ಸಮಸ್ಯೆ ಇರುವುದಿಲ್ಲ. ಆ್ಯಪ್ ರೂಪದಲ್ಲಿ ಬಳಸಿಕೊಳ್ಳಲು ಉದ್ದೇಶಿಸಿರುವ ವೆಬ್‌ಸೈಟ್ ತೆರೆದು, ಬ್ರೌಸರ್ ಬಲಭಾಗದಲ್ಲಿರುವ ಮೂರು ಚುಕ್ಕಿಗಳ ಮೇಲೆ ಕ್ಲಿಕ್ ಮಾಡಿ, ಸೆಟ್ಟಿಂಗ್ಸ್‌ಗೆ ಹೋಗಿ 'ಆ್ಯಪ್' ಆಯ್ಕೆ ಕ್ಲಿಕ್ ಮಾಡಬೇಕು. ನಂತರ ಇನ್‌ಸ್ಟಾಲ್ ದಿಸ್ ಸೈಟ್ ಆ್ಯಪ್ ಎಂಬ ಆಯ್ಕೆ ಕ್ಲಿಕ್ ಮಾಡಿ, ಅದಕ್ಕೊಂದು ಹೆಸರನ್ನು ನೀಡಿ, ಇನ್‌ಸ್ಟಾಲ್ ಬಟನ್ ಮೇಲೆ ಕ್ಲಿಕ್ ಮಾಡಿದರೆ, ಸ್ಟಾರ್ಟ್ ಮೆನುವಿನಲ್ಲಿ ವೆಬ್‌ಸೈಟ್ ಐಕಾನ್ ರೂಪದಲ್ಲಿ ರೂಪುಗೊಳ್ಳುತ್ತದೆ. ಇದನ್ನು ಡೆಸ್ಕ್‌ಟಾಪ್‌ಗೆ ತಂದು ಶಾರ್ಟ್‌ಕಟ್ ರೂಪದಲ್ಲೂ ಬಳಸಿಕೊಳ್ಳಬಹುದು. ಬೇಕಿದ್ದರೆ ಡೆಸ್ಕ್‌ಟಾಪ್‌ನಲ್ಲಿ ಪಿನ್ ರೂಪದಲ್ಲಿ ಇಟ್ಟುಕೊಳ್ಳಬಹುದು. ಅನಗತ್ಯವಾದ ಆ್ಯಪ್ ಅನ್ನು ತೊಲಗಿಸುವುದಕ್ಕೂ ಅವಕಾಶವಿದೆ. ಅನ್‌ಇನ್‌ಸ್ಟಾಲ್ ಮಾಡಿಕೊಳ್ಳಲು ಮ್ಯಾನೇಜ್ ಆ್ಯಪ್‌ನಲ್ಲಿ ಈ ಸೆಟ್ಟಿಂಗ್ಸ್ ಮಾಡಿಕೊಳ್ಳಬಹುದು.



> ಬ್ರೌಸರ್ ಎಂದ ಕೂಡಲೇ ಹಲವರಿಗೆ ನೆನಪಾಗುವುದು ಗೂಗಲ್ ಕ್ರೋಮ್ ಹಾಗೂ ಮೊಜಿಲ್ಲಾ ಫೈರ್‌ಫಾಕ್ಸ್. ಈ ವಿಷಯದಲ್ಲಿ ಹಿಂದೆ ಉಳಿದಿದ್ದ ಮೈಕ್ರೊಸಾಫ್ಟ್ ತನ್ನ ಬ್ರೌಸರ್ ಲೋಪಗಳನ್ನು ಸರಿಪಡಿಸಿ ಹಲವು ವೈಶಿಷ್ಟ್ಯಗಳನ್ನು ಸೇರಿಸಿದೆ

ಒಂದೇ ಸಮಯದಲ್ಲಿ ಹೆಚ್ಚು ಟ್ಯಾಬ್‌ಗಳು

ತೆರೆದಿಟ್ಟ ಟ್ಯಾಬ್‌ಗಳು ಎಡಭಾಗದಲ್ಲಿ ಸಂಕ್ಷಿಪ್ತವಾಗಿ ಎದ್ದುಕಾಣುವಂತೆ ಎಡ್ಜ್‌ನಲ್ಲಿ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಹೆಚ್ಚು ಟ್ಯಾಬ್‌ಗಳನ್ನು ಸುಲಭವಾಗಿ ಬಳಸಬಹುದು. ಹೀಗೆ ಹೆಚ್ಚು ಟ್ಯಾಬ್‌ಗಳನ್ನು ಬಳಸುವಾಗ ಹಾಗೂ ಹೆಚ್ಚು ಬಾರಿ ಬದಲಿಸುತ್ತಾ ಪರಿಶೀಲಿಸಬೇಕಾದಾಗ ಇದು ನೆರವಾಗುತ್ತದೆ. ಆದರೆ ಹೆಚ್ಚು ಟ್ಯಾಬ್‌ಗಳನ್ನು ಬಳಸಿದರೆ ಕಂಪ್ಯೂಟರ್ ಮೆಮೊರಿ ಹಾಗೂ ಪ್ರೊಸೆಸರ್ ವೇಗ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಇದಕ್ಕೆ ಪರಿಹಾರವಾಗಿ ಎಡ್ಜ್ ಬ್ರೌಸರ್‌ನಲ್ಲಿ ಟ್ಯಾಬ್‌ಗಳನ್ನು ಸ್ವಯಂ ಚಾಲಿತವಾಗಿ ಸ್ಲೀಪಿಂಗ್ ಮೋಡ್‌ಗೆ ಕಳುಹಿಸುವ ವ್ಯವಸ್ಥೆ ಇದೆ. ಇದಕ್ಕಾಗಿ ಬಲಭಾಗದಲ್ಲಿ ಕಾಣುವ ಮೂರು ಚುಕ್ಕಿಗಳ ಮೇಲೆ ಕ್ಲಿಕ್ ಮಾಡಿ, ಸೆಟ್ಟಿಂಗ್ಸ್ ಆಯ್ಕೆ ಮಾಡಿ, ಸಿಸ್ಟಂ ಮೇಲ್ ಕ್ಲಿಕ್ ಮಾಡಿ ಅಲ್ಲಿರುವ ಸೇವ್ ರಿಸೋರ್ಸಸ್‌ಗೆ ಹೋದರೆ ಅಲ್ಲಿ ಸೇವ್ ರಿಸೋರ್ಸಸ್ ವಿತ್ ಸ್ಲೀಪಿಂಗ್ ಟ್ಯಾಬ್ ಬಟನ್ ಮೇಲ್ ಕ್ಲಿಕ್ ಮಾಡಬೇಕು. ಇದರಲ್ಲಿ ಟ್ಯಾಬ್ ಎಷ್ಟು ಹೊತ್ತು ಸ್ಲೀಪಿಂಗ್ ಮೋಡ್‌ನಲ್ಲಿ ಇರಬೇಕು ಎಂಬುದನ್ನೂ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ.

ನಿರಂತರ ಚಲನೆ

ಸೇವ್ ರಿಸೋರ್ಸಸ್‌ನಲ್ಲಿ ವೆಬ್‌ಸೈಟ್ ಸ್ಲೀಪ್‌ಮೋಡ್‌ಗೆ ಹೋಗದಂತೆ ನಿಯಂತ್ರಿಸುವ ಆಯ್ಕೆಯೂ ಇದೆ. ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ವೆಬ್‌ಸೈಟ್‌ಗಳನ್ನು ಸದಾ ಚಾಲನಾಸ್ಥಿತಿಯಲ್ಲಿ ಇಡಬೇಕಾದ ಅವಶ್ಯಕತೆ ಇರಬಹುದು. ಅಂತಹ ಸಂದರ್ಭಗಳಲ್ಲಿ ಈ ವೈಶಿಷ್ಟ್ಯ ನೆರವಾಗುತ್ತದೆ. ತೆರೆದಿಟ್ಟಿರುವ ಟ್ಯಾಬ್ ಮೇಲೆ ರೈಟ್ ಕ್ಲಿಕ್ ಮಾಡಿ ಅದರಲ್ಲಿ ಪಿನ್ ಟ್ಯಾಬ್ ಆಯ್ಕೆ ಮಾಡಿದರೆ ಅದು ಐಕಾನ್ ರೂಪಕ್ಕೆ ಬದಲಾಗುತ್ತದೆ. ಆಗ ಇದು ನಿರಂತರವಾಗಿ ಚಾಲನಾಸ್ಥಿತಿಯಲ್ಲಿ ಇರುತ್ತದೆ.

ಸುರಕ್ಷಿತ ಕಿಡ್ಸ್ ಮೋಡ್

ಎಡ್ಜ್‌ನ ಮತ್ತೊಂದು ವೈಶಿಷ್ಟ್ಯ ಕಿಡ್ಸ್ ಮೋಡ್. 5-8 ಹಾಗೂ 9-12 ವಯಸ್ಸಿನ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ರೂಪಿಸಲಾಗಿದೆ. ಇದರಲ್ಲಿನ 'ಗಾರ್ಡ್‌ರೆಯಿಲ್ಸ್' ಬಿಲ್ಟಿನ್ ಪಟ್ಟಿ ನೆರವಿನೊಂದಿಗೆ ಮಕ್ಕಳು ಅನಾವಶ್ಯಕ ಹಾಗೂ ಅನುಚಿತ ವೆಬ್‌ಸೈಟ್‌ಗಳನ್ನು ತೆರೆಯದಂತೆ ನಿಯಂತ್ರಿಸಬಹುದು. ಪೋಷಕರು ರಿವ್ಯೂ ಮಾಡಿ ನೋಡುವುದಕ್ಕೂ ಅವಕಾಶವಿದೆ. ಸೆಟ್ಟಿಂಗ್ಸ್ ಮೂಲಕ ಅನುಮತಿ ನೀಡುವಂತಹ ಅಂಶಗಳಲ್ಲಿ ಬದಲಾವಣೆಗಳನ್ನೂ ಮಾಡಿಕೊಳ್ಳಬಹುದು. ಸೆಟ್ಟಿಂಗ್ಸ್‌ನಲ್ಲಿರುವ 'ಫ್ಯಾಮಿಲಿ ಸೇಫ್ಟಿ' ಆಯ್ಕೆಯಲ್ಲಿ ಈ ಸೌಲಭ್ಯವಿದೆ.

ಇವಲ್ಲದೆ ಗೋಪ್ಯತೆ ಕಾಪಾಡಲು ನ್ಯೂ ಪ್ರೈವೇಟ್ ವಿಂಡೊ, ಸೈಟ್‌ಗಳಲ್ಲಿನ ವಿಷಯಗಳನ್ನು ಓದಿ ತಿಳಿಸುವ 'ರೀಡ್ ಅಲೌಡ್' – ಹೀಗೆ ಹಲವು ವೈಶಿಷ್ಟ್ಯಗಳು ಎಡ್ಜ್‌ನಲ್ಲಿವೆ.

ಸಿಇಟಿ ದಿಕ್ಸೂಚಿ

Chemistry - Structure of Atom

1. The orbital nearest to the nucleus is
(1) 4f (2) 5d (3) 4s (4) 7p

2. The electronic configuration of transition element "X", is +3, oxidation sate is $[Ar]3d^5$. What is its atomic number?
(1) 25 (2) 26 (3) 27 (4) 24

3. With regard to photoelectric effect, identify the CORRECT statement among the following
(1) Number of ejected increases with the increase in work function
(2) Energy of ejected increases with the increase in the intensity of incident light
(3) Number of ejected increases with the increase in the intensity of incident light
(4) Number of ejected increases with the increase in the frequency of incident light

4. Which one of the following sets of quantum numbers represents the highest energy level in an atom?
(1) $n = 4, l = 0, m = 0, s = +\frac{1}{2}$ (3) $n = 3, l = 2, m = -2, s = +\frac{1}{2}$
(2) $n = 3, l = 1, m = 1, s = +\frac{1}{2}$ (4) $n = 3, l = 0, m = 0, s = +\frac{1}{2}$

5. If the energies of the two photons in the ratio of 3 : 2, their wavelength will be in the ratio of
(1) 2 : 3 (2) 9 : 4 (3) 3 : 2 (4) 1 : 2

6. The statement that is NOT correct is
(1) Energies of stationary states in hydrogen like atoms is inversely proportional to the square of the principal quantum number.
(2) The radius of the first orbit of He+ is half that of the first orbit of hydrogen atom.
(3) Angular quantum number signifies the shape of the orbital.
(4) Total number of nodes for 3s orbital is three.

7. The correct set of quantum numbers for the unpaired electron of chlorine atom is
(1) $2, 0, 0, +\frac{1}{2}$ (2) $2, 1, -1, +\frac{1}{2}$
(3) $3, 1, 1, \pm\frac{1}{2}$ (4) $3, 0, 0, \pm\frac{1}{2}$

8. The energy of electron in the nth Bohr orbit of H-atom is
(1) [-13.6 / n2] eV (2) [-13.6 / n] eV
(3) [-13.6 / n4] Ev (4) [-13.6 / n3] eV

9. Consider the following sets of quantum numbers: Which of the below setting is not a permissible arrangement of electrons in an atom? (order is in 'n', 'l','m','s')
(1) 4, 0, 0, -1/2 (2) 5, 3, 0, +1/2
(3) 3, 2, -2, -1/2 (4) 3, 2, -3, +1/2

10. Two particles A and B are in motion. If the wavelength associated with 'A' is 33.33 nm, the wavelength associated with 'B' whose momentum is (1/3) th of 'A' is
(1) 2.5 × 10−8 m (2) 1.0 × 10−8 m
(3) 1.0 × 10−7 m (4) 1.25 × 10−7 m

11. Impossible orbital among the following is
(1) 2s (2) 3f (3) 2p (4) 4d

12. The correct set of four quantum numbers for the outermost electron of sodium (Z = 11) is
(1) $3,1,0,\frac{1}{2}$ (2) $3,1,1,\frac{1}{2}$
(3) $3,2,1,\frac{1}{2}$ (4) $3,0,0,\frac{1}{2}$

13. The two electrons have the following set of quantum numbers:
$P = 3,2,-2,+\frac{1}{2}$ $Q = 3,0,0,+\frac{1}{2}$
Which of the following statement is true?
(1) P and Q have same energy
(2) P has greater energy than Q
(3) P has lesser energy than Q
(4) P and Q represent same electron

Answers

1. Answer (3)
Solution:
'4s' orbital is nearer to the nucleus among the given options

2. Answer (2)
Solution:
Total no. of electrons in the given atom = 10 + 5 + 3 = 26
Its atomic number = 26

3. Answer (3)
Solution: Conceptual

4. Answer (3)
Solution: For highest energy level in an atom, (n + l) should be maximum

5. Answer (1) Solution: $E_1 : E_2 = \frac{hc}{\lambda_1} : \frac{hc}{\lambda_2} = \frac{1}{\lambda_1} : \frac{1}{\lambda_2}$
$\therefore \lambda_2 : \lambda_1 = 3 : 2$

6. Answer (4)
Solution: $E_M = \frac{-13.6}{n^2} . Z^2 e.v / atom$
$r_m = 0.53 \times \frac{n^2}{Z} A^0$
The number of nodes = n − 1

7. Answer (3)
Solution: For finding out unpaired electron of chlorine atom we have to find electronic configuration
Cl = 1S2 2S2 2P6 3S2 3P5
n = 3, l = 1, m = 1, s = ± 1 / 2

8. Answer (1) Solution: $E_n = \frac{-13.6}{n^2} ev$

9. Answer (4)
Solution: The magnetic Quantum number (ml) determines the number of orbitals and their orientation. Consequently, its value depends on the orbital angular quantum number (l).
If n = 3, l = 2, m = −3, s = + 1 / 2
For this arrangement, m must be in therange from − l to + l,
Then ml can vary from −2, −1, 0, + 1, + 2
Hence the option (4) is incorrect.

10. Answer (3)
Solution: By de Broglie equation, $\lambda_A = h/P_A$
And $\lambda_B = h/P_B$
$\lambda_A/\lambda_B = P_A/P_B$
$P_B = ½ P_A$ (Given)
$\lambda_A/\lambda_B = ½ P_A/P_A = P_A$
$\lambda_B = 2\lambda_A$
$\lambda_B = 2 \times 5 \times 10^{-8} m = 10^{-7}$ m

11. Answer (2)
Solution: 3f is impossible since for n = 3 Possible values of l = 0 to (n − 1) i.e., l = 0, 1, 2
So only 3s, 3p are 3d are possible

12. Answer (4)
Solution:
E.C. of Na (Z = 1) = $1s^2 2s^2 2p^6 3s^1$
Outermost electron occupies 3s orbital.
$\therefore n = 3, l = 0, s = \frac{1}{2}$

13. Answer (2)
Solution: n + l of 'P' = 3 + 2 = 5
n + l of 'Q' = 3 + 0 = 3
$\therefore$ energy (n + l) of P > Q

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ– 7

81. ದಾಂಡೇಲಿಯಲ್ಲಿರುವ ಕಾಗದ ಕಾರ್ಖಾನೆಯ ಹೆಸರೇನು?
ಎ) ದಿ ಈಸ್ಟ್ ಕೋಸ್ಟ್ ಪೇಪರ್ ಮಿಲ್ಸ್
ಬಿ) ದಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್
ಸಿ) ದಿ ಸೌತ್ ಕೋಸ್ಟ್ ಪೇಪರ್ ಮಿಲ್ಸ್
ಡಿ) ದಿ ನಾರ್ಥ್ ಕೋರ್ಸ್ ಪೇಪರ್ ಮಿಲ್ಸ್

82. 'ಆಪರೇಷನ್ ಫ್ಲಡ್' ಕಾರ್ಯಾಚರಣೆ ಯಾವುದಕ್ಕೆ ಸಂಬಂಧಿಸಿದೆ?
ಎ) ನೆರೆ ಹಾವಳಿ ನಿಯಂತ್ರಣ
ಬಿ) ಸಮುದ್ರ ಪ್ರವಾಹ ನಿಯಂತ್ರಣ
ಸಿ) ಹೈನುಗಾರಿಕೆ ಅಭಿವೃದ್ಧಿ
ಡಿ) ಕೆರೆ ನಿರ್ಮಾಣ

83.ಕರ್ನಾಟಕದಲ್ಲಿ ಪ್ರಥಮ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪನೆಯಾದ ಸ್ಥಳ ಯಾವುದು?
ಎ) ಮಂಗಳೂರು
ಬಿ) ಬಳ್ಳಾರಿ
ಸಿ) ಭದ್ರಾವತಿ
ಡಿ) ಶಿವಮೊಗ್ಗ

84. ಮೈಸೂರು ರಾಜ್ಯ 'ಕರ್ನಾಟಕ' ಎಂದು ಹೆಸರು ಪಡೆದಿದ್ದು ಯಾವಾಗ?
ಎ) ನವೆಂಬರ್ 1, 1952
ಬಿ) ನವೆಂಬರ್ 1, 1956
ಸಿ) ನವೆಂಬರ್ 1, 1973
ಡಿ) ನವೆಂಬರ್ 1, 1976

85. 'ಐ.ಎನ್.ಎಸ್ ಸೀ–ಬರ್ಡ್' ಇದರ ಇನ್ನೊಂದು ಹೆಸರು ಹಾಗೂ ಇದು ಇರುವ ಸ್ಥಳ ಯಾವುದು?
ಎ) ಕದಂಬ ನೌಕಾನೆಲೆ, ಕಾರವಾರ
ಬಿ) ನೃಪತುಂಗ ನೌಕಾನೆಲೆ, ಕಾರವಾರ
ಸಿ) ಪ್ರಾಜೆಕ್ಟ್ ಥಂಡರ್‌ಬೋಲ್ಟ್, ಗೋವಾ
ಡಿ) ಪ್ರಾಜೆಕ್ಟ್ ಥಂಡರ್‌ಬೋಲ್ಟ್, ಉಡುಪಿ

86. 'ಬೀಚಿ' ಅವರ ಪೂರ್ಣ ಹೆಸರು ಏನು?
ಎ) ಗಂಗಾವತಿ ಪ್ರಾಣೇಶ್
ಬಿ) ರಾಯಸಂ ಭೀಮಸೇನ್ ರಾವ್
ಸಿ) ಟಿ.ಪಿ.ಕೈಲಾಸಂ
ಡಿ) ಗೋಪಾಲಕೃಷ್ಣ ಅಡಿಗ

87. ಮೊಘಲರ ಆಳ್ವಿಕೆಯಲ್ಲಿ ಹಿಂದೂಗಳ ಮೇಲೆ ವಿಧಿಸುತ್ತಿದ್ದ ಧಾರ್ಮಿಕ ತೆರಿಗೆಗೆ ಏನೆಂದು ಕರೆಯುತ್ತಿದ್ದರು?
ಎ) ಖರಜ್
ಬಿ) ಉಶ್ರ್
ಸಿ) ಜಕಾತ್
ಡಿ) ಜಜಿಯಾ

88. ಸರ್ ಎಂ. ವಿಶ್ವೇಶ್ವರಯ್ಯ 1913ರಲ್ಲಿ ಸ್ಥಾಪಿಸಿದ್ದ ಬ್ಯಾಂಕ್ ಯಾವುದು?
ಎ) ಮೈಸೂರು ಸಹಕಾರಿ ಬ್ಯಾಂಕ್
ಬಿ) ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
ಸಿ) ಕಾವೇರಿ ಗ್ರಾಮೀಣ ಬ್ಯಾಂಕ್
ಡಿ) ಕೆನರಾ ಬ್ಯಾಂಕ್

89. ಪ್ರಾಣಿಗಳ ಯಾವ ಅಂಗಾಂಶದಲ್ಲಿ ಕೊಬ್ಬು ಸಂಗ್ರಹವಾಗುತ್ತದೆ?
ಎ) ಏರಿಯೋಲಾರ್ ಅಂಗಾಂಶ
ಬಿ) ಮೃದ್ವಸ್ಥಿ ಅಂಗಾಂಶ
ಸಿ) ಅಡಿಪೋಸ್ ಅಂಗಾಂಶ
ಡಿ) ರೆಟಿಕ್ಯುಲಾರ್ ಅಂಗಾಂಶ

90. ಕೆಳಗಿನವುಗಳಲ್ಲಿ ಯಾವುದನ್ನು 'ಮೂಳೆ ಮುರಿ ಜ್ವರ' ಎಂದೂ ಕರೆಯಲಾಗುತ್ತದೆ?
ಎ) ಚಿಕುನ್ ಗುನ್ಯ
ಬಿ) ಡೆಂಗಿ ಜ್ವರ
ಸಿ) ಮೇಲಿನ ಎರಡನ್ನೂ
ಡಿ) ಇದ್ಯಾವುದೂ ಅಲ್ಲ

91. ಈ ಕೆಳಗಿನವುಗಳಲ್ಲಿ ನವೀಕರಿಸಬಹುದಾದ ಶಕ್ತಿಯ ಆಕರವನ್ನು ಗುರುತಿಸಿ.
ಎ) ಸೌರ ಶಕ್ತಿ
ಬಿ) ಪೆಟ್ರೋಲ್
ಸಿ) ಎಲ್.ಪಿ.ಜಿ
ಡಿ) ದೈಹಿಕ ಶಕ್ತಿ

92. ಜೀವ ಉಗಮವಾಗುವ ಹಂತದಲ್ಲಿ ಭೂ ವಾತಾವರಣದಲ್ಲಿ ಈ ಕೆಳಗಿನ ಯಾವ ಅನಿಲ ಇರಲಿಲ್ಲ?
ಎ) ಅಮೋನಿಯಾ
ಬಿ) ಹೈಡ್ರೋಜನ್
ಸಿ) ಆಕ್ಸಿಜನ್
ಡಿ) ಮಿಥೇನ್

93. ಜೀವ ವಿಕಾಸವನ್ನು ವಿವರಿಸಲು ಚಾರ್ಲ್ಸ್ ಡಾರ್ವಿನ್ ಪ್ರತಿಪಾದಿಸದೇ ಇದ್ದ ಸಿದ್ಧಾಂತ ಯಾವುದು?
ಎ) ಉಳಿವಿಗಾಗಿ ಹೋರಾಟ
ಬಿ) ನಿಸರ್ಗದ ಆಯ್ಕೆ
ಸಿ) ಅರ್ಹ ಜೀವಿಯ ಉಳಿವು
ಡಿ) ಬಳಕೆ ಮತ್ತು ನಿರ್ಬಳಕೆ ಸಿದ್ಧಾಂತ

94. ಸಿಂಧೂ ನಾಗರಿಕತೆಯ ವಿಶಿಷ್ಟ ಲಕ್ಷಣ ಯಾವುದು?
ಎ) ಯಂತ್ರಗಳ ಬಳಕೆ
ಬಿ) ನಗರ ಯೋಜನೆ
ಸಿ) ಯುದ್ಧ ಕಲೆ
ಡಿ) ಇದ್ಯಾವುದೂ ಅಲ್ಲ

95. ಜೈನ ಧರ್ಮದ 23 ನೇ ತೀರ್ಥಂಕರ ಯಾರು?
ಎ) ಮಹಾವೀರ
ಬಿ) ಪಾರ್ಶ್ವನಾಥ
ಸಿ) ವೃಷಭನಾಥ
ಡಿ) ಮೇಲ್ಕಂಡ ಯಾರೂ ಅಲ್ಲ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ–6 ರ ಉತ್ತರ: 66. ಸಿ, 67. ಡಿ, 68. ಎ, 69. ಸಿ, 70. ಡಿ, 71. ಡಿ, 72. ಬಿ, 73. ಬಿ, 74. ಸಿ, 75. ಸಿ, 76. ಎ, 77. ಎ, 78. ಡಿ, 79. ಬಿ, 80. ಎ



ಸುಭಾಷಿತ

ನಿಮ್ಮ ಬೆಳವಣಿಗೆಯನ್ನು ನೀವು ಹೆಚ್ಚು ಗಂಭೀರವಾಗಿ ತೆಗೆದುಕೊಂಡಷ್ಟೂ ನಿಮ್ಮ ಜನರು ನಿಮ್ಮನ್ನು ಹೆಚ್ಚು ಗಂಭೀರವಾಗಿ ಪರಿಗಣಿಸುತ್ತಾರೆ.

-ಜಾನ್ ಮ್ಯಾಕ್ಸ್‌ವೆಲ್

ದಾಖಲೆ ಮಟ್ಟಕ್ಕೆ ಏರಿದ ಹಣದುಬ್ಬರ ನಿಯಂತ್ರಣಕ್ಕೆ ಬೇಕು ತುರ್ತು ಕ್ರಮ

ದೇಶದಲ್ಲಿ ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರದ ಪ್ರಮಾಣವು ಆರು ತಿಂಗಳಲ್ಲೇ ಅತ್ಯಧಿಕ ಎನ್ನಲಾದ ಶೇಕಡ 6.3ಕ್ಕೆ ಏರಿಕೆಯಾಗಿದೆ. ಈ ಹೆಚ್ಚಳವು ಜನಸಾಮಾನ್ಯರ ಬದುಕಿನ ಸಂಕಷ್ಟಕ್ಕೆ ಹಿಡಿದ ಕನ್ನಡಿ. ಏಪ್ರಿಲ್‌ನಲ್ಲಿ ಶೇ 1.96ರಷ್ಟು ಇದ್ದ ಆಹಾರವಸ್ತುಗಳ ಹಣದುಬ್ಬರವು ಮೇ ತಿಂಗಳಲ್ಲಿ ಶೇ 5.01ಕ್ಕೆ ಜಿಗಿದಿದೆ. ಅಡುಗೆ ಎಣ್ಣೆ, ಮೀನು, ಮಾಂಸ, ಮೊಟ್ಟೆ, ತರಕಾರಿ ಎಲ್ಲದರ ಬೆಲೆ ಗಗನಕ್ಕೆ ಏರಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ಕ್ಕೆ ಮಿತಿಗೊಳಿಸಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಕೇಂದ್ರ ಸರ್ಕಾರ ಗುರಿ ನಿಗದಿ ಮಾಡಿದೆ. ಶೇ 4ಕ್ಕಿಂತ 2 ಅಂಶ ಹೆಚ್ಚು ಅಥವಾ 2 ಅಂಶ ಕಡಿಮೆ ಆಗಲು ಅವಕಾಶ ಇದೆ. ಆದರೆ, ಹಣದುಬ್ಬರವು ಅದನ್ನೂ ಮೀರಿರುವುದು ಆತಂಕ ಹೆಚ್ಚಿಸುವ ಸಂಗತಿ. ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಖಾದ್ಯತೈಲ ಬೆಲೆಯ ತೀವ್ರ ಏರಿಕೆಯಿಂದಾಗಿ ಸಗಟು ಬೆಲೆ ಆಧಾರಿತ ಹಣದುಬ್ಬರವೂ ಸಾರ್ವಕಾಲಿಕ ದಾಖಲೆಯಾದ ಶೇ 12.94ಕ್ಕೆ ತಲುಪಿದೆ. ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿಯು ಚಿಲ್ಲರೆ ಹಣದುಬ್ಬರ ಪ್ರಮಾಣದ ಕುರಿತು ಪ್ರತಿಕ್ರಿಯೆ ನೀಡಿದ್ದು, 'ಇದು ಪೂರೈಕೆ ಕ್ಷೇತ್ರದ ಸಮಸ್ಯೆ, ತಕ್ಷಣಕ್ಕೆ ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿಲ್ಲ' ಎಂದಿದೆ. ಆದರೆ, ಸಮಸ್ಯೆ ಅಷ್ಟು ಸರಳವಾಗಿ ಇದ್ದಂತೆ ಕಾಣುವುದಿಲ್ಲ. ಕೊರೊನಾ ಎರಡನೇ ಅಲೆಯು ಆರ್ಥಿಕತೆಯ ಮೇಲೆ ಉಂಟು ಮಾಡಿರುವ ದುಷ್ಪರಿಣಾಮಗಳ ಹಿನ್ನೆಲೆಯಲ್ಲಿ, ದೇಶದಾದ್ಯಂತ ನಿರುದ್ಯೋಗದ ಪ್ರಮಾಣ ಹೆಚ್ಚಿದೆ. ಇದರ ಜೊತೆಗೆ ಅತ್ಯಧಿಕ ತೆರಿಗೆ ದರವೂ ಸೇರಿಕೊಂಡಿದ್ದರ ಪರಿಣಾಮವಾಗಿ ದೇಶಿ ಮಾರುಕಟ್ಟೆಯಲ್ಲಿ ಗ್ರಾಹಕರ ಕೊಳ್ಳುವ ಸಾಮರ್ಥ್ಯ ಕುಸಿದಿದೆ. 'ಕೊರೊನಾ ಸೋಂಕು ಇಳಿಮುಖದ ಹಾದಿಯಲ್ಲಿದ್ದು, ಒಮ್ಮೆ ಆರ್ಥಿಕ ಚಟುವಟಿಕೆಗಳು ಗರಿಗೆದರಿದರೆ ಗ್ರಾಹಕರ ಕೊಳ್ಳುವ ಶಕ್ತಿ ಹೆಚ್ಚಲಿದೆ. ಹಣದುಬ್ಬರವೂ ನಿಯಂತ್ರಣಕ್ಕೆ ಬರಲಿದೆ' ಎನ್ನುವುದು ರಿಸರ್ವ್ ಬ್ಯಾಂಕ್‌ನ ಲೆಕ್ಕಾಚಾರ ಎನ್ನಲಾಗುತ್ತಿದೆ. ಅರ್ಥಶಾಸ್ತ್ರಜ್ಞರ ಲೆಕ್ಕಾಚಾರ ಏನೇ ಇದ್ದರೂ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಬದುಕು ದುಸ್ತರಗೊಂಡಿರುವ ಜನಸಾಮಾನ್ಯರು ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ ಎನ್ನುವುದು ಸ್ವಯಂವೇದ್ಯ.



ಅಗತ್ಯ ವಸ್ತುಗಳ ಬೆಲೆ ಇಳಿಯುವಂತೆ ಮಾಡಿ, ಜನರ ನೆರವಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಧಾವಿಸಬೇಕಾಗಿದೆ

ಏಷ್ಯಾದ ಮೂರನೆಯ ಅತಿದೊಡ್ಡ ಆರ್ಥಿಕತೆಯನ್ನು ನಿರ್ವಹಿಸುತ್ತಿರುವ ಕೇಂದ್ರ ಸರ್ಕಾರವು ಕೊರೊನಾ ಸೋಂಕಿನ ಎರಡನೇ ಅಲೆಯನ್ನು ವ್ಯವಸ್ಥಿತವಾಗಿ ಎದುರಿಸುವಲ್ಲಿ ಎಡವಿರುವುದು ಸ್ಪಷ್ಟ. ಸಗಟು ಮತ್ತು ಚಿಲ್ಲರೆ ಹಣದುಬ್ಬರ ಪ್ರಮಾಣದ ಅಸಾಮಾನ್ಯ ಏರಿಕೆಗೆ ಸರ್ಕಾರದ ಈ ವೈಫಲ್ಯವೂ ಕೊಡುಗೆ ನೀಡಿದೆ. ಕೊರೊನಾ ಹಾವಳಿ ಆರಂಭವಾಗುವುದಕ್ಕಿಂತ ಮುನ್ನವೇ ದೇಶದ ಆರ್ಥಿಕತೆಯ ಮೇಲೆ ನೋಟು ರದ್ದತಿಯು ಹೊಡೆತ ನೀಡಿತ್ತು. ಕಪ್ಪುಹಣದ ನಿಯಂತ್ರಣವನ್ನು ದೊಡ್ಡ ಮಟ್ಟದಲ್ಲಿ ಮಾಡಲು ನೋಟು ರದ್ದತಿಯು ನೆರವಾಗಲಿದೆ ಎಂದು ಸರ್ಕಾರ ಹೇಳಿಕೊಂಡರೂ ಅಂತಿಮವಾಗಿ ದೇಶಿ ಮಾರುಕಟ್ಟೆಯಲ್ಲಿ ನಗದು ವಹಿವಾಟನ್ನು ಅಸ್ತವ್ಯಸ್ತಗೊಳಿಸಿದ್ದಷ್ಟೇ ಅದರ ಸಾಧನೆಯಾಯಿತು. ಅದರ ಬೆನ್ನಲ್ಲೇ ಜಿಎಸ್‌ಟಿಯನ್ನು ಸೂಕ್ತ ಸಿದ್ಧತೆ ಇಲ್ಲದೆ ಜಾರಿಗೊಳಿಸಿ, ಬಳಿಕ ಅದಕ್ಕೆ ನೂರಾರು ತಿದ್ದುಪಡಿಗಳನ್ನು ಮಾಡಿದ್ದು ವ್ಯಾಪಾರ ಕ್ಷೇತ್ರದ ಸಂಕಷ್ಟಗಳನ್ನು ಹೆಚ್ಚಿಸಿತು. ಈಗ ಕೊರೊನಾ ಹೊಡೆತವು ನಿರುದ್ಯೋಗ ಹೆಚ್ಚಳ ಮತ್ತು ಬೆಲೆ ಏರಿಕೆಯ ಮೂಲಕ ಜನರನ್ನು ಸಂಕಷ್ಟದ ಮಡುವಿಗೆ ದೂಡಿದೆ. ಆರ್ಥಿಕತೆ ಎನ್ನುವುದು ಅರ್ಥಶಾಸ್ತ್ರಜ್ಞರ ಅಂಕಿಅಂಶದ ಆಟ ಮಾತ್ರವಲ್ಲ ಎನ್ನುವುದನ್ನು ಆಳುವವರು ಗಮನಿಸಬೇಕು. ಸರ್ಕಾರದ ಆರ್ಥಿಕ ನಿರ್ವಹಣೆಯ ತಪ್ಪು ನೀತಿಗಳ ನೇರ ಪರಿಣಾಮ ಬಡವರು, ಕಾರ್ಮಿಕರು ಮತ್ತು ಮಧ್ಯಮವರ್ಗದ ಜನರ ಬದುಕನ್ನು ಮೂರಾಬಟ್ಟೆಯಾಗಿಸಿದೆ. ಅದರಲ್ಲೂ ಮುಖ್ಯವಾಗಿ ಪೆಟ್ರೋಲ್, ಡೀಸೆಲ್ ದರ ಏರಿಕೆಯು ಅಸಹನೀಯ ಎನ್ನಿಸುವಂತಿದೆ. ಜನಸಾಮಾನ್ಯರ ಕೈಯಲ್ಲಿ ಖರ್ಚು ಮಾಡಲು ದುಡ್ಡೇ ಇಲ್ಲದಿರುವಾಗ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳವಾಗುವುದಾದರೂ ಹೇಗೆ? ತೈಲ ದರದ ಮೇಲೆ ಹೇರಿರುವ ಎಕ್ಸೈಸ್ ತೆರಿಗೆ ಮತ್ತು ಸರ್ಚಾರ್ಜ್‌ಗಳನ್ನು ಕಡಿಮೆ ಮಾಡಿ, ಜನರ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಅವಕಾಶ ಕೇಂದ್ರ ಸರ್ಕಾರಕ್ಕೆ ಇದ್ದೇ ಇದೆ. ಪೆಟ್ರೋಲ್, ಡೀಸೆಲ್ ಬೆಲೆ ಇಳಿದರೆ ಸಾಗಾಣಿಕೆ ವೆಚ್ಚ ಕಡಿಮೆಯಾಗಿ ಆಹಾರ ವಸ್ತುಗಳ ಬೆಲೆಯೂ ನಿಯಂತ್ರಣಕ್ಕೆ ಬರುತ್ತದೆ. ಆದರೆ ಕೇಂದ್ರ ಸರ್ಕಾರವು ಈ ಕ್ರಮ ಕೈಗೊಳ್ಳುವುದನ್ನು ಬಿಟ್ಟು, ರಾಜ್ಯ ಸರ್ಕಾರಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹೇರಿರುವ ತೆರಿಗೆಯ ಕಡೆಗೆ ಕೈತೋರಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಈ ಕಿತ್ತಾಟವು ಜನಸಾಮಾನ್ಯರ ಬದುಕನ್ನು ನಲುಗಿಸಿದೆ. ಜೀವನೋಪಾಯವನ್ನು ಕಸಿದುಕೊಂಡಿರುವ ಕೋವಿಡ್ ಪಿಡುಗು, ಅನೇಕ ಕುಟುಂಬಗಳ ಮೇಲೆ ವೈದ್ಯಕೀಯ ವೆಚ್ಚದ ಹೊರೆ ಹೇರಿದೆ. ಇದರೊಂದಿಗೆ ಆಹಾರ ವಸ್ತುಗಳ ಬೆಲೆ ಏರಿಕೆಯೂ ಸೇರಿಕೊಂಡು ಬಡವರು ಮತ್ತು ಮಧ್ಯಮ ವರ್ಗದವರ ನೆಮ್ಮದಿ ಕಸಿದಿದೆ. ಕಡು ಕಷ್ಟದಲ್ಲಿರುವ ಜನರ ನೆರವಿಗೆ ಸರ್ಕಾರಗಳು ಧಾವಿಸಬೇಕಾದ ಅಗತ್ಯವಿದೆ. ಬಡವರಿಗೆ ಉಚಿತ ಕೊಡುಗೆಗಳನ್ನು ನೀಡುವುದು ಇದಕ್ಕೆ ತಾತ್ಕಾಲಿಕ ಪರಿಹಾರ ಆಗಬಹುದಷ್ಟೆ. ಅಗತ್ಯವಸ್ತುಗಳ ಬೆಲೆ ಇಳಿಯುವಂತೆ ಮಾಡಿ, ಹಣದುಬ್ಬರದ ಮೇಲೆ ನಿಯಂತ್ರಣ ಸಾಧಿಸುವ ಕೆಲಸವನ್ನು ಸರ್ಕಾರ ತುರ್ತಾಗಿ ಮಾಡಬೇಕಿದೆ.

ದಿನದ ಟ್ವೀಟ್

ಕಿರಿಕಿರಿ ನಿವಾರಿಸೋಣ



ಹಿರಿಯರಿಗೆ ಕಿರುಕುಳ ತಪ್ಪಿಸಿ. ಪ್ರಸ್ತುತ ಸನ್ನಿವೇಶದಲ್ಲಿ ಇದು ಬಹಳ ಮುಖ್ಯವಾದ ಕಾರ್ಯ. ಕೋವಿಡ್- 19 ಸಾಂಕ್ರಾಮಿಕವು ಹಿರಿಯ ನಾಗರಿಕರಿಗೆ ಅವ್ಯಕ್ತ ಭಯ ಮತ್ತು ಸಂಕಷ್ಟವನ್ನು ತಂದೊಡ್ಡಿದೆ. ಹಿರಿಯರನ್ನು ನಿಂದಿಸುವುದನ್ನು ನಾವೆಲ್ಲರೂ ಒಗ್ಗೂಡಿ ನಿಲ್ಲಿಸೋಣ. ನಮ್ಮ ಹಿರಿಯರು ನಮ್ಮ ಸಮಾಜದ ಆಧಾರಸ್ತಂಭಗಳಿದ್ದಂತೆ.
#WorldElderAbuseAwarenessDay

ಇತಿರಾಣಿ ಸಮಂತಾ, ಲೇಖಕಿ

25 ವರ್ಷಗಳ ಹಿಂದೆ

ಭಾನುವಾರ, 16-6-1996

- **ಹೆಗಡೆ ಉಚ್ಚಾಟನೆಗೆ ರಾಜಕೀಯ ವ್ಯವಹಾರ ಸಮಿತಿ ಅಸ್ತು**

ನವದೆಹಲಿ, ಜೂನ್ 15– ರಾಮಕೃಷ್ಣ ಹೆಗಡೆ ಅವರನ್ನು ಜನತಾದಳದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾದ ದಳದ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್ ಅವರ ಕ್ರಮವನ್ನು ಇಂದು ಸಂಜೆ ನಡೆದ ರಾಜಕೀಯ ವ್ಯವಹಾರಗಳ ಸಮಿತಿಯ ಸಭೆಯು ಅನುಮೋದನೆ ಮಾಡಿತು.
ಈ ಬೆಳವಣಿಗೆಯಿಂದಾಗಿ ದಳದ ಜತೆಗಿನ ಹೆಗಡೆ ಅವರ ಸಂಬಂಧಕ್ಕೆ ತೆರೆಬಿದ್ದಂತಾಯಿತು.

- **5 ವರ್ಷದ ಹಿಂದೆ ಗೌಡರು ಎಲ್ಲಿದ್ದರು?–ಹೆಗಡೆ**

ಬೆಂಗಳೂರು, ಜೂನ್ 15– 'ಕಳೆದ 5 ವರ್ಷದಿಂದ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ಆರೋಪ'ದ ಮೇಲೆ ಜನತಾ ದಳದಿಂದ ಉಚ್ಚಾಟನೆಗೊಂಡಿರುವ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು 'ಈ 5 ವರ್ಷದ ಹಿಂದೆ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಸಿ.ಎಂ. ಇಬ್ರಾಹಿಂ ಎಲ್ಲಿ ಇದ್ದರು ಮತ್ತು ಎಲ್ಲಿ ಕುಳಿತು ಪಕ್ಷ ವಿರೋಧಿ ಚಟುವಟಿಕೆಗಳನ್ನು ಗಮನಿಸುತ್ತಿದ್ದರು' ಎಂದು ಪತ್ರಿಕಾಗೋಷ್ಠಿಯಲ್ಲಿ ವ್ಯಂಗ್ಯವಾಗಿ ಕೇಳಿದರು.

50 ವರ್ಷಗಳ ಹಿಂದೆ

ಬುಧವಾರ, 16-6-1971

- **ಜಗತ್ತು ಹೊಣೆಯಿಂದ ತಪ್ಪಿಸಿಕೊಳ್ಳಲು ಬಿಡೆವು: ಇಂದಿರಾ**

ನವದೆಹಲಿ, ಜೂನ್ 15– ಬಾಂಗ್ಲಾ ದೇಶದ ನಿರಾಶ್ರಿತರ ಸಮಸ್ಯೆಯನ್ನು ಎದುರಿಸಲು ಭಾರತ ತನ್ನ ಕೈಮೀರಿ ಶ್ರಮಿಸುವುದಾದರೂ ಆ ಬಗ್ಗೆ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದಕ್ಕೆ ಅಂತರರಾಷ್ಟ್ರೀಯ ಸಮುದಾಯಕ್ಕೆ ಅವಕಾಶ ಕೊಡುವುದಿಲ್ಲ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ರಾಜ್ಯಸಭೆಗೆ ತಿಳಿಸಿದರು.

ಭಾರತಕ್ಕೆ ಲಕ್ಷಾಂತರ ಮಂದಿ ನಿರಾಶ್ರಿತರು ವಲಸೆ ಬಂದಿರುವ ವಿಷಯದ ಬಗ್ಗೆ ಮೂರು ಗಂಟೆಗಳ ಕಾಲ ನಡೆದ ಚರ್ಚೆಗೆ ಉತ್ತರ ಕೊಡುತ್ತಿದ್ದ ಪ್ರಧಾನಿ ಅವರು 'ಹೊರಗಡೆಯಿಂದ ನೆರವು ಬರಲಿ, ಬಿಡಲಿ, ಜಗತ್ತಿನ ಈ ಭಾಗದಲ್ಲಿ ಸಂಭವಿಸುತ್ತಿರುವ ಘಟನೆಗಳ ಪರಿಣಾಮವು ಅಂತರ ರಾಷ್ಟ್ರೀಯ ಸಮುದಾಯದ ಮೇಲೆ ಹಾನಿಯುಂಟು ಮಾಡುತ್ತದೆ' ಎಂದರು.

- **'ಸರ್ಕಾರದಿಂದ ಕರ್ತವ್ಯಲೋಪ'**

ನವದೆಹಲಿ, ಜೂನ್ 15– ನಿರಾಶ್ರಿತರ ಪುನರ್‌ವ್ಯವಸ್ಥೆ ವಿಷಯದಲ್ಲಾಗಲಿ ಅಥವಾ ಹೋರಾಟಕ್ಕೆ ನೆರವಾಗುವುದರಲ್ಲಾಗಲಿ ಸರ್ಕಾರ ತನ್ನ ಕೈಮೀರಿ ಶ್ರಮಿಸುತ್ತಿಲ್ಲವೆಂದು ಲೋಕಸಭೆಯ ವಿರೋಧ ಪಕ್ಷದ ನಾಯಕರು ಇಂದು ಅಭಿಪ್ರಾಯಪಟ್ಟರೆಂದು ಗೊತ್ತಾಗಿದೆ.

ಬಾಂಗ್ಲಾ ದೇಶದ ಸಮಸ್ಯೆ ಕುರಿತು ಚರ್ಚಿಸಲು ಇಲ್ಲಿ ಸಭೆ ಸೇರಿದ್ದ ಅವರು ಬಾಂಗ್ಲಾ ದೇಶದ ಬಗ್ಗೆ ಸರ್ಕಾರದ ನೀತಿಯ ವಿಷಯದಲ್ಲಿ ಸ್ಪಷ್ಟೀಕರಣ ಕೇಳುವುದಕ್ಕೆ ಪ್ರಧಾನಿ ಭೇಟಿ ಮಾಡಲೂ ನಿರ್ಧರಿಸಿದರು.

ರಾಜ್ಯದಲ್ಲಿ ನೈಜ ವಿರೋಧ ಪಕ್ಷದ ಕರ್ತವ್ಯವನ್ನು ಕಾಂಗ್ರೆಸ್ ಮಾಡುತ್ತಿರುವುದು ಆಶಾದಾಯಕ ಬೆಳವಣಿಗೆ

ಬಿಜೆಪಿಗೆ ಸುಡು ತಾಪ: ಕಾಂಗ್ರೆಸ್‌ಗೆ ಹುರುಪು



ಗತಿಬಿಂಬ

ವೈ.ಗ.ಜಗದೀಶ್

'ಅಧಿಕಾರದಲ್ಲಿದ್ದಾಗಕ್ಕೆ ಸಕ್ರಿಯ, ಉಳಿದಾಗ ನಿಷ್ಕ್ರಿಯ'... ಇದು ಕಾಂಗ್ರೆಸ್‌ಗೆ ಲಾಗಾಯ್ತಿನಿಂದ ಇರುವ ಅಪವಾದ. ದೇಶ-ರಾಜ್ಯಗಳಲ್ಲಿ ಅಧಿಕಾರ ಅನುಭವಿಸುತ್ತಲೇ ಅನೇಕ ದಶಕ ಕಳೆದಿರುವ 'ಕೈ' ನಾಯಕರು-ಕಾರ್ಯಕರ್ತರಿಗೆ ಈ ಥರದ ಸೋಮಾರಿತನ ಅಂಟುಜಾಡ್ಯ.

'ಕಾಂಗ್ರೆಸ್‌ಮುಕ್ತ ಭಾರತ' ಘೋಷಣೆ ಮುಂದಿಟ್ಟುಕೊಂಡು ನರೇಂದ್ರ ಮೋದಿ– ಅಮಿತ್ ಶಾ ಜೋಡಿ ಯಾವಾಗ 'ಯುದ್ಧ'ಕ್ಕೆ ಹೊರಟಿತೋ ಆಗ ಕಾಂಗ್ರೆಸ್ ಎಂಬ ಆಲದಮರದ ಎಲೆ, ರೆಂಬೆ, ಕೊಂಬೆ, ಬಿಳಲು ಎಲ್ಲವೂ ಉದುರಿ, ಕಾಂಡವೇ ಮಗುಚಿ ಬಿದ್ದಿತು. ಕೊನೆಗೆ 'ಕಾಂಗ್ರೆಸ್' ಕಾಡೇ ಕರಗಿ 'ಕಮಲ' ಬಿರಿಯಲು ತೊಡಗಿತು. ಬುಡಮಟ್ಟ ಮಲಗಿದ ಮೇಲೂ ಕಾಂಗ್ರೆಸ್ ಹೈಕಮಾಂಡ್, ಪಕ್ಷ ಪುನಶ್ಚೇತನದ ದಾರಿ ಹುಡುಕುವತ್ತ, ಸಂಘಟನೆಗೆ ಹೊಸ ಕಸುವು ತುಂಬುವತ್ತ ಆಲೋಚಿಸಲೇ ಇಲ್ಲ.

ಇತಿಹಾಸದ ಚಕ್ರ ಎಲ್ಲೋ ಒಂದು ಕಡೆ ಹೂತು ನಿಲ್ಲುವುದಿಲ್ಲ. ಅಲ್ಪಕಾಲದ ನಿಶ್ಚಲ ಸ್ಥಿತಿ ಬಳಿಕ ಚಕ್ರ ಮುಂಚಲಿಸಬೇಕು. 70ರ ದಶಕದಲ್ಲಿನ ಇಂದಿರಾ ಗಾಂಧಿ ಅವರ ಸರ್ವಾಧಿಕಾರದ ದಿನಗಳು ಮರುಕಳಿಸುವ ಲಕ್ಷಣಗಳು ಈಗ ಗೋಚರಿಸುತ್ತಿವೆ. ಯಶಸ್ಸಿನ ಕಿರೀಟ ಹೊತ್ತುಕೊಂಡೇ ನಡೆದಿದ್ದ ಬಿಜೆಪಿಯ ಸರ್ವಾಧಿಕಾರಿ ಕೋಟೆಯಲ್ಲಿ ಬಿರುಕುಗಳು ಎದ್ದು ಕಾಣಿಸತೊಡಗಿವೆ.

ರಾಷ್ಟ್ರಮಟ್ಟದಲ್ಲಿ, ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಬಿಕ್ಕಟ್ಟು ಬಿಗಡಾಯಿಸುತ್ತಿದೆ. ಇಂದಿರಾ ಅವರ ಮಂಡಳಿ ಮಾಡಿದ್ದ ತಪ್ಪನ್ನು 'ಮಂದಿರ'ದ ಮಾಂಡಲೀಕರು ಮಾಡುತ್ತಿದ್ದಾರೆ. 'ರಾಜ್ಯದ ಮುಖ್ಯಮಂತ್ರಿಗಳೆಲ್ಲ ಸಾಮಂತರಂತೆ ಇರಬೇಕೆಂಬ ಇಂದಿರಾ ಕಾಲದ ನಿಲುವಿಗೆ ಆತುಕೊಂಡಂತಿದ್ದ ಮೋದಿ– ಶಾ ಜೋಡಿಯು ಪ್ರತಿರೋಧ ಎದುರಿಸುತ್ತಿದೆ. ಮೋದಿ ಉತ್ತರಾಧಿಕಾರಿ ಎಂದೇ ಬಿಂಬಿತರಾಗಿದ್ದ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಹೇಳಿದ್ದನ್ನು ಕೇಳುತ್ತಾರೆ ಎಂದು ಅವರೇ ನಂಬಿದ್ದ ಬಿ.ಎಸ್.ಯಡಿಯೂರಪ್ಪ ತಿರುಗಿ ಬಿದ್ದಿದ್ದಾರೆ.


ಬಿಜೆಪಿಗೆ ಒಂದರ್ಥದಲ್ಲಿ ಆರ್‌ಎಸ್‌ಎಸ್ 'ಹೈಕಮಾಂಡ್'. ಕೋಮುವಾದಿ ನಿಲುವು, ಹಿಂದೂ ರಾಷ್ಟ್ರ ನಿರ್ಮಾಣದಂತಹ ಎಲ್ಲರೂ ಒಪ್ಪಲಾಗದ ನಿಲುವುಗಳನ್ನೂ ಅದು ಪಾಲಿಸುತ್ತಿದೆ. ಅದರಾಚೆಗೆ, ಭ್ರಷ್ಟಾಚಾರ– ವಂಶಪಾರಂಪರ್ಯ ರಾಜಕಾರಣಕ್ಕೆ ವಿರೋಧ, ಸೇವಾ ಕೈಂಕರ್ಯ, ಎಲ್ಲರನ್ನೂ ಒಳಗೊಳ್ಳುವಿಕೆಯೇ ತಮ್ಮ ಆಶಯ ಎಂದು ಆರ್‌ಎಸ್‌ಎಸ್ ಹೇಳಿಕೊಂಡು ಬಂದಿದೆ. ಆರ್‌ಎಸ್‌ಎಸ್ ಈಗ ತನ್ನ ಮಾರ್ಗ ಬದಲಿಸಿದೆಯೇ? ಏಕೆಂದರೆ, ಸಂಘ ಹೇಳಿದ ಮಾತನ್ನು ಬಿಜೆಪಿ ನಾಯಕರು ಪಾಲಿಸುತ್ತಿಲ್ಲ. ಅಧಿಕಾರ ರಾಜಕಾರಣದ ಹಪಹಪಿಯ ಸಿಕ್ಕುಗಳಲ್ಲಿ ಬಿಕ್ಕುತ್ತಿರುವ ಬಿಜೆಪಿಯು ಭ್ರಷ್ಟಾಚಾರ, ಸ್ವಜನಪಕ್ಷಪಾತ, ಸೈದ್ಧಾಂತಿಕ ಲವಲೇಶವೂ ಇಲ್ಲದ 'ಆಪರೇಷನ್ ಕಮಲ'... ಇವನ್ನೆಲ್ಲ ಮೈಗೂಡಿಸಿಕೊಂಡು ಬೇರೆ ಪಕ್ಷಗಳಿಗಿಂತ ಭಿನ್ನವಲ್ಲವೆಂದು ತೋರಿಸಿದೆ.

ಬಿಜೆಪಿಯೊಳಗೆ ಪರ್ಯಾಯವನ್ನೇ ಹುಟ್ಟುಹಾಕಬಲ್ಲ ಶಕ್ತಿ ತಮಗಿದೆ ಎಂದು ತೋರಿಸಿಕೊಳ್ಳುತ್ತಿದ್ದ ಸಂಘದ ಮಂದಿ, ಈಗ 'ಸಂಘ ದಕ್ಷ- ಸಂಘ ಆಕ್ರಮ' ಎನ್ನುವಷ್ಟಕ್ಕೆ ಏದುಸಿರು ಬಿಡುತ್ತಿದ್ದಾರೆ. ಏಳು ವರ್ಷದ ಸುದೀರ್ಘ ಅವಧಿಯಲ್ಲಿ ತನ್ನ ಕೈಸನ್ನೆಯಂತೆ ಕೇಂದ್ರದಲ್ಲಿ ಆಡಳಿತ ನಡೆಸುವ ಅವಕಾಶ ಇದ್ದಾಗ, ವ್ಯವಸ್ಥೆಯನ್ನು ಸರಿದಾರಿಗೆ ತರುವ ಖಚಿತಮಾರ್ಗ ಅನುಸರಿಸಲು ಆರ್‌ಎಸ್‌ಎಸ್‌ಗೆ ಸಾಧ್ಯವಿತ್ತು. ಆದರೆ, ಅದನ್ನು ಬಿಟ್ಟುಕೊಟ್ಟು ಅಧಿಕಾರ ರಾಜಕಾರಣವನ್ನೇ ನಿರ್ಲಜ್ಜೆಯಿಂದ ಮುನ್ನಡೆಸಲು ಅವಕಾಶ ಕೊಟ್ಟ ಸಂಘದ ನಾಯಕರು, ಈಗ ಪಾಶ್ಚಾತ್ತಾಪ, ಭಯೋತ್ಪಾದನೆ, ತುಷ್ಟೀಕರಣದಂತಹ ಹಳಸಲು ರಿವಾಜುಗಳಿಗೆ ಜೋತು ಬಿದ್ದು, ತಮ್ಮ ಜವಾಬ್ದಾರಿಯನ್ನು ಮರೆತುಬಿಟ್ಟರೇ?

ಈ ಹೊತ್ತಿನೊಳಗೆ ಕಾಂಗ್ರೆಸ್ ಭಿನ್ನ ಹೆಜ್ಜೆ ಇಡುತ್ತಿದೆ. ಅಧಿಕಾರ ಕಳೆದುಕೊಂಡು 'ಸರ್ವಾಧಿಕಾರದ ವೈಧವ್ಯ' ಅನುಭವಿಸುತ್ತಿರುವ ಕಾಂಗ್ರೆಸ್, ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೆ ಪೂರ್ಣ ಹೊಣೆ ಕೊಟ್ಟಿದೆ. ಹಾಗಿದ್ದರೂ ಇಡೀ ದೇಶದಲ್ಲಿ ಕಾಂಗ್ರೆಸ್‌ಗೆ ನೆಲಕಚ್ಚಿದ ಸ್ಥಿತಿಯೇ ಮುಂದುವರಿದಿದೆ. ಆದರೆ, ಕರ್ನಾಟಕದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಜೋಡಿ ಪಕ್ಷದ ವರ್ಚಸ್ಸನ್ನು ಹೆಚ್ಚಿಸತೊಡಗಿದೆ. ನಾಯಕತ್ವ– ಭಿನ್ನಮತದ ಬಿಕ್ಕಟ್ಟಿನಲ್ಲಿ ಸೊರಗುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರಕ್ಕೆ, ತಮ್ಮ ಕ್ರಿಯೆಗಳ ಮೂಲಕವೇ ನಿಜದ ಹಾದಿ ತೋರಿಸತೊಡಗಿದೆ.

ವಿರೋಧ ಪಕ್ಷ ಹಾಗೂ ಅದರ ನಾಯಕರು ಬಲಿಷ್ಠರು, ಜನಪರ ಕಾಳಜಿಯವರು ಹಾಗೂ ದೂರದರ್ಶಿತ್ವ ಹೊಂದಿದವರಾಗಿದ್ದರೆ, ಹಾದಿ ತಪ್ಪಿದ ಸರ್ಕಾರವನ್ನು ಸರಿದಾರಿಗೆ ತರಲು ಸಾಧ್ಯ. ಹಾಗಾದಾಗ, ಜನರ ಕಷ್ಟಗಳು ನೀಗತೊಡಗುತ್ತವೆ.

ವರ್ಷದ ಹಿಂದೆ ಬರಸಿಡಿಲಿನಂತೆ ಕೋವಿಡ್ ಎರಗಿದಾಗ ಜನ ದಿಕ್ಕಾಪಾಲಾಗಿ ಊರಿಗೆ ಹೊರಟಿದ್ದರು. ಕಾರ್ಮಿಕರಿಗೆ ಪ್ರಯಾಣಕ್ಕೆ ಸರ್ಕಾರ ವ್ಯವಸ್ಥೆ ಮಾಡಿರಲಿಲ್ಲ. ಆಗ, ಕಾರ್ಮಿಕರ ಪ್ರಯಾಣ ವೆಚ್ಚಕ್ಕಾಗಿ ₹1 ಕೋಟಿ ಚೆಕ್ ಕಳಿಸಿದ ಡಿ.ಕೆ.ಶಿವಕುಮಾರ್, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದರು. ತರಕಾರಿ-ಹಣ್ಣು ಬೆಳೆದವರು ಲಾಕ್‌ಡೌನ್‌ನಿಂದ ಅದನ್ನು ಸಾಗಿಸಲಾಗದೆ ಹೊಲದಲ್ಲೇ ಬಿಡಬೇಕಾದ ಪರಿಸ್ಥಿತಿ ಎದುರಾಯಿತು. ಆಗ ಹೊಲಗಳಿಗೆ ಹೋಗಿ ಖರೀದಿ ಆರಂಭಿಸಿದ ಕಾಂಗ್ರೆಸ್ ನಾಯಕರು, ಶಾಸಕರು ಸರ್ಕಾರಕ್ಕೆ ಬಿಸಿ ಮುಟ್ಟಿಸಿದರು. ಸರ್ಕಾರವೂ ಅದೇ ಹಾದಿಯಲ್ಲಿ ಸಾಗಬೇಕಾದ ಅನಿವಾರ್ಯ ಸೃಷ್ಟಿಯಾಯಿತು.



ಕೋವಿಡ್ ನಿರ್ವಹಣೆಗಾಗಿ ಔಷಧ, ಯಂತ್ರೋಪಕರಣ ಖರೀದಿ, ಸೌಲಭ್ಯ ಕಲ್ಪಿಸುವಲ್ಲಿನ ಭ್ರಷ್ಟಾಚಾರವನ್ನು ಸಿದ್ದರಾಮಯ್ಯ ಸತತ ಬಯಲು ಮಾಡಿದರು. ಶಾಸಕ ಎಚ್.ಕೆ.ಪಾಟೀಲ ಜತೆ ಸೇರಿದರು. ಕೋವಿಡ್ ನಿರ್ವಹಣೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿದರು. ಈ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯದೇ ಇರಬಹುದು. ಆದರೆ, ಎರಡನೇ ಅಲೆ ಬಂದಾಗ ಭ್ರಷ್ಟಾಚಾರದ ಅಡಾವುಡಿಗೆ ಸಚಿವರು ಕೈಹಾಕುವ ಧೈರ್ಯ ಮಾಡದೇ ಇರಲು ಇದು ಕಾರಣವಾಯಿತು.

ಎರಡನೇ ಅಲೆಯ ವೇಳೆ ಆರೋಗ್ಯ ವ್ಯವಸ್ಥೆ ಸುಧಾರಣೆ, ಪ್ಯಾಕೇಜ್‌ಗಳಿಗೆ ಆಗ್ರಹಿಸುತ್ತಲೇ ಬಂದ ಕಾಂಗ್ರೆಸ್ ನಾಯಕರು, ಸರ್ಕಾರದ ನಿರ್ಧಾರಗಳನ್ನು ಸಕಾಲಕ್ಕೆ ವಿಮರ್ಶೆಗೆ ಗುರಿಪಡಿಸುತ್ತಲೇ ಬಂದರು. ಜನರಿಗೆ ಸುಲಭದಲ್ಲಿ ಲಸಿಕೆ ಸಿಗುವುದಿಲ್ಲ ಎಂದು ಗೊತ್ತಾಗಿದ್ದೇ ತಡ, ಶಾಸಕರ ನಿಧಿಯಿಂದ ₹1 ಕೋಟಿ ಬಳಸಲು ಅನುಮತಿ ಕೊಡಿ; ಪಕ್ಷದಿಂದ ₹10 ಕೋಟಿ ಸೇರಿಸಿ ₹100 ಕೋಟಿಯಲ್ಲಿ ಲಸಿಕೆ ಖರೀದಿಸುತ್ತೇವೆ ಎಂಬ ಬೇಡಿಕೆಯನ್ನು ಸಿದ್ದರಾಮಯ್ಯ– ಶಿವಕುಮಾರ್ ಮುಂದಿಟ್ಟರು. ಇದಕ್ಕೆ ಮುಖ್ಯಮಂತ್ರಿ ಒಪ್ಪುವುದಿಲ್ಲ ಎಂಬುದು ಹಿಂದೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರಿಗೆ ಗೊತ್ತಿಲ್ಲದ ಸಂಗತಿಯೇನಲ್ಲ. ಇದೊಂದು ಹೋರಾಟದ ಕಾರ್ಯತಂತ್ರವಾಗಿತ್ತು. ಈ ಬೇಡಿಕೆ ಈಡೇರಿಸುವ ಬದಲು ಎಲ್ಲರಿಗೂ ಉಚಿತವಾಗಿ ಲಸಿಕೆ ಕೊಡಲು ₹843 ಕೋಟಿ ಅನುದಾನ ನೀಡುವ ಘೋಷಣೆ ಮಾಡಬೇಕಾದ ಇಕ್ಕಟ್ಟಿಗೆ ಸರ್ಕಾರ ಸಿಲುಕಿತು. ಸರ್ಕಾರ ಮಾಡಲೇಬೇಕಾದ ಕೆಲಸವನ್ನು ಅದರ ಮೂಗು ಹಿಡಿದು ಮಾಡಿಸುವ ನೈಜ ವಿರೋಧ ಪಕ್ಷದ ಕರ್ತವ್ಯವನ್ನು ಕಾಂಗ್ರೆಸ್ ಮಾಡಿತು.

ಪೆಟ್ರೋಲ್– ಡೀಸೆಲ್ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ನಡೆಸುತ್ತಿರುವ ಹೊಸ ರೂಪದ ಹೋರಾಟ, ಜನಾಕ್ರೋಶದ ಅಭಿವ್ಯಕ್ತ ರೂಪ. ಹಾಗಂತ, ಸಿದ್ದರಾಮಯ್ಯ– ಡಿ.ಕೆ.ಶಿವಕುಮಾರ್ ಮಧ್ಯೆ ನಾಯಕತ್ವಕ್ಕಾಗಿ ಪೈಪೋಟಿ ಇಲ್ಲವೆಂದಲ್ಲ. ಭವಿಷ್ಯದ ಸ್ಪರ್ಧೆಯನ್ನು ಬದಿಗಿಟ್ಟ ಇಬ್ಬರೂ ನಾಯಕರು, ಜನರ ಕಷ್ಟಗಳಿಗೆ ಬಾಯಾಗುವತ್ತ, ಹೋರಾಟಕ್ಕೆ ಕಸುವಾಗುವತ್ತ ಹೆಜ್ಜೆಯನ್ನಿಟ್ಟಿದ್ದಾರೆ. ಶಿವಕುಮಾರ್ ಕೂಡ ತಮ್ಮ ಹಮ್ಮು ಬಿಟ್ಟು ಎಲ್ಲ ನಾಯಕರ ಮನೆಗೂ ಎಡತಾಕುತ್ತಿದ್ದಾರೆ. ಕಾಂಗ್ರೆಸ್ ನಾಯಕರ ಪಕ್ಷವಲ್ಲ, ಕಾಯಕರ್ತರ ಪಕ್ಷವೆಂದು ಮರುನಿರೂಪಿಸುವ ಕಾಯಕದಲ್ಲಿ ತೊಡಗಿದ್ದಾರೆ. ಕಾಂಗ್ರೆಸ್‌ನ ಈ ಹೋರಾಟದ ಹಿಂದೆ ಅಂತಿಮವಾಗಿ ರಾಜಕೀಯ ಮರುಹುಟ್ಟಿನ ಅಪೇಕ್ಷೆ ಇದ್ದರೂ, ಆಳದಲ್ಲಿ ಜನಪರ ಕಾಳಜಿಯೇ ಕಾಣಿಸುತ್ತಿದೆ. ಆಡಳಿತ ಪಕ್ಷದ ಬಿಕ್ಕಟ್ಟಿನಿಂದಾಗಿ ನಾಡಿನ ಜನ, ಅಭಿವೃದ್ಧಿಯ ಮೇಲೆ ಬೀಳುತ್ತಿರುವ ಮರ್ಮಾಘಾತದ ಬಗ್ಗೆ ಜನರಲ್ಲಿ ಎಚ್ಚರ ಮೂಡಿಸುವ ಪ್ರತಿಪಕ್ಷದ ನೈಜ ಜವಾಬ್ದಾರಿಯನ್ನು ಕಾಂಗ್ರೆಸ್ ಮಾಡುತ್ತಿರುವುದು ಸದ್ಯಕ್ಕಂತೂ ಆಶಾದಾಯಕ.

ಚುರುಮುರಿ



ಪದವಿ ಪ್ರಹಸನ

• ಮಣ್ಣೆರಾಜು

ಮಹಾರಾಜರು ಚಿಂತಾಕ್ರಾಂತರಾಗಿ ಕುಳಿತಿದ್ದರು. ಸಚಿವರು ಬಂದು, 'ಪ್ರಭು, ತಾವು ಪದವಿ ತ್ಯಾಗದ ಪ್ರಕಟಣೆ ನೀಡಿದ್ದು ಜನರ ಸಿಂಪಥಿಗೋ, ವಿರೋಧಿಗಳ ಕಿತಾಪತಿಗೋ...?' ಕೇಳಿದರು.

ಹುಸಿನಗೆ ನಕ್ಕ ಪ್ರಭುಗಳು, 'ಅಧಿಕಾರಕ್ಕೆ ಜೋತು ಬೀಳುವ ಜಾಯಮಾನ ನಮ್ಮದಲ್ಲ ಎನ್ನುವ ಸಂದೇಶ ಸಾರಲು'.

'ರೆಬೆಲ್‌ಗಳು ಡಬಲ್ ಆಗುತ್ತಿದ್ದಾರೆ, ತಮ್ಮ ವಿರುದ್ಧ ತುತ್ತೂರಿ ಊದುವವರ ಸಂಖ್ಯೆ ಜಾಸ್ತಿ ಆಗುತ್ತಿದೆ ಪ್ರಭು...'

'ತುತ್ತೂರಿಗಳ ಹಿಂದೆ ದಿಲ್ಲಿ ದೊರೆಗಳ ಪಿತೂರಿಯೂ ಇದೆ ಎಂಬ ಅರಿವು ನಮಗೂ ಇದೆ'.

'ತುತ್ತೂರಿ, ಕಿವಿ ಊದುವವರ ಪಟ್ಟಿ ಸಿದ್ಧ ಮಾಡಿದ್ದೇನೆ ಪ್ರಭು. ಸಮಯ ಬಂದಾಗ ಅವರಿಗೆ ತಮಟೆ, ಜಾಗಟೆ ಬಾರಿಸಿಬಿಡೋಣ...' ಎಂದರು ಮಂತ್ರಿ. ಪ್ರಭುಗಳು ಮತ್ತೊಮ್ಮೆ ನಕ್ಕರು.

'ತಮ್ಮ ಆಡಳಿತ ಉತ್ತಮವಾಗಿದೆ, ರಾಜ್ಯದಲ್ಲಿ ಕೊರೊನಾ ಕಂಟ್ರೋಲಿಗೆ ಬರುತ್ತಿದೆ' ಓಲೈಸಿದರು.

'ನಾಯಕತ್ವ ಬದಲಾವಣೆ ಅಂತ ಪದೇಪದೇ ದಿಲ್ಲಿಗೆ ಹೋಗಿ ದೂರುವವರನ್ನು ಮೊದಲು ಕಂಟ್ರೋಲ್ ಮಾಡಬೇಕು...'

'ಪ್ರಭು ಕೊರೊನಾ ನೆಪ ಮಾಡಿ, ದೆಹಲಿ ವಿಮಾನಗಳನ್ನು ರದ್ದು ಮಾಡಿ, ಆಗ ದೂರುದಾರರು ಕಂಟ್ರೋಲಿಗೆ ಬರುತ್ತಾರೆ'.

ಇನ್ನೊಮ್ಮೆ ನಕ್ಕ ಪ್ರಭುಗಳು, 'ನಮಗೆ ಏಜು ಜಾಸ್ತಿಯಾಗಿದೆ, ಆಡಳಿತದ ಕ್ರೇಜು ಕಮ್ಮಿಯಾಗಿದೆ ಎಂದು ನೀವೇ ಅಪಪ್ರಚಾರ ಮಾಡುತ್ತಿರುವಿರಿ...'

'ಹೆಹ್ಹೆಹ್ಹೆ... ಅದು ಹಾಗಲ್ಲ ಪ್ರಭು, ಈ ಇಳಿವಯಸ್ಸಿನಲ್ಲಿ ತಮಗೆ ರಾಜ್ಯಭಾರದ ಭಾರ ಹೆಚ್ಚಾಗಿದೆ. ಈ ಸಮಯದಲ್ಲಿ ತಾವು ಆರೋಗ್ಯ, ವೈರಾಗ್ಯದ ಕಡೆ ಗಮನಹರಿಸಲಿ ಅನ್ನೋ ಕಾಳಜಿಯಿಂದ ಹಾಗೆ ಹೇಳಿದೆ...'

ಅಂತಿಮ ನಗೆ ಬೀರಿದ ಪ್ರಭುಗಳು ತಕ್ಷಣ ಸಿಟ್ಟಿಗೆದ್ದು, 'ವಿರೋಧಿ ಗುಂಪು ಕಟ್ಟಿಕೊಂಡು ನಮ್ಮನ್ನು ಕೆಳಗಿಳಿಸಿ ರಾಜಪದವಿಗೇರಬೇಕೆಂಬ ನಿಮ್ಮ ಒಳಸಂಚು ನಮಗೂ ಗೊತ್ತು, ಈ ನಡವಳಿಕೆ ಬದಲಿಸಿಕೊಳ್ಳದಿದ್ದರೆ ಇರುವ ಮಂತ್ರಿ ಪದವಿಯನ್ನೂ ಕಳೆದುಕೊಳ್ಳುವಿರಿ...' ಎಂದು ಗುಡುಗಿದರು.

ಸಂಗತ

ಕನ್ನಡದಲ್ಲಿ ವೃತ್ತಿಶಿಕ್ಷಣ: ಸಜ್ಜಾಗಲಿ ಭೂಮಿಕೆ

ಎಂಜಿನಿಯರಿಂಗ್ ಶಿಕ್ಷಣವನ್ನು ಕನ್ನಡ ಭಾಷೆಯಲ್ಲಿ ಬೋಧಿಸುವ ಆಸಕ್ತರನ್ನು ಗುರುತಿಸುವ, ಅವರಿಗೆ ಸೂಕ್ತ ತರಬೇತಿ ನೀಡುವ ಕಾರ್ಯ ಬಹುಮುಖ್ಯವಾದದ್ದು

• ಸುಕ್ಷೀರಸಾಗರ

ಈ ಬಾರಿಯ ಬಜೆಟ್ ಅಧಿವೇಶನದಲ್ಲಿ ಸಲ್ಲಿಸಲಾದ ಐದನೇ ಹಣಕಾಸು ಆಯೋಗದ ವರದಿಯ ಪ್ರಕಾರ, ದೇಶದ ಪ್ರತಿಶತ 70ರಷ್ಟು ಜನರು ಇಂಗ್ಲಿಷ್ ಭಾಷೆಯಲ್ಲಿ ಉತ್ತಮ ಶಿಕ್ಷಣ ಪಡೆಯಲಾಗದಂಥ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಈ ಭಾಗದ ಜನರು ವೃತ್ತಿಪರ ಶಿಕ್ಷಣವನ್ನು ಇಂಗ್ಲಿಷ್ ಮೂಲಕ ಕಲಿಯಲು ಆರಂಭಿಸಿದಾಗ, ಭಾಷೆಯೇ ದೊಡ್ಡ ತೊಡಕಾಗಿ, ಬಹಳಷ್ಟು ಜನರು ತಮ್ಮ ವ್ಯಾಸಂಗವನ್ನು ಅರ್ಧಕ್ಕೇ ಕೈಬಿಡುತ್ತಿದ್ದಾರೆ ಎಂಬುದನ್ನು ಅದು ಗುರುತಿಸಿದೆ.

ಈ ದಿಸೆಯಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ- 2020'ರ ಶಿಫಾರಸಿನಂತೆ, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ವೃತ್ತಿಪರ ಶಿಕ್ಷಣವನ್ನು ಸ್ಥಳೀಯ ಭಾಷೆಗಳಲ್ಲಿ ಬೋಧಿಸಲು ಅಗತ್ಯ ಭೂಮಿಕೆಗಳನ್ನು ಸಿದ್ಧಪಡಿಸುತ್ತಿದೆ. ಅದರ ಅನುಸಾರ, ಎಂಜಿನಿಯರಿಂಗ್ ಕಾಲೇಜುಗಳು ಕನ್ನಡವೂ ಸೇರಿದಂತೆ ಎಂಟು ರಾಜ್ಯ ಭಾಷೆಗಳಲ್ಲಿ ಪದವಿ ಶಿಕ್ಷಣವನ್ನು ಈ ವರ್ಷದಿಂದಲೇ ಪ್ರಾರಂಭಿಸಬಹುದು ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (ಎಐಸಿಟಿಇ) ಪರವಾನಗಿ ನೀಡಿದೆ. ಅದಕ್ಕೆ ಪೂರಕವಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಕನ್ನಡದಲ್ಲಿ ಎಂಜಿನಿಯರಿಂಗ್ ಪಠ್ಯಪುಸ್ತಕಗಳ ಪ್ರಕಟಣೆಗೆ ಸಿದ್ಧತೆಗಳನ್ನು ನಡೆಸುತ್ತಿದೆ. ಇಂಗ್ಲಿಷ್ ಮಾಧ್ಯಮದಲ್ಲಿ ಎಂಜಿನಿಯರಿಂಗ್ ಕಲಿಯುತ್ತಿರುವ, ಇಂಗ್ಲಿಷ್ ಪ್ರಾವೀಣ್ಯವಿಲ್ಲದ ವಿದ್ಯಾರ್ಥಿಗಳಿಗೆ ವಿಷಯ ಅರಿತುಕೊಳ್ಳಲು ಇವು ನೆರವಾಗುತ್ತವೆ.

ಸಮರ್ಥ ಅನುವಾದಕರ ನೆರವಿನಿಂದ ಉತ್ತಮ ದರ್ಜೆಯ ಪಠ್ಯಪುಸ್ತಕಗಳು ಸಿದ್ಧವಾಗಬಹುದು. ಆದರೆ, ಕನ್ನಡ ಭಾಷೆಯಲ್ಲಿಯೇ ಎಂಜಿನಿಯರಿಂಗ್ ವಿಷಯಗಳನ್ನು ಸಮರ್ಥವಾಗಿ ಬೋಧಿಸಬಲ್ಲ ಶಿಕ್ಷಕರು ಸಿಗುವುದು ಅಷ್ಟು ಸುಲಭವಲ್ಲ. ತಾಂತ್ರಿಕ ವಿಷಯಗಳನ್ನು ಇಂಗ್ಲಿಷಿನಲ್ಲಿ ಬೋಧಿಸುವ ಹುದ್ದೆಗಳೇ ಬಹಳಷ್ಟು ಸಂಖ್ಯೆಯಲ್ಲಿ ಈಗ ಖಾಲಿ ಬಿದ್ದಿವೆ. ಕನ್ನಡ ಭಾಷೆಯಲ್ಲಿ ಬೋಧಿಸುವ ಆಸಕ್ತರನ್ನು ಗುರುತಿಸುವ, ಅವರಿಗೆ ಸೂಕ್ತ ತರಬೇತಿ ನೀಡುವ ಕಾರ್ಯವೂ ಬಹುಮುಖ್ಯವಾದದ್ದು.

ಎಂಜಿನಿಯರಿಂಗ್ ಕ್ಷೇತ್ರದ ವಿಷಯವೈವಿಧ್ಯ ಹೆಚ್ಚಿನದು. ಐದರಿಂದ ಹತ್ತು ಶಿಸ್ತಿನ ಕೋರ್ಸುಗಳು ಈಗಾಗಲೇ ಲಭ್ಯವಿವೆ. ಕನ್ನಡದಲ್ಲಿ ಬೋಧನೆಯಾಗುತ್ತದೆಂದು ಒಂದೊಂದು ಕೋರ್ಸಿಗೂ ಬೆರಳೆಣಿಕೆಯ ಸಂಖ್ಯೆಯ ವಿದ್ಯಾರ್ಥಿಗಳು ಕಾಲೇಜಿನತ್ತ ಹೊರಟರೆ, ಅವರಿಗಷ್ಟೇ ಪ್ರತ್ಯೇಕ ಸೆಕ್ಷನ್‌ಗಳನ್ನು ಅಲ್ಲಿ ತೆರೆಯಲಾಗುವುದಿಲ್ಲ. ಈ ಹಿಂದೆ ಕೇಂದ್ರ ಸರ್ಕಾರವು ಪ್ರತೀ ರಾಜ್ಯದಲ್ಲೂ ಅಲ್ಲಿನ ಭಾಷೆಗಳಲ್ಲೇ ಬೋಧಿಸುವ ಪ್ರತ್ಯೇಕ ಎಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜುಗಳನ್ನು ತಾನೇ ಸ್ಥಾಪಿಸುವೆನೆಂದು ಘೋಷಿಸಿತ್ತು. ಕೇಂದ್ರದ ಅನುದಾನ ಹಾಗೂ ಪ್ರೋತ್ಸಾಹದಲ್ಲಿ ಇಂಥ ಕಾಲೇಜುಗಳು ಉತ್ತಮ ಗುಣಮಟ್ಟದ ಮೂಲಸೌಕರ್ಯಗಳನ್ನು ಕಲ್ಪಿಸಬಹುದು.

ಎಂಜಿನಿಯರಿಂಗ್ ಪದವಿ ವ್ಯಾಸಂಗವನ್ನು ಸ್ಥಳೀಯ ಭಾಷೆಯಲ್ಲಿ ಕಲಿಸುವ ಯೋಜನೆ ಸ್ತುತ್ಯರ್ಹವಾದುದು, ಒಪ್ಪೋಣ. ಆದರೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳೇ ಹೆಚ್ಚಾಗಿರುವ ಐ.ಟಿ.ಐ. ಹಾಗೂ ಡಿಪ್ಲೊಮಾ ಹಂತದ ಎಂಜಿನಿಯರಿಂಗ್ ಕಲಿಕೆಯನ್ನು ಕನ್ನಡ ಭಾಷೆಯಲ್ಲಿ ನಡೆಸಲು ನಮಗಿನ್ನೂ ಸಾಧ್ಯವಾಗಿಲ್ಲ. ಇದರ ಬಗ್ಗೆ ರಾಜ್ಯದ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವು ಹೆಚ್ಚಿನ ಗಮನ ಹರಿಸಬೇಕಿದೆ. ಈ ಕಲಿಕೆಯಲ್ಲಿ ತೊಡಗಿಕೊಂಡಿರುವ ಮಕ್ಕಳಿಗೆ ಅಗತ್ಯವಾದ ಪಠ್ಯಪುಸ್ತಕಗಳು, ಆನ್‌ಲೈನ್ ಸಾಮಗ್ರಿಗಳು ಮೊದಲು ಕನ್ನಡ ಭಾಷೆಯಲ್ಲಿ ಲಭ್ಯವಾಗಬೇಕಿವೆ. ಹಾಗೆಯೇ ಕನ್ನಡ ಭಾಷೆಯಲ್ಲಿಯೇ ಈ ಹಂತದ ಜ್ಞಾನವನ್ನು ಉತ್ತಮವಾಗಿ ಪಡೆದ ವಿದ್ಯಾರ್ಥಿಗಳು ಮುಂದೆ ಪದವಿ ಶಿಕ್ಷಣವನ್ನು ಪಡೆಯಲು ಇಚ್ಛಿಸಿದರೆ, ಅವರಿಗೆ ಕೇಂದ್ರ ಸರ್ಕಾರ ಹೊಸದಾಗಿ ಸ್ಥಾಪಿಸಲಿರುವ ಕಾಲೇಜುಗಳು ನೆರವಾಗಲಿವೆ.



ಕನ್ನಡ ಭಾಷೆಯಲ್ಲಿ ಎಂಜಿನಿಯರಿಂಗ್ ಕಲಿತ ಮಕ್ಕಳ ಪದವಿಯೋತ್ತರ ಭವಿಷ್ಯ ಹೇಗಿರುತ್ತದೆ ಎಂಬುದು ಸದ್ಯಕ್ಕೆ ಉತ್ತರಿಸಲಾಗದ ಪ್ರಶ್ನೆ. ಜಾಗತಿಕ ಮಟ್ಟದಲ್ಲಿ ಕೆಲಸ ಮಾಡಬಹುದಾದ ಅವಕಾಶಗಳನ್ನು ಕಳೆದುಕೊಳ್ಳಬಹುದಾದ ಆತಂಕ ವಿದ್ಯಾರ್ಥಿಗಳಲ್ಲಿ ಇರುವುದು ಸಹಜ. ಸಾಮಾನ್ಯವಾಗಿ ಇಂಥ ಸಂದರ್ಭಗಳಲ್ಲಿ ಯುರೋಪ್ ದೇಶಗಳ ಉದಾಹರಣೆ ಪ್ರಸ್ತಾಪವಾಗುತ್ತದೆ. ಆದರೆ ಆ ದೇಶಗಳಲ್ಲಿ ಅಲ್ಲಿನ ಭಾಷೆಗಳಲ್ಲೇ ಅತ್ಯುನ್ನತ ಮಟ್ಟದಲ್ಲಿ ವ್ಯಾಸಂಗ ನಡೆಸಬಲ್ಲ ಮೂಲ ಸೌಕರ್ಯಗಳು ಶತಮಾನಗಳಿಂದ ನಿರ್ಮಾಣವಾಗಿವೆ. ಇಡೀ ದೇಶ ಒಂದೇ ಭಾಷೆಯಲ್ಲಿ ವಹಿವಾಟು ನಡೆಸಬಲ್ಲ ಸಾಮರ್ಥ್ಯವನ್ನು ಅವು ಪಡೆದಿವೆ. ಇದರ ಜತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯವಹರಿಸಬೇಕಾದ ಅಲ್ಲಿನ ತಜ್ಞರು ಇಂಗ್ಲಿಷ್ ಭಾಷೆಯ ಪರಿಣತಿಯನ್ನು ಗಳಿಸಿರುತ್ತಾರೆ. ಇಂಥದ್ದೊಂದು ಭೂಮಿಕೆಯು ಭಾರತದ ಪ್ರತೀ ರಾಜ್ಯದಲ್ಲೂ ನಿರ್ಮಾಣವಾಗಬೇಕೆಂದರೆ ಬಹಳಷ್ಟು ಸಮಯ ಬೇಕು.

ಹಾಗೆಂದ ಮಾತ್ರಕ್ಕೆ ನಾವು ನಿರಾಶರಾಗಬೇಕಿಲ್ಲ. ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುತ್ತಿರುವ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ವಿಷಯ ಸಂಬಂಧಿತ ಅನುಮಾನಗಳನ್ನು ಪರಿಹರಿಸಿಕೊಳ್ಳಲು ಕನ್ನಡ ಭಾಷೆಯಲ್ಲಿ ಪ್ರಕಟವಾಗಿರುವ ಪಠ್ಯಪುಸ್ತಕಗಳ ನೆರವನ್ನು ಪಡೆಯಬಹುದು. ಸಾಧ್ಯವಿರುವೆಡೆ, ಕನ್ನಡ ಭಾಷೆಯಲ್ಲಿ ಬೋಧಿಸುತ್ತಿರುವ ಪ್ರಾಧ್ಯಾಪಕರನ್ನು ಅವರು ಸಂಪರ್ಕಿಸಲೂಬಹುದು.

ಇನ್ನು ಉದ್ಯೋಗದ ಸಮಸ್ಯೆ. ಕನ್ನಡ ಭಾಷೆಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದವರಿಗೆ ಸರ್ಕಾರಿ ಕೆಲಸಗಳ ಹೊರತಾಗಿ ಖಾಸಗಿ ಕಂಪನಿಗಳಲ್ಲಿ ಅವಕಾಶಗಳಿರಬಹುದೇ ಎಂಬುದು ದೊಡ್ಡ ಪ್ರಶ್ನೆಯಾಗಲಿದೆ. ಕರ್ನಾಟಕ ರಾಜ್ಯ ಸರ್ಕಾರಿ ಕೆಲಸಗಳಲ್ಲಾದರೂ ಇಂಥವರಿಗೆ ಒಂದಷ್ಟು ಮೀಸಲಾತಿ ನೀಡಬೇಕಾದೀತು.

ವಾಚಕರ ವಾಣಿ

ಕುಟುಂಬದ ಅನುಕರಣೀಯ ನಡೆ

ಪ್ರತಿಭಾವಂತ ನಟ 'ಸಂಚಾರಿ' ವಿಜಯ್ ಅವರ ಸಾವಿನ ಸುದ್ದಿ ಕೇಳಿ ಆಘಾತವಾಯಿತು. ಕುಟುಂಬದ ಒಬ್ಬ ಪ್ರಧಾನ ವ್ಯಕ್ತಿ ಈ ರೀತಿ ಅಕಾಲಿಕ ಮರಣಕ್ಕೆ ತುತ್ತಾದಾಗ ಆ ಕುಟುಂಬದ ಪರಿಸ್ಥಿತಿ ಹೇಳತೀರದು. ಅಂತಹ ಸಂದಿಗ್ಧ ಸ್ಥಿತಿಯಲ್ಲೂ ವಿಜಯ್ ಅವರ ಅಂಗಾಂಗ ದಾನ ಮಾಡಲು ಅವರ ಕುಟುಂಬದವರು ನಿರ್ಧರಿಸಿದ್ದು ನಮ್ಮನ್ನು ಮೂಕವಿಸ್ಮಿತರನ್ನಾಗಿಸಿತು. ಇಂದು ವಿಜಯ್ ಅವರು ನಮ್ಮೊಡನೆ ಇಲ್ಲದಿದ್ದರೂ ಅವರ ಕುಟುಂಬದ ಈ ನಿರ್ಧಾರವು ಅವರನ್ನು ಜನಮಾನಸದಲ್ಲಿ ಒಬ್ಬ ಜೀವಂತ ವ್ಯಕ್ತಿಯನ್ನಾಗಿಸಿದೆ. ಜೊತೆಗೆ ಅಂಗಾಂಗ ಪಡೆದವರ ಮನದಲ್ಲೂ ಒಂದು ಶಾಶ್ವತ ಸ್ಥಾನವನ್ನು ಪಡೆಯುವಂತೆ ಮಾಡಿದೆ.

ವಸಂತ ಕುಮಾರ್ ಮಲ್ಲಾಪುರ, ದಾವಣಗೆರೆ

ಶುಲ್ಕ ಗೊಂದಲ: ಅನಗತ್ಯ ಗುದ್ದಾಟ

ಖಾಸಗಿ ಶಾಲಾ ಆಡಳಿತ ಮಂಡಳಿಗಳು, ಸರ್ಕಾರ ಹಾಗೂ ಪೋಷಕರ ನಡುವಿನ ಶುಲ್ಕ ಗೊಂದಲದ ಗುದ್ದಾಟದಲ್ಲಿ ಶಿಕ್ಷಕರು ಬಡವಾಗುತ್ತಿದ್ದಾರೆಯೇ ಎಂಬ ಪ್ರಶ್ನೆ ಮೂಡುತ್ತಿದೆ. ಕೊರೊನಾ ಕಾರಣದಿಂದ ಬಹುತೇಕ ಖಾಸಗಿ ಶಾಲೆಗಳು ಶಿಕ್ಷಕರ ಸಂಖ್ಯೆಯನ್ನು ಶೇ 50ಕ್ಕಿಂತ ಕಡಿಮೆ ಮಾಡಿರುವುದಲ್ಲದೆ, ಸಂಬಳದಲ್ಲೂ ಕಡಿತ ಮಾಡಿವೆ.

ಶಾಲೆಗೆ ಉತ್ತಮ ಫಲಿತಾಂಶ ದೊರಕಿಸಿಕೊಡಲು ಶ್ರಮಿಸುವ ಶಿಕ್ಷಕರ ಬಗ್ಗೆ ಯಾರೂ ಯೋಚಿಸುತ್ತಿಲ್ಲ. ಇಲ್ಲಿ ಸರ್ಕಾರವು ಖಾಸಗಿ ಶಾಲೆಗಳ ಶುಲ್ಕದ ವಿಚಾರದಲ್ಲಿ ಮಧ್ಯ ಪ್ರವೇಶಿಸುವುದರ ಬದಲು, ಆಯಾ ಶಾಲಾ ಸಿಬ್ಬಂದಿಗೆ ಕಾಲಕಾಲಕ್ಕೆ ಸಂಬಳ ಸಿಗುವಂತೆ ಮಾಡಲಿ. ಅವರ ಆರೋಗ್ಯದ ಬಗೆಗೆ ಕಾಳಜಿ ವಹಿಸಲಿ. ಯಾರಾದರೂ ಅಕಾಲಿಕವಾಗಿ ಮರಣ ಹೊಂದಿದರೆ ಅವರ ಮಕ್ಕಳ ಭವಿಷ್ಯದ ಶಿಕ್ಷಣಕ್ಕೆ ನೆರವಾಗುವ ರೀತಿಯಲ್ಲಿ ಮಾನದಂಡಗಳನ್ನು ರೂಪಿಸಿ ಕಡ್ಡಾಯವಾಗಿ ಪಾಲಿಸುವಂತೆ ಆದೇಶಿಸಲಿ. ಆಗ ಬಡಪಾಯಿ ಶಿಕ್ಷಕರನ್ನು ನಂಬಿರುವ ಕುಟುಂಬಗಳಿಗೆ ಆಸರೆಯಾದೀತು. ಅದು ಬಿಟ್ಟು, ಬಹುತೇಕ ಉಳ್ಳವರೇ ತಮ್ಮ ಮಕ್ಕಳನ್ನು ಸೇರಿಸುವ ಶಾಲೆಗಳ ಶುಲ್ಕದ ಬಗ್ಗೆ ಅನಗತ್ಯ ಗುದ್ದಾಟ ಬೇಡ.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಸಂಚಾರ ನಿಯಮ ಪಾಲನೆ ಆದ್ಯತೆಯಾಗಲಿ

ನಟ 'ಸಂಚಾರಿ' ವಿಜಯ್ ತಮ್ಮ ಗೆಳೆಯನೊಂದಿಗೆ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುತ್ತಿದ್ದಾಗ ಅಪಘಾತ ಸಂಭವಿಸಿ ಇಹಲೋಕವನ್ನು ತ್ಯಜಿಸಿದ್ದಾರೆ. ಇಬ್ಬರೂ ಸವಾರರು ಹೆಲ್ಮೆಟ್ ಧರಿಸದೆ ಇದ್ದುದೇ ಈ ದುರಂತಕ್ಕೆ ಕಾರಣ ಎಂದು ಹೇಳಲಾಗಿದೆ. ಸಮಾಜಕ್ಕೆ ಮಾದರಿಯಾಗಬೇಕಾದ ಇಂತಹ ಪ್ರಸಿದ್ಧ ವ್ಯಕ್ತಿಯೇ ಈ ರೀತಿ ಹೆಲ್ಮೆಟ್ ಧರಿಸದೆ ಕರ್ಫ್ಯೂ ಸಮಯದಲ್ಲಿ ರಸ್ತೆಯಲ್ಲಿ ಅಡ್ಡಾಡುವ ಮೂಲಕ ಕಾನೂನು ಉಲ್ಲಂಘನೆ ಮಾಡಿರುವುದು ಸರಿಯಲ್ಲ.

ಸಾರ್ವಜನಿಕ ಜೀವನದಲ್ಲಿ ಇರುವವರು ಮಾದರಿಯಾಗಿ ಬದುಕಿ ಬೇರೆಯವರಿಗೆ ಪ್ರೇರಣೆಯಾಗಬೇಕು. ಇನ್ನಾದರೂ ನಾಗರಿಕರು ಸಂಚಾರ ನಿಯಮಗಳನ್ನು ಗೌರವಿಸಿ ಅದರಂತೆ ನಡೆದು ತಮ್ಮ ಜೀವವನ್ನು ಕಾಪಾಡಿಕೊಳ್ಳಲಿ. ಪ್ರಾಣಕ್ಕಿಂತ ಯಾವುದೂ ಹೆಚ್ಚಲ್ಲ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಕಾಣೆಯಾಗಿದೆ ಆಡಳಿತ ನುಡಿ

ಕೋವಿಡ್ ಅಥವಾ ಇನ್ಯಾವುದೇ ವಿಷಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಮಂದಿಗೆ ತಲುಪಿಸಲು ಆಡಳಿತಾರೂಢರು ಆಗಾಗ ಸುತ್ತೋಲೆಗಳನ್ನು ಹೊರಡಿಸುತ್ತಾರೆ. ಆದರೆ ಅವೆಲ್ಲವೂ ಮಂದಿಗೆ ತಲುಪಿಸುವ ಸಲುವಾಗಿ ಹೊರಡಿಸುವ ಸುತ್ತೋಲೆಗಳಾದರೆ ಅವು ಮಂದಿಯ ನುಡಿಯಲ್ಲಿ ಇರುವುದೇ ಸರಿ, ಅಲ್ಲವೇ? ಆದರೆ, ಅವು ಬಹುತೇಕ ಇಂಗ್ಲಿಷ್‌ನಲ್ಲಿಯೇ ಇರುತ್ತವೆ. ಆಡಳಿತದಲ್ಲಿ ಕನ್ನಡ ಇರಬೇಕೆಂದು ಹಲವು ಸಲ ಸಾರಿದರೂ ಅಂತಹ ಮಾತುಗಳಿಗೆ ಯಾವ ಬೆಲೆಯೂ ಇಲ್ಲ ಎನಿಸುತ್ತದೆ. ನವೆಂಬರ್‌ನಲ್ಲಷ್ಟೇ ನಾಡುನುಡಿ ನೆನೆದರೆ ಸಾಲದು, ಇಡೀ ವರ್ಷ ಕನ್ನಡದ ಕುರಿತು ಕಳಕಳಿ ಕಾಣಬೇಕು. ಇಲ್ಲದಿದ್ದರೆ ಸರ್ಕಾರದ ಮಾತು, ನಡೆಗಳಿಗೆ ಬೆಲೆ ದೊರೆಯುವುದಿಲ್ಲ.

ವಿವೇಕ್ ಶಂಕರ್, ಬೆಂಗಳೂರು

ಕೋವಿಡ್ ಪರಿಹಾರ: ತರತಮ ಸಲ್ಲ

ಕುಟುಂಬವನ್ನು ಆರ್ಥಿಕವಾಗಿ ಸಲಹುತ್ತಿದ್ದ ವ್ಯಕ್ತಿ ಕೋವಿಡ್‌ನಿಂದ ಮೃತಪಟ್ಟಿದ್ದರೆ ಅವಲಂಬಿತರಿಗೆ ತಲಾ ₹ 1 ಲಕ್ಷ ಪರಿಹಾರ ನೀಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದೆ (ಪ್ರ.ವಾ., ಜೂನ್ 15). ಇದು ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಕ್ಕೆ ಮಾತ್ರ ಅನ್ವಯವಾಗಲಿದ್ದು, ಇದಕ್ಕೆ ಅಂದಾಜು ₹ 300 ಕೋಟಿ ಬೇಕಾಗಬಹುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಇದು ಅತ್ಯಂತ ಶ್ಲಾಘನೀಯ ಕಾರ್ಯ.

ಆರೋಗ್ಯ ಇಲಾಖೆ ಲೆಕ್ಕದ ಪ್ರಕಾರ, ಜೂನ್ 14ರವರೆಗೆ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 33,033. ಇವರಲ್ಲಿ ಎಷ್ಟು ಜನ ಬಿಪಿಎಲ್ ಕಾರ್ಡ್ ಹೊಂದಿದ್ದರು? ಒಂದೇ ಕುಟುಂಬದಲ್ಲಿ ಮೂರ್ನಾಲ್ಕು ಜನ ಮರಣ ಹೊಂದಿದವರು ಇದ್ದಾರಲ್ಲವೇ? ಈ ಮೃತರಲ್ಲಿ ಪರಿಹಾರ ಪಡೆಯಲು ಆಗದಂತಹ ಬಹಳಷ್ಟು ಮಕ್ಕಳು, ವಯೋವೃದ್ಧರು, ನಿರುದ್ಯೋಗಿ ಯುವಕರು ಕೂಡಾ ಇದ್ದರಲ್ಲವೇ? ಇವರಾರಿಗೂ ಈ ಪರಿಹಾರ ಸಿಗಲಾರದು. ಆದ್ದರಿಂದ ಈ ಯೋಜನೆಗೆ ₹ 300 ಕೋಟಿಯಷ್ಟು ಹಣದ ಅವಶ್ಯಕತೆ ಇಲ್ಲ. ₹ 150 ಕೋಟಿಯಿಂದ 200 ಕೋಟಿ ಆಗಬಹುದು.

ಆದರೆ, ನಿಜವಾಗಿಯೂ ಕೋವಿಡ್ ಉತ್ತುಂಗದ ಸ್ಥಿತಿಯಲ್ಲಿ ಇದ್ದಾಗ ಬೆಡ್ ಮತ್ತು ಆಮ್ಲಜನಕ ಸಿಗದೆ ಬಹಳಷ್ಟು ಜನರು ಮನೆಯಲ್ಲಿ, ಆಸ್ಪತ್ರೆಯ ಕಾರಿಡಾರ್‌ಗಳಲ್ಲಿ, ಆಂಬುಲೆನ್ಸ್‌ಗಳಲ್ಲಿ, ರಸ್ತೆಗಳಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಈ ಸಾವುಗಳು ಕೋವಿಡ್‌ನಿಂದ ಆದವು ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ. ಯಾಕೆಂದರೆ ಇವರೆಲ್ಲಾ ಕೋವಿಡ್ ಪರೀಕ್ಷೆ ಮಾಡುವ ಮೊದಲೇ ಅಥವಾ ಫಲಿತಾಂಶ ಬರುವ ಮೊದಲೇ ಹಾಗೂ ಫಲಿತಾಂಶ ನೆಗೆಟಿವ್ ಬಂದು, ಉಸಿರಾಟದ ತೊಂದರೆಯಿಂದ ಜೀವ ತೆತ್ತಿದ್ದಾರೆ. ಇಂತಹವರಿಗೆ ಈ ಪರಿಹಾರ ಸಿಗಲಾರದು. ಕೋವಿಡ್‌ನಿಂದ ಸತ್ತವರ ಅಧಿಕೃತ ಲೆಕ್ಕಕ್ಕಿಂತ ದುಪ್ಪಟ್ಟು ಜನ ಈ ಮಹಾಮಾರಿಯಿಂದ ಸತ್ತಿದ್ದಾರೆ. ಅಂತಹ ಎಲ್ಲಾ ಬಡ ಕುಟುಂಬಗಳಿಗೆ ಪರಿಹಾರ ಸಿಗಬೇಕು. ಈ ದಿಸೆಯಲ್ಲಿ ಸ್ಥಳೀಯ ಜನಪ್ರತಿನಿಧಿಗಳು ಆಸಕ್ತಿ ವಹಿಸಬೇಕು. ಸರ್ಕಾರ ಈ ಕುರಿತು ಮತ್ತೊಮ್ಮೆ ಪರಾಮರ್ಶೆ ನಡೆಸಲಿ.


ವಿ.ತಿಪ್ಪೇಸ್ವಾಮಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷ ಫೆಬ್ರುವರಿ-ಮಾರ್ಚ್‌ನಲ್ಲಿ ಚುನಾವಣೆ ನಡೆಯಲಿದೆ. ಮತ್ತೆ ಅಧಿಕಾರಕ್ಕೆ ಬರುವ ಆತ್ಮವಿಶ್ವಾಸ ಆಡಳಿತಾರೂಢ ಬಿಜೆಪಿಯಲ್ಲಿ ಕಾಣಿಸುತ್ತಿಲ್ಲ. ಬಿಜೆಪಿಯನ್ನು ಅಧಿಕಾರದಿಂದ ಇಳಿಸುತ್ತೇವೆ ಎಂಬ ಉತ್ಸಾಹ ವಿರೋಧ ಪಕ್ಷಗಳಲ್ಲಿಯೂ ಕಾಣಿಸುತ್ತಿಲ್ಲ. ಪಂಚಾಯಿತಿಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅತಿಹೆಚ್ಚು ಸ್ಥಾನ ಗೆದ್ದಿರುವುದನ್ನೇ ಎಸ್‌ಪಿ ನೆಚ್ಚಿಕೊಂಡಿದೆ. ಬಿಎಸ್‌ಪಿ, ಕಾಂಗ್ರೆಸ್‌ನ ಸ್ಥಿತಿ ಹೇಳಿಕೊಳ್ಳುವಂತೇನೂ ಇಲ್ಲ

ಚುನಾವಣೆ ಹೊಸ್ತಿಲಲ್ಲೂ ಪಕ್ಷಗಳು ದುರ್ಬಲ





ಬಿಜೆಪಿ ಹಾದಿ ಹೂವಿನದ್ದಲ್ಲ

ಉತ್ತರ ಪ್ರದೇಶ ವಿಧಾನಸಭೆಗೆ 2017ರಲ್ಲಿ ನಡೆದಿದ್ದ ಚುನಾವಣೆಯಲ್ಲಿ, 403 ಸ್ಥಾನಗಳಲ್ಲಿ ಬಿಜೆಪಿ 312 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಈ ಚುನಾವಣೆಯನ್ನು ಎದುರಿಸುವಲ್ಲಿ ಬಿಜೆಪಿಯ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿರಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಬಿಜೆಪಿ ನಾಯಕ ಅಮಿತ್ ಶಾ ಮತ್ತು ಕೆಲವೇ ತಾರಾ ಪ್ರಚಾರಕರು ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದ್ದರು. ನೋಟುರದ್ದತಿಯ ನಂತರ ಬಿಜೆಪಿ ಎದುರಿಸಿದ ಮೊದಲ ಚುನಾವಣೆ ಅದಾಗಿತ್ತು. ಕೇಂದ್ರ ಸರ್ಕಾರದ ಈ ಕ್ರಮದ ವಿರುದ್ಧ ಭಾರಿ ಆಕ್ರೋಶವಿದ್ದರೂ, ಮೋದಿ ಅವರ ಪ್ರಭಾವಳಿಯಲ್ಲೇ ಚುನಾವಣೆ ಎದುರಿಸಲಾಗಿತ್ತು ಮತ್ತು ಬಿಜೆಪಿ ಭಾರಿ ಬಹುಮತದೊಂದಿಗೆ ಸರ್ಕಾರ ರಚಿಸಿತು. ಆದರೆ, 2017ರಲ್ಲಿ ಇದ್ದಷ್ಟು ಪ್ರಬಲವಾಗಿ ಬಿಜೆಪಿ ಉಳಿದಿಲ್ಲ ಎಂಬುದು ಈಗ ಜಗಜ್ಜಾಹೀರಾಗಿದೆ.

ಅವರೆಗೆ ಬಿಜೆಪಿಯ ಫೈರ್‌ಬ್ರ್ಯಾಂಡ್ ನಾಯಕರಾಗಿ ಗುರುತಿಸಿಕೊಂಡಿದ್ದ ಯೋಗಿ ಆದಿತ್ಯನಾಥ ಅವರನ್ನು ಮುಖ್ಯಮಂತ್ರಿಯಾಗಿ ಘೋಷಿಸಿದ್ದು ಆಶ್ಚರ್ಯಕರ ಬೆಳವಣಿಗೆಯಾಗಿತ್ತು. ಉಗ್ರ ಹಿಂದುತ್ವದ ಪ್ರತಿಪಾದಕರಾಗಿದ್ದ ಯೋಗಿ ಅವರ ನೀತಿಗಳಿಗೆ ಎಲ್ಲಿಲ್ಲದ ಮನ್ನಣೆ ದೊರೆಯಿತು. ಇದನ್ನು ಬೇರೆ ರಾಜ್ಯಗಳ ಚುನಾವಣೆಯಲ್ಲೂ ಬಳಸಿಕೊಳ್ಳಲು ಬಿಜೆಪಿ ಮುಂದಾಯಿತು. ಆನಂತರ ನಡೆದ 10ಕ್ಕೂ ಹೆಚ್ಚು ರಾಜ್ಯಗಳ ಚುನಾವಣೆಯಲ್ಲಿ ಯೋಗಿ ಅವರು ತಾರಾ ಪ್ರಚಾರಕರಾಗಿ ಪ್ರಚಾರ ನಡೆಸಿದ್ದಾರೆ. ಯೋಗಿ ಅವರು ಮೋದಿ ಅವರ ಉತ್ತರಾಧಿಕಾರಿ ಎನ್ನುವಷ್ಟರಮಟ್ಟಿಗೆ ಅವರ ಪ್ರಭಾವಳಿ ಹೆಚ್ಚಾಯಿತು.

ಯೋಗಿ ಅವರ ಆಡಳಿತದಲ್ಲಿನ ನ್ಯೂನತೆ, ಪಕ್ಷದ ಇತರ ನಾಯಕರ ಕಡೆಗಣನೆ, ಠಾಕೂರರನ್ನು ಓಲೈಸುವ ನೀತಿಗಳಿಂದಾಗಿ ಈ ಪ್ರಭಾವಳಿ ಮುಕ್ಕಾಗಿದೆ; ಕೋವಿಡ್ ಎರಡನೇ ಅಲೆ ನಿರ್ವಹಣೆಯಲ್ಲಿ ಯೋಗಿ ಅವರ ವೈಫಲ್ಯ ಬಹಿರಂಗವಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಅಧಿಕಾರಕ್ಕೆ ಬಂದ ದಿನದಿಂದಲೂ ಯೋಗಿ ಅವರು ತಮ್ಮ ಆಪ್ತವಲಯದಲ್ಲಿ ಠಾಕೂರರಿಗೆ ಮಾತ್ರ ಪ್ರವೇಶ ನೀಡಿದ್ದಾರೆ. ಬೇರೆ ಸಮುದಾಯಕ್ಕೆ ಸೇರಿದ ಬಿಜೆಪಿ ಮತ್ತು ಎನ್‌ಡಿಎ ನಾಯಕರನ್ನು ಕಡೆಗಣಿಸಿದ್ದಾರೆ. ಅವರ ಪ್ರಭಾವಳಿ ಜೋರಾಗಿ ಇದ್ದ ಕಾರಣ, ಈ ಕಡೆಗಣನೆ ಮುನ್ನೆಲೆಗೆ ಬರಲಿಲ್ಲ. ಕಡೆಗಣನೆ ಕಾರಣಕ್ಕೇ ಬ್ರಾಹ್ಮಣರೂ ಬಿಜೆಪಿಯಿಂದ ದೂರ ಸರಿದಿದ್ದಾರೆ. ಇದರ ಪರಿಣಾಮವಾಗಿ ದಲಿತ ಸಮುದಾಯದ ಎನ್‌ಡಿಎ ಮಿತ್ರಪಕ್ಷಗಳಾದ ನಿಶಾದ್, ಅಪ್ನಾದಳ ಮತ್ತು ಎಸ್‌ಬಿಎಸ್‌ಪಿ ಬಿಜೆಪಿಯಿಂದ ದೂರಸರಿದಿವೆ. ಈ ಮೂಲಕ ದಲಿತರ ನಂಬಿಕೆಯನ್ನು ಬಿಜೆಪಿ ಕಳೆದುಕೊಂಡಿದೆ. ಇದು ಪಂಚಾಯಿತಿ ಚುನಾವಣೆಯಲ್ಲೂ ಪ್ರತಿಫಲಿಸಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಯೋಗಿ ಅವರು ತಮ್ಮ ಆಡಳಿತದ ಉದ್ದಕ್ಕೂ ಹಿಂದುತ್ವಕ್ಕೆ ಜೋತು ಬಿದ್ದಿದ್ದಾರೆ. ಹಿಂದಿನ ಚುನಾವಣೆಯಲ್ಲಿ ಬಿಜೆಪಿಯ ಹಿಂದುತ್ವ ಮತ್ತು ಅಭಿವೃದ್ಧಿಯ ಮಂತ್ರಕ್ಕೆ ಮಾರುಹೋಗಿ ಮತನೀಡಿದ್ದ ಸಮುದಾಯಗಳ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ಯೋಗಿ ಅವರ ಸರ್ಕಾರ ವಿಫಲವಾಗಿದೆ. ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ವಲಸೆ ಕಾರ್ಮಿಕರಿಗೆ ಉದ್ಯೋಗ ಒದಗಿಸಿಕೊಡುವಲ್ಲಿ ಸರ್ಕಾರ ವಿಫಲವಾಗಿದೆ. ಕೋವಿಡ್ ಪರಿಹಾರ ಯೋಜನೆಗಳೂ ಜನರನ್ನು ಸಮರ್ಪಕವಾಗಿ ತಲುಪಿಲ್ಲ. ಎರಡನೇ ಅಲೆ ನಿರ್ವಹಣೆಯಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಬಿಜೆಪಿಯ ನಾಯಕರೇ ಆರೋಪಿಸಿದ್ದಾರೆ. ಅಧಿಕಾರಕ್ಕೆ ಬರುವ ಮುನ್ನ ನೀಡಿದ್ದ ಆಶ್ವಾಸನೆ ಮತ್ತು ಭರವಸೆಗಳನ್ನು ಈಡೇರಿಸದೇ ಇರುವ ಕಾರಣಕ್ಕೆ ಸರ್ಕಾರದ ಜನಪ್ರಿಯತೆ ಕುಗ್ಗಿದೆ. ಪಕ್ಷದ ಶಾಸಕರು ಮತ್ತು ಸಚಿವರು ಜನರ ಮುಂದೆ ಹೋಗಲು ಹಿಂದೇಟು ಹಾಕುತ್ತಿದ್ದಾರೆ.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ಕೃಷಿ ಸುಧಾರಣಾ ಕಾಯ್ದೆಗಳ ವಿರುದ್ಧ ಉತ್ತರ ಪ್ರದೇಶದಲ್ಲಿ ಭಾರಿ ಆಂದೋಲನ ನಡೆಯುತ್ತಿದೆ. ಈ ಕಾಯ್ದೆಗಳ ವಿರುದ್ಧ ಪಂಜಾಬ್ ಮತ್ತು ಹರಿಯಾಣದಲ್ಲಿ ಪ್ರತಿಭಟನೆ ಆರಂಭವಾಗಿದ್ದರೂ, ಇಂದಿಗೂ ಪ್ರತಿಭಟನೆಯ ಕಾವನ್ನು ಉಳಿಸಿಕೊಂಡು ಹೋರಾಟ ನಡೆಸುತ್ತಿರುವುದು ಉತ್ತರ ಪ್ರದೇಶದ ರೈತರು. ಈ ಚುನಾವಣೆಯಲ್ಲಿ ರೈತ ಸಮುದಾಯವು ಬಿಜೆಪಿ ವಿರೋಧಿಗಳಿಗೆ ಮತಹಾಕುವ ಸಾಧ್ಯತೆಯೇ ಹೆಚ್ಚು.

ಈ ಎಲ್ಲಾ ಬೆಳವಣಿಗೆಗಳೂ ಬಿಜೆಪಿಯ ಬಲವನ್ನು ಕುಗ್ಗಿಸಿವೆ. ಹೀಗಾಗಿ, 2017ರಲ್ಲಿ ಹಿಂದುತ್ವ ಮತ್ತು ಅಭಿವೃದ್ಧಿಯ ಮಂತ್ರವನ್ನು ಪಠಿಸಿ ಚುನಾವಣೆ ಎದುರಿಸಿದ್ದ ಬಿಜೆಪಿಗೆ 2022ರ ಚುನಾವಣೆಯ ಹಾದಿ ಹೂವಿನದ್ದಲ್ಲ.

ವೈರತ್ವದ ಹಾದಿಗೆ ಮರಳಿದ ಎಸ್‌ಪಿ- ಬಿಎಸ್‌ಪಿ

ಬದ್ಧ ವೈರಿಗಳಾಗಿದ್ದ ಸಮಾಜವಾದಿ ಪಕ್ಷ (ಎಸ್‌ಪಿ) ಮತ್ತು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಬಿಜೆಪಿಯ ಅಲೆಯು ರಾಜ್ಯದಲ್ಲಿ ತಮ್ಮ ಭವಿಷ್ಯಕ್ಕೆ ಮಾರಕವಾಗಬಹುದು ಎಂಬುದನ್ನು ಮನಗಂಡು ಕಳೆದ ಲೋಕಸಭಾ ಚುನಾವಣೆಯಲ್ಲಿ ಕೈಜೋಡಿಸಿದ್ದವು.

ಉತ್ತರ ಪ್ರದೇಶದ ರಾಜಕೀಯದಲ್ಲಿ ಅದು ಅನಿರೀಕ್ಷಿತ ಬೆಳವಣಿಗೆಯಾಗಿತ್ತು. ಬಿಜೆಪಿಯು ಇದನ್ನು 'ಬುವಾ- ಭತೀಜಾ' (ಅತ್ತೆ- ಸೋದರಳಿಯ) ಮೈತ್ರಿ ಎಂದು ಲೇವಡಿ ಮಾಡಿತು. ಅದೇನೇ ಇದ್ದರೂ ಮೈತ್ರಿಯಿಂದ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಹೆಚ್ಚಿನ ಲಾಭವಾಗಲಿಲ್ಲ. ಸಂಖ್ಯೆಯ ದೃಷ್ಟಿಯಿಂದ ಸಮಾಜವಾದಿ ಪಕ್ಷಕ್ಕೆ ಸ್ವಲ್ಪ ಅನುಕೂಲವಾದಂತೆ ಕಂಡರೂ, ಬಿಎಸ್‌ಪಿಯಂತೂ ಅಸ್ತಿತ್ವವನ್ನೇ ಕಳೆದುಕೊಳ್ಳುವ ಹಂತಕ್ಕೆ ಬಂತು.

2020ರಲ್ಲಿ ರಾಜ್ಯಸಭಾ ಚುನಾವಣೆ ನಡೆದ ಸಂದರ್ಭದಲ್ಲಿ ಈ ಮೈತ್ರಿಯಲ್ಲಿ ಒಡಕು ಕಾಣಿಸಿತು. ಪರಿಣಾಮ, ಮಾಯಾವತಿ ಅವರು ತಮ್ಮ ಪಕ್ಷದಿಂದ ಏಳು ಮಂದಿ ಶಾಸಕರನ್ನು ಅಮಾನತುಗೊಳಿಸಿದರು. ಅಮಾನತು ಪರ್ವ ಆ ನಂತರವೂ ಮುಂದುವರಿಯಿತು. ಕಳೆದ 18 ತಿಂಗಳಲ್ಲಿ ಬಿಎಸ್‌ಪಿಯಿಂದ ಅಮಾನತುಗೊಂಡ ಶಾಸಕರ ಸಂಖ್ಯೆ 11ಕ್ಕೆ ತಲುಪಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ದುರ್ಬಲಗೊಂಡ ನಂತರ, ಬಹುಸಂಖ್ಯೆಯಲ್ಲಿರುವ ಯಾದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಇಲ್ಲಿ ಎರಡೂ ಪಕ್ಷಗಳ ಭವಿಷ್ಯವನ್ನು ನಿರ್ಧರಿಸುತ್ತಾ ಬಂದಿದ್ದಾರೆ. ಮುಸ್ಲಿಮರು ಸಹ ಪ್ರಮುಖ ಪಾತ್ರ ವಹಿಸಿದ್ದಾರೆ. ಅಧಿಕಾರ ಹಿಡಿಯಲು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮತಗಳು ಸಾಕಾಗುವುದಿಲ್ಲ ಎಂದಾಗ, ಮಾಯಾವತಿ ಅವರು ತಮ್ಮ ನೀತಿಯನ್ನು ಸ್ವಲ್ಪ ಸಡಿಲಿಸಿ, ಬ್ರಾಹ್ಮಣ ಸಮುದಾಯವನ್ನು ಓಲೈಸಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದ್ದರು. ಆದರೆ ಕಳೆದ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಮೋದಿ ಅಲೆ ಹಾಗೂ ಹಿಂದುತ್ವದ ರಾಜಕಾರಣವು ಈ ಎರಡೂ ಪಕ್ಷಗಳನ್ನು ಕಂಗೆಡಿಸಿವೆ.


ಪಕ್ಷದೊಳಗಿನ ಅಂತಃಕಲಹ ಎರಡೂ ಪಕ್ಷಗಳ ಹಿನ್ನಡೆಗೆ ಕಾರಣವಾಗಿದೆ. ಅಖಿಲೇಶ್ ಹಾಗೂ ಅವರ ತಂದೆ ಮುಲಾಯಂ ಸಿಂಗ್ ಯಾದವ್ ಅವರ ಮಧ್ಯೆಯೇ ಭಿನ್ನಾಭಿಪ್ರಾಯ ಸೃಷ್ಟಿಯಾದದ್ದು, ಮಾಯಾವತಿ ಅವರ ಸೂಚನೆಗಳನ್ನು ಅವರ ಪಕ್ಷದ ಶಾಸಕರೇ ಉಲ್ಲಂಘಿಸಿದ್ದು ಮುಂತಾದ ಬೆಳವಣಿಗೆಗಳು ನಡೆದಿವೆ.

ಮೈತ್ರಿ ಮುಂದುವರಿಸಿದರೆ ಪಕ್ಷಕ್ಕೆ ಇನ್ನಷ್ಟು ಹಾನಿಯಾಗಬಹುದೆಂದು ಭಾವಿಸಿರುವ ಮಾಯಾವತಿ, ಮುಂದಿನ ಚುನಾವಣೆಗಳಲ್ಲಿ ಯಾವ ಪಕ್ಷದ ಜತೆಗೂ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಘೋಷಿಸಿದ್ದಾರೆ. ಪ್ರಸಕ್ತ, ಈ ಪಕ್ಷಗಳು ತಮ್ಮ ಮೂರು ದಶಕಗಳ ಹಿಂದಿನ 'ಬದ್ಧ ವೈರತ್ವ'ದ ಸ್ಥಿತಿಗೆ ಮರಳಿವೆ.

ಈ ನಡುವೆ, 2020ರಲ್ಲಿ ಬಿಎಸ್‌ಪಿಯಿಂದ ಉಚ್ಚಾಟನೆಗೊಂಡಿದ್ದ ಹಲವು ಶಾಸಕರು ಅಖಿಲೇಶ್ ಯಾದವ್ ಅವರನ್ನು ಮಂಗಳವಾರ ಭೇಟಿಮಾಡಿರುವ ಸುದ್ದಿಯೂ ಹೊರಬಿದ್ದಿದೆ. ಅವರಲ್ಲಿ ಒಂದಿಬ್ಬರು, 'ನಾವು ಎಸ್‌ಪಿ ಸೇರ್ಪಡೆಯಾಗಲು ಮಾನಸಿಕವಾಗಿ ಸಿದ್ಧರಾಗಿದ್ದೇವೆ' ಎಂದಿದ್ದಾರೆ. ಕೆಲವರು ಬಿಜೆಪಿ ಕಡೆಗೆ ವಾಲಿದ್ದಾರೆ.

ಈಚೆಗೆ ನಡೆದ ಪಂಚಾಯಿತಿ ಚುನಾವಣೆಗಳಲ್ಲೂ ಬಿಎಸ್‌ಪಿಯ ಸಾಧನೆ ಕಳಪೆಯಾಗಿತ್ತು. ಆದರೆ ಎಸ್‌ಪಿ ನಿರೀಕ್ಷೆಗಿಂತ ಉತ್ತಮ ಪ್ರದರ್ಶನ ತೋರಿದೆ. ಇದು ಎಸ್‌ಪಿ ನಾಯಕರಲ್ಲಿ ಹೊಸ ಉತ್ಸಾಹ ತುಂಬಿದೆ. ಬಿಎಸ್‌ಪಿಯು ಬೇರೆ ರಾಜ್ಯಗಳಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದರೂ ಎಲ್ಲೂ ಹೇಳಿಕೊಳ್ಳುವಂಥ ಸಾಧನೆ ಮಾಡಿಲ್ಲ. ಆದ್ದರಿಂದ ಉತ್ತರ ಪ್ರದೇಶದಲ್ಲಿ ಮಾತ್ರ ನಮ್ಮ ಭವಿಷ್ಯ ಅಡಗಿದೆ ಎಂಬುದನ್ನು ಎರಡೂ ಪಕ್ಷಗಳು ಮನಗಾಣಬೇಕು ಎಂದು ವಿಶ್ಲೇಷಕರು ಹೇಳುತ್ತಾರೆ.

ರಾಜ್ಯದ ರಾಜಕೀಯ ಇತಿಹಾಸವನ್ನು ನೋಡಿದರೆ ಅಧಿಕಾರವು ಬದಲಾಗುತ್ತಾ ಬಂದಿರುವುದು ಕಾಣುತ್ತದೆ. ಆದ್ದರಿಂದ 2022ರಲ್ಲಿ ಬಿಜೆಪಿಯನ್ನು ನಾವು ಸೋಲಿಸಬಲ್ಲೆವು ಎಂಬ ವಿಶ್ವಾಸ ಎರಡೂ ಪಕ್ಷಗಳಲ್ಲಿ ಬಲವಾಗಿದ್ದಂತೆ ಕಾಣಿಸುತ್ತಿದೆ. ಆದರೆ, ಅದು ಅಷ್ಟು ಸುಲಭವಲ್ಲ ಎಂದು ರಾಜಕೀಯ ಪಂಡಿತರು ಹೇಳುತ್ತಿದ್ದಾರೆ.





ಕಾಂಗ್ರೆಸ್‌ಗೆ ಪುಟಿದೇಳುವ ಆಸೆ

ಉತ್ತರ ಪ್ರದೇಶದಲ್ಲಿ ಈಗಾಗಲೇ ತನ್ನ ನೆಲೆಯನ್ನು ಕಳೆದುಕೊಂಡಿರುವ ಕಾಂಗ್ರೆಸ್, ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯ ಮೇಲೆ ಕಣ್ಣಿಟ್ಟಿದೆ. ಹಿಂದಿನ ಬಾರಿ ಸಮಾಜವಾದಿ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡು ಕೇವಲ ಏಳು ಸ್ಥಾನಗಳಿಗೆ ಪಕ್ಷ ತೃಪ್ತಿಪಟ್ಟುಕೊಂಡಿತ್ತು. ಈ ಬಾರಿ ಹುಮ್ಮಸ್ಸಿನಿಂದ ಇದ್ದ ಪಕ್ಷಕ್ಕೆ ಆರಂಭದಲ್ಲೇ ಪೆಟ್ಟು ಬಿದ್ದಿದೆ. ಪಕ್ಷದ ಪ್ರಮುಖ ನಾಯಕ ಜಿತಿನ್ ಪ್ರಸಾದ ಅವರ ದಿಢೀರ್ ನಿರ್ಗಮನ ಪಕ್ಷಕ್ಕೆ ಹೊಡೆತ ನೀಡಲಿದೆ ಎಂದು ವಿಶ್ಲೇಷಿಸಲಾಗಿದೆ.

ಬಿಎಸ್‌ಪಿ, ಕಾಂಗ್ರೆಸ್ ಜೊತೆ ಈ ಬಾರಿ ಮೈತ್ರಿ ಇಲ್ಲ ಎಂದು ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಘೋಷಿಸಿದ್ದಾರೆ. ಹೀಗಾಗಿ ಪ್ರಾದೇಶಿಕ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಳ್ಳಲು ಪಕ್ಷ ಮುಂದಾಗುವ ಸಾಧ್ಯತೆ ಇದೆ. ಚಂದ್ರಶೇಖರ ಆಜಾದ್ ಅವರ ಭೀಮ್ ಆರ್ಮಿ ಪಕ್ಷ, ಆಜಾದ್ ಸಮಾಜ್ ಪಾರ್ಟಿ ಜೊತೆಗೆ ಕಣಕ್ಕಿಳಿಯುವ ಸಾಧ್ಯತೆಯಿದೆ.

ಇತ್ತೀಚೆಗೆ ಮುಕ್ತಾಯವಾದ ಉತ್ತರ ಪ್ರದೇಶ ಪಂಚಾಯಿತಿ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರದರ್ಶನ ಉತ್ತಮವಾಗಿದೆ. 270 ಸ್ಥಾನಗಳಲ್ಲಿ ಗೆದ್ದಿರುವ ಕಾಂಗ್ರೆಸ್, 571 ಕ್ಷೇತ್ರಗಳಲ್ಲಿ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಇದರರ್ಥ ಉತ್ತರ ಪ್ರದೇಶದ ಜನರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಮೇಲೆ ವಿಶ್ವಾಸ ಇರಿಸಿದ್ದಾರೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ಹೇಳಿದ್ದಾರೆ.


ಪ್ರಾದೇಶಿಕ ಪಕ್ಷಗಳೇ ಆಸರೆ

ಉತ್ತರ ಪ್ರದೇಶದ ಎಲ್ಲ ರಾಜಕೀಯ ಪಕ್ಷಗಳು ಈ ಬಾರಿ ಸ್ಥಳೀಯ ಪಕ್ಷಗಳ ಜೊತೆ ಮೈತ್ರಿಗೆ ಮನಸ್ಸು ಮಾಡಿವೆ. ಕಾಂಗ್ರೆಸ್ ಹಾಗೂ ಬಿಎಸ್‌ಪಿ ಜೊತೆ ಮೈತ್ರಿ ಮಾಡಿಕೊಂಡು ಕೈಸುಟ್ಟುಕೊಂಡಿರುವ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್, ತಮ್ಮ ಚಿಕ್ಕಪ್ಪ ಶಿವಪಾಲ್ ಯಾದವ್ ಕಟ್ಟಿರುವ ಪ್ರಗತಿಶೀಲ ಸಮಾಜವಾದಿ ಪಕ್ಷದ ಜೊತೆ ಮೈತ್ರಿಯ ಸುಳಿವು ನೀಡಿದ್ದಾರೆ.

ಬಿಜೆಪಿಯು ಕಳೆದ ಚುನಾವಣೆಯಲ್ಲಿ ಅನುಪ್ರಿಯಾ ಪಟೇಲ್ ನೇತೃತ್ವದ ಅಪ್ನಾ ದಳ ಹಾಗೂ ಓಂ ಪ್ರಕಾಶ್ ರಾಜ್‌ಭರ್ ಅವರ ಸುಹೆಲ್‌ದೇವ್ ಭಾರತೀಯ ಸಮಾಜ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡಿತ್ತು. ನಿಷಾದ ಪಕ್ಷದ ಡಾ. ಸಂಜಯ್ ನಿಷಾದ ಅವರು ಬಿಜೆಪಿ ಜತೆ ಉತ್ತಮ ಸಂಬಂಧ ಇಟ್ಟುಕೊಂಡಿದ್ದಾರೆ.

ಆಮ್ ಆದ್ಮಿ ಪಕ್ಷವು ಇತ್ತೀಚೆಗೆ ನಡೆದ ಪಂಚಾಯಿತಿ ಚುನಾವಣೆಯಲ್ಲಿ 83 ಜಿಲ್ಲಾ ಪಂಚಾಯತ್, 300 ಗ್ರಾಮ ಪಂಚಾಯಿತಿ ಮತ್ತು 232 ವಲಯ ಅಭಿವೃದ್ಧಿ ಸಮಿತಿ ಸ್ಥಾನಗಳನ್ನು ಗೆದ್ದುಕೊಂಡಿದೆ.





ಬಾಂಬ್ ಸಂಗ್ರಹ ಹೆಚ್ಚಿಸಲು ಸಿದ್ಧತೆ

ಅಣ್ವಸ್ತ್ರ ಪೈಪೋಟಿ

ನವದೆಹಲಿ (ಪಿಟಿಐ): ಚೀನಾ, ಪಾಕಿಸ್ತಾನ ಮತ್ತು ಭಾರತ ಕ್ರಮವಾಗಿ 350, 165 ಮತ್ತು 156 ಅಣುಬಾಂಬ್‌ಗಳನ್ನು ಈ ವರ್ಷದ ಜನವರಿ ಹೊತ್ತಿಗೆ ಹೊಂದಿದ್ದವು. ಈ ಮೂರೂ ದೇಶಗಳು ತಮ್ಮ ಅಣ್ವಸ್ತ್ರ ಸಂಗ್ರಹವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ನಡೆಸುತ್ತಿವೆ ಎಂದು ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಸಿಪ್ರಿ) ಹೇಳಿದೆ.

'ಅಣ್ವಸ್ತ್ರಗಳನ್ನು ಆಧುನೀಕರಿಸುವ ಮತ್ತು ಸಂಖ್ಯೆಯನ್ನು ಹೆಚ್ಚಿಸುವ ಪ್ರಕ್ರಿಯೆಯನ್ನು ಚೀನಾ ಈಗಾಗಲೇ ಆರಂಭಿಸಿದೆ. ಭಾರತ ಮತ್ತು ಪಾಕಿಸ್ತಾನ ಕೂಡ ಇದೇ ಹಾದಿಯಲ್ಲಿವೆ' ಎಂದು ಸಿಪ್ರಿ ನಡೆಸಿದ ಅಧ್ಯಯನ ತಿಳಿಸಿದೆ.

ಅಣ್ವಸ್ತ್ರ ತಯಾರಿಸುವುದಕ್ಕಾಗಿ ಈ ಮೂರೂ ದೇಶಗಳು ಸಂಗ್ರಹಿಸಿ ಇರಿಸಿರುವ ಕಚ್ಚಾ ವಸ್ತುಗಳ ಬಗ್ಗೆಯೂ ಸಿಪ್ರಿ ವರದಿಯಲ್ಲಿ ಮಾಹಿತಿ ಇದೆ.

'ಅಣ್ವಸ್ತ್ರ ತಯಾರಿಸಲು ಯುರೇನಿಯಂ ಅಥವಾ ಪ್ಲುಟೋನಿಯಂ ಬಳಸುತ್ತಾರೆ. ಭಾರತ ಮತ್ತು ಇಸ್ರೇಲ್ ಪ್ಲುಟೋನಿಯಂ ಉತ್ಪಾದಿಸುತ್ತಿವೆ. ಪಾಕಿಸ್ತಾನವು ಮುಖ್ಯವಾಗಿ ಯುರೇನಿಯಂ ಉತ್ಪಾದಿಸುತ್ತಿದೆ. ಈಗ, ಪ್ಲುಟೋನಿಯಂ ಉತ್ಪಾದನೆಯ ಸಾಮರ್ಥ್ಯ ಹೆಚ್ಚಿಸಲು ಮುಂದಾಗಿದೆ' ಎಂದು ವರದಿಯಲ್ಲಿ ಹೇಳಲಾಗಿದೆ.

ಚೀನಾ, ಫ್ರಾನ್ಸ್, ರಷ್ಯಾ, ಬ್ರಿಟನ್ ಮತ್ತು ಅಮೆರಿಕದಲ್ಲಿ ಯುರೇನಿಯಂ ಮತ್ತು ಪ್ಲುಟೋನಿಯಂ ಎರಡನ್ನೂ ಉತ್ಪಾದಿಸಲಾಗುತ್ತಿದೆ. ಈ ದೇಶಗಳು ಅಣ್ವಸ್ತ್ರಕ್ಕೆ ಈ ಎರಡೂ ಕಚ್ಚಾವಸ್ತುಗಳನ್ನು ಬಳಸುತ್ತಿವೆ.

ಭಾರತ ಮತ್ತು ಪಾಕಿಸ್ತಾನದ ಸರ್ಕಾರಗಳು ಕ್ಷಿಪಣಿ ಪರೀಕ್ಷೆಗಳ ಬಗ್ಗೆ ಹೇಳಿಕೆಗಳನ್ನು ನೀಡಿವೆ. ಆದರೆ, ತಮ್ಮಲ್ಲಿರುವ ಅಣ್ವಸ್ತ್ರ ಸಂಗ್ರಹದ ಬಗ್ಗೆ ಯಾವುದೇ ಮಾಹಿತಿ ಬಹಿರಂಗಪಡಿಸಿಲ್ಲ.

ಜಗತ್ತಿನಲ್ಲಿ ಒಟ್ಟು 13,080 ಅಣ್ವಸ್ತ್ರಗಳಿವೆ ಎಂದು ಅಂದಾಜಿಸಲಾಗಿದೆ. ಇವುಗಳ ಪೈಕಿ ಸುಮಾರು 2,000 ಅಣ್ವಸ್ತ್ರಗಳನ್ನು ಕಾರ್ಯಾಚರಣೆಗೆ ಸನ್ನದ್ಧವಾದ ಸ್ಥಿತಿಯಲ್ಲಿಯೇ ಇರಿಸಲಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಭಾರತ, ಪಾಕ್, ಚೀನಾ ಸಂಬಂಧ: ಭಾರತ ಮತ್ತು ಚೀನಾದ ನಡುವೆ ಪೂರ್ವ ಲಡಾಖ್‌ನಲ್ಲಿ ಗಡಿ ಸಂಘರ್ಷ ನಡೆದು ಒಂದು ವರ್ಷ ಕಳೆದಿದೆ. ಈ ಸಂಘರ್ಷದ ಸಂದರ್ಭದಲ್ಲಿ 45 ವರ್ಷದಲ್ಲೇ ಮೊದಲ ಬಾರಿಗೆ ಎರಡೂ ಕಡೆ ಜೀವಹಾನಿಯೂ ಆಗಿತ್ತು. ಪ್ಯಾಂಗಾಂಗ್ ಸರೋವರ ಪ್ರದೇಶದಿಂದ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳುವ ವಿಚಾರದಲ್ಲಿಯೂ ದೊಡ್ಡ ಪ್ರಗತಿ ಆಗಿಲ್ಲ. ಸಂಘರ್ಷ ಇರುವ ಹಲವು ಪ್ರದೇಶಗಳ ಬಗೆಗಿನ ಮಾತುಕತೆಯೂ ಸ್ಥಗಿತಗೊಂಡಿದೆ.

ಭಾರತ ಮತ್ತು ಪಾಕಿಸ್ತಾನವು ಫೆಬ್ರುವರಿ 25ರಂದು ಜಂಟಿ ಹೇಳಿಕೆ ಪ್ರಕಟಿಸಿ ನಿಯಂತ್ರಣ ರೇಖೆಯುದ್ದಕ್ಕೂ ಕದನವಿರಾಮ ಘೋಷಿಸಿವೆ. ಎರಡೂ ದೇಶಗಳ ಸೇನಾ ಕಾರ್ಯಾಚರಣೆ ಮಹಾ ನಿರ್ದೇಶಕರ ನಡುವಣ ಮಾತುಕತೆ ಬಳಿಕ ಈ ನಿರ್ಧಾರಕ್ಕೆ ಬರಲಾಗಿದೆ.

ಆಯುಧ ಆಮದು

2016ರಿಂದ 2020ರ ಅವಧಿಯಲ್ಲಿ ಸೌದಿ ಅರೇಬಿಯಾ, ಭಾರತ, ಈಜಿಪ್ಟ್, ಆಸ್ಟ್ರೇಲಿಯಾ ಮತ್ತು ಚೀನಾ ಶಸ್ತ್ರಾಸ್ತ್ರಗಳನ್ನು ಅತಿ ಹೆಚ್ಚು ಆಮದು ಮಾಡಿಕೊಂಡಿವೆ. ಜಾಗತಿಕ ಶಸ್ತ್ರಾಸ್ತ್ರ ಆಮದಿನಲ್ಲಿ ಸೌದಿ ಅರೇಬಿಯಾದ ಪಾಲು ಶೇ 11ರಷ್ಟಿದ್ದರೆ, ಭಾರತದ ಪಾಲು ಶೇ 9.5ರಷ್ಟು ಎಂದು ವರದಿಯು ಹೇಳಿದೆ.

ಅಣುಶಕ್ತ ದೇಶಗಳು

ಜಗತ್ತಿನ ಒಂಬತ್ತು ದೇಶಗಳು ಮಾತ್ರ ಅಣ್ವಸ್ತ್ರಗಳನ್ನು ಹೊಂದಿವೆ. ಅವುಗಳೆಂದರೆ, ಅಮೆರಿಕ, ರಷ್ಯಾ, ಬ್ರಿಟನ್, ಫ್ರಾನ್ಸ್, ಚೀನಾ, ಭಾರತ, ಪಾಕಿಸ್ತಾನ, ಇಸ್ರೇಲ್ ಮತ್ತು ಉತ್ತರ ಕೊರಿಯಾ.

ಜಗತ್ತಿನಲ್ಲಿ ಇರುವ 13,080 ಅಣ್ವಸ್ತ್ರಗಳಲ್ಲಿ ಶೇ 90ರಷ್ಟು ಅಮೆರಿಕ ಮತ್ತು ರಷ್ಯಾ ಬಳಿ ಇವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹೆಚ್ಚು ಜನಸಂಖ್ಯೆ ಇರುವ ಉತ್ತರ ಪ್ರದೇಶ ರಾಜ್ಯವು ಮೂರು ಹೋಳಾಗಲಿದೆ. ರಾಜ್ಯವನ್ನು ಒಡೆದು ಮೂರು ಪ್ರತ್ಯೇಕ ರಾಜ್ಯ ಮಾಡಲಾಗುತ್ತದೆ. ಉತ್ತರ ಪ್ರದೇಶ, ಪೂರ್ವಾಂಚಲ ಮತ್ತು ಬುಂದೇಲ್‌ಖಂಡ ರಾಜ್ಯಗಳು ಜನ್ಮತಾಳಲಿವೆ. ಈ ಬಗ್ಗೆ ಕೇಂದ್ರ ಸರ್ಕಾರವು ಪ್ರಸ್ತಾವ ಇಟ್ಟಿದೆ – ಎಂಬ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಸಾಕಷ್ಟು ಓಡಾಡುತ್ತಿದೆ. ವಿಧಾನಸಭಾ ಚುನಾವಣೆಗೂ ಮುನ್ನವೇ ರಾಜ್ಯ ವಿಭಜನೆ ನಡೆಯಲಿದೆ ಎಂದು ಚರ್ಚೆಯಾಗುತ್ತಿದೆ.



ಈ ಸಂದೇಶ ಸುಳ್ಳು ಎಂದು ತಿಳಿಸುವ ಪುರಾವೆಗಳನ್ನು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ಒದಗಿಸಿದೆ. ಕೇಂದ್ರ ಯಾವುದೇ ಪ್ರಸ್ತಾವ ಕಳುಹಿಸಿಲ್ಲ ಎಂದು ಜೂನ್ 12ರಂದು ರಾಜ್ಯ ಸರ್ಕಾರ ಸ್ಪಷ್ಟನೆ ನೀಡಿತ್ತು. ಸಚಿವ ಸಿದ್ಧಾರ್ಥನಾಥ್ ಸಿಂಗ್ ಅವರು ಈ ಸಂದೇಶ ಸುಳ್ಳು ಎಂದು ತಿಳಿಸಿದ್ದಾರೆ. ಪಿಐಬಿ ಹಾಗೂ ಕೇಂದ್ರ ಸರ್ಕಾರದ ಸಾರ್ವಜನಿಕ ಸಂಪರ್ಕ ಇಲಾಖೆ ಸಹ ಇದು ಸುಳ್ಳು ಎಂದಿವೆ. 2011ರಲ್ಲಿ ಬಿಎಸ್‌ಪಿ ನಾಯಕಿ ಮಾಯಾವತಿ ಅವರು ರಾಜ್ಯ ವಿಭಜಿಸಿ ನಾಲ್ಕು ರಾಜ್ಯಗಳನ್ನು ಸೃಷ್ಟಿಸುವ ಪ್ರಸ್ತಾವ ಮಾಡಿದ್ದರು.

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಜೂನ್ 16, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮೃಗಶಿರ ಷಷ್ಠೀ ಗಂ. 31-26 (ಸಾ. 6-36) ಬುಧವಾರ ನಿತ್ಯ ನಕ್ಷತ್ರ ಮಖೆ ಗಂ. 32-11 (ಸಾ. 6-54) ವಜ್ರ ನಾಮ ಯೋಗ ಗಂ. 55-5 ಕೌಲವ ಕರಣ ಗಂ. 2-12 ವಿಷ ಗಂ. 1-33 ಪುನರ್ವಿಷ ಗಂ. 52-1 ಅಮೃತ ಗಂ. 25-22 ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 5-57 ಸೂರ್ಯಾಸ್ತ: 6-43 ಅದೃಷ್ಟ ಸಂಖ್ಯೆ 2 8

ಮೇಷ: ವದಂತಿಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಎಲ್ಲ ಆಪಾದನೆಗಳಿಂದ ಮುಕ್ತರಾಗುವಿರಿ. ಉದ್ಯೋಗಿಗಳಿಗೆ ಸಹೋದ್ಯೋಗಿಗಳಿಂದ ಸಕಾಲಿಕ ಸಲಹೆಗಳು ದೊರೆಯುವವು. ಅಧಿಕ ವೆಚ್ಚ ಮಾಡುವ ಸಾಧ್ಯತೆ.

ವೃಷಭ: ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚಿನ ಯಶಸ್ಸನ್ನು ಕಾಣುವಿರಿ. ಕಳೆದುಹೋದುದನ್ನು ಪುನಃ ಪಡೆದುಕೊಳ್ಳುವ ಸಾಧ್ಯತೆ. ಸೌಜನ್ಯದಿಂದ ಘನತೆ ಗೌರವಗಳನ್ನು ಪಡೆಯುವಿರಿ. ಮಿತ್ರವರ್ಗದವರಿಂದ ಸಹಕಾರ ದೊರೆಯಲಿದೆ.

ಮಿಥುನ: ನಿಮ್ಮ ನೈತಿಕ ಬಲದಿಂದಾಗಿ ಸುತ್ತಮುತ್ತಲೂ ಉತ್ತಮ ವಾತಾವರಣ ಸೃಷ್ಟಿ ಮಾಡುವಿರಿ. ಸಾರ್ವಜನಿಕವಾಗಿ ಪ್ರಶಂಸೆಗಳು ಕೇಳಿಬರಲಿವೆ. ಬಂಧುಗಳ ಆಗಮನದಿಂದ ಸಂತೋಷದ ವಾತಾವರಣ. ಸಮೃದ್ಧಿಯ ದಿನವಾಗುವುದು.

ಕರ್ಕಾಟಕ: ಉದ್ಯೋಗ ಕ್ಷೇತ್ರದಲ್ಲಿ ಯಶಸ್ಸು. ಮಹಿಳೆಯರಿಗೆ ಧಾರ್ಮಿಕ ಕಾರ್ಯಗಳಲ್ಲಿ ಬಿಡುವಿಲ್ಲದ ಕೆಲಸ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಗೊಂದಲ ಸೃಷ್ಟಿಯಾಗುವುದು. ಗುರು ಆರಾಧನೆಯಿಂದ ನಿರಾಳತೆ ತಲೆದೋರುವುದು.

ಸಿಂಹ: ಕಲಾವಿದರಿಗೆ ಉತ್ತಮ ಪ್ರಶಂಸೆ. ಅರ್ಥಪೂರ್ಣ ವಿಚಾರ ವಿನಿಮಯಗಳಲ್ಲಿ ಭಾಗಿ. ಕೆಲಸ ಕಾರ್ಯಗಳಲ್ಲಿ ಆಸಕ್ತಿ ಇಮ್ಮಡಿಗೊಂಡು ಯಶಸ್ಸು. ಹೆರವರ ಕಷ್ಟಗಳಲ್ಲಿ ಭಾಗಿಯಾಗುವ ಸಾಧ್ಯತೆ.

ಕನ್ಯಾ: ವ್ಯವಹಾರಗಳು ಅಡೆತಡೆ ಇಲ್ಲದೆ ನಡೆಯುವವು. ಹೊಸ ಉದ್ಯಮ ಸ್ಥಾಪನೆಗೆ ಸಕಾಲವಾಗಿರುವುದು. ಮಧ್ಯವರ್ತಿಗಳ ಸಹಾಯದಿಂದ ವಿವಾಹ ಸಂಬಂಧಿ ಕೆಲಸ ಕಾರ್ಯಗಳು ಸಸೂತ್ರವಾಗಿ ನೆರವೇರುವವು.

ತುಲಾ: ಎಚ್ಚರಿಕೆಯ ವ್ಯವಹಾರದಿಂದಾಗಿ ವ್ಯವಹಾರದಲ್ಲಿ ಅನುಕೂಲ. ಜಾಣ್ಮೆಯಿಂದ ಕೂಡಿದ ದಕ್ಷತೆಯಿಂದಾಗಿ ಕೆಲಸ ಕಾರ್ಯಗಳು ಸುಗಮವಾಗುವವು. ಕಾರ್ಯಬಾಹುಳ್ಯದಿಂದಾಗಿ ಅತಿಯಾದ ಆಯಾಸ.

ವೃಶ್ಚಿಕ: ಕಾರ್ಯ ನೈಪುಣ್ಯತೆಯಿಂದ ಪ್ರಶಂಸೆಗೆ ಭಾಜನರಾಗುವಿರಿ. ಹಣಕಾಸಿನ ವಿಚಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ. ಆರೋಗ್ಯದಲ್ಲಿ ತೊಂದರೆ. ಸಹೋದ್ಯೋಗಿಗಳಿಂದ ನಿಂದನೆಗೊಳಗಾಗುವ ಸಾಧ್ಯತೆ.

ಧನು: ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ವಿಶೇಷ ಸಾಧನೆ ಮಾಡುವ ಸಾಧ್ಯತೆ. ವಿಜ್ಞಾನಿಗಳಿಗೆ ಹೊಸ ವಿಷಯದ ಬಗ್ಗೆ ಹೊಳವು ದೊರಕುವ ಸಾಧ್ಯತೆ. ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಅನೇಕ ಮಾರ್ಗ ಕಂಡುಬರಲಿವೆ.

ಮಕರ: ಒಪ್ಪಿಕೊಂಡ ಕೆಲಸ ಕಾರ್ಯಗಳನ್ನು ನಿರ್ಲಕ್ಷಿಸದೆ ಶ್ರದ್ಧೆಯಿಂದ ನಿರ್ವಹಿಸಿ. ಅನುಭವಿಕರಿಂದ ಸಹಾಯ ದೊರಕಲಿದೆ. ಸೋಗಲಾಡಿತನದಿಂದಾಗಿ ಇಕ್ಕಟ್ಟಿಕೆ ಸಿಲುಕುವ ಸಾಧ್ಯತೆ. ಮಾನಸಿಕ ಸ್ಥಿರತೆಯನ್ನು ಕಾಪಾಡಿಕೊಳ್ಳಿ.

ಕುಂಭ: ಗಂಭೀರ ವಿಷಯಗಳಲ್ಲಿ ಜಾಗರೂಕರಾಗಿ ವ್ಯವಹರಿಸಿ. ಘನತರವಾದ ಜವಾಬ್ದಾರಿಯೊಂದನ್ನು ಉತ್ತಮವಾಗಿ ನಿಭಾಯಿಸಲಿದ್ದೀರಿ. ಕಾರ್ಯನಿಮಿತ್ತ ದೂರ ಪ್ರಯಾಣದ ಸಾಧ್ಯತೆ. ತಾಯಿಯ ಆರೋಗ್ಯದಲ್ಲಿ ಏರುಪೇರು.

ಮೀನ: ಎಣ್ಣೆ, ಹಾಲು ಮುಂತಾದ ದ್ರವ್ಯ ವ್ಯಾಪಾರಿಗಳಿಗೆ ಲಾಭ. ಸಮಚಿತ್ತದಿಂದ ವರ್ತಮಾನದ ವಿಷಯಗಳನ್ನು ಅವಲೋಕಿಸಿ. ಹಣಕಾಸಿನ ಸಹಾಯ ದೊರಕುವುದು. ಪರರಿಂದ ಸಹಾಯ ಧಾರಾಳವಾಗಿ ದೊರಕುವುದು.

ನಿಮ್ಮ ಜನ್ಮದಿನ 16-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಯೋಚಿಸಿ ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ನಿಮ್ಮದಾಗುವುದು. ನ್ಯಾಯಾಲಯದಲ್ಲಿನ ಕಟ್ಲೆಗಳಲ್ಲಿ ಜಯ ನಿಮ್ಮದಾಗಲಿದೆ. ಸಮಾಜದ ಒಳಿತಿಗಾಗಿ ಕೈಗೊಂಡ ಕೆಲಸಗಳಿಂದಾಗಿ ಜನಮನ್ನಣೆಗೆ ಪಾತ್ರವಾಗಲಿದೀರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಗಡೀಪಾರಿನ ಹೆದರಿಕೆ

ಹೀಗೆ ದೇಶವಾಸಿಗಳೆಲ್ಲ ಎಚ್ಚರ ನೀಡಿದ ಮೇಲೆ ರಾಜ ಅವರನ್ನು ಬೇಡಿಕೊಂಡ, 'ನನ್ನ ಮಗ ವೆಸ್ಸಂತರ ಸಾಮಾನ್ಯನಲ್ಲ. ಹುಟ್ಟಿದಾಕ್ಷಣವೇ ದಾನ ಮಾಡಿದವ. ಅವನು ದೇವತೆಯರ ಅಂಶವಂತೆ. ಅಂಥ ಮಗನನ್ನು ಹೇಗೆ ಶಿಕ್ಷಿಸಲಿ? ಅವನನ್ನು ಕೊಲ್ಲುವುದು ನನ್ನಿಂದ ಆಗದ ಮಾತು'. ಆಗ ನಾಗರಿಕರ ನಾಯಕರು, 'ರಾಜಾ, ನಿನ್ನ ಕಷ್ಟ ನಮಗೆ ಅರ್ಥವಾಗುತ್ತದೆ. ಅವನಿಗೆ ಶಿಕ್ಷೆ ಕೊಡಲು, ಆಯುಧದಿಂದ ಕೊಲ್ಲಿಸಲು, ಸೆರೆಮನೆಯಲ್ಲಿ ಹಾಕಲು ಕಷ್ಟವೆನ್ನಿಸಿದರೆ ಅವನನ್ನು ದೇಶದಿಂದ ಹೊರಗೆ ಹಾಕಿಬಿಡು. ಆತ ಎಲ್ಲಿಯಾದರೂ ಪರ್ವತಗಳ ಕೊರಕುಗಳಲ್ಲಿ ಬದುಕಿಕೊಳ್ಳಲಿ. ಅವನು ದೇವಾಂಶನೇ ಆಗಿದ್ದರೆ ದೇವತೆಗಳು ಅವನನ್ನು ಕಾಪಾಡುತ್ತಾರೆ' ಎಂದು ವಾದ ಮಾಡಿದರು. ಅಸಹಾಯಕನಾದ ರಾಜ ಹೇಳಿದ, 'ಇದು ಸಿವಿ ರಾಜ್ಯದ ಎಲ್ಲ ಹಿರಿಯರ ಅಭಿಪ್ರಾಯವಾಗಿದ್ದರೆ ಹಾಗೆಯೇ ಆಗಲಿ. ಅವನನ್ನು ದೇಶಭ್ರಷ್ಟನನ್ನಾಗಿ ಮಾಡುತ್ತೇನೆ. ಆದರೆ ನನ್ನದು ಒಂದು ವಿನಂತಿ. ಇದೊಂದು ರಾತ್ರಿ ಅವನನ್ನು ನಿರಾಳವಾಗಿ ಬದುಕಲು ಬಿಡಿ. ಅವನು ರಾಜಕುಮಾರನಂತೆಯೇ ಸಂತೋಷವಾಗಿರಲಿ. ನಾಳೆ ಸೂರ್ಯೋದಯದ ನಂತರ ನೀವೆಲ್ಲ ಒಂದಾಗಿ ಅವನನ್ನು ಸಿವಿರಾಷ್ಟ್ರದಿಂದ ಹೊರಗೆ ಹಾಕಿಬಿಡಿ'. ಒಂದು ದಿನ ರಾತ್ರಿ ತಾನೇ? ಆಗಲಿ ಎಂದು ಜನ ಒಪ್ಪಿ ನಡೆದರು.

ಅವರು ಹೋದ ಮೇಲೆ ರಾಜ ವಿಶೇಷ ದೂತನನ್ನು ಕರೆದು ವೆಸ್ಸಂತರನಿಗೆ ಒಂದು ಸಂದೇಶವನ್ನು ಕಳುಹಿಸಿದ. ಆತ ವೆಸ್ಸಂತರನ ಅರಮನೆಗೆ ಬಂದ. ಆಗ ವೆಸ್ಸಂತರ ತಲೆಗೆ ಸ್ನಾನ ಮಾಡಿ, ಒಳ್ಳೆಯ ಬಟ್ಟೆ ಧರಿಸಿ, ಶ್ರೀಗಂಧವನ್ನು ಪೂಸಿಕೊಂಡಿದ್ದ. ಅವನ ಮೈಮೇಲೆ ಅನೇಕ ಆಭರಣಗಳು. ಅವನ ಸುತ್ತ ಮಂತ್ರಿಗಳು, ಸಲಹೆಗಾರರು ಕುಳಿತಿದ್ದನ್ನು ಕಂಡ ದೂತನಿಗೆ ಆತ ದೇವತೆಗಳಿಂದ ಸುತ್ತುವರೆದ ಇಂದ್ರನಂತೆ ಕಂಡ. ಸುತ್ತಲಿರುವವರನ್ನೆಲ್ಲ ಹೊರಗೆ ಕಳುಹಿಸಿದ ಮೇಲೆ ರಾಜ ಕಳುಹಿಸಿದ ಸಂದೇಶವನ್ನು ಹೇಳಿದ. 'ರಾಜಕುಮಾರ, ನೀನು ಮಾಂಗಲೀಕ ಆನೆಯನ್ನು ದಾನ ಮಾಡಿದ್ದಕ್ಕೆ ಸಿವಿದೇಶದ ಪ್ರಜೆಗಳು ನಿನ್ನ ಮೇಲೆ ವಿಪರೀತ ಸಿಟ್ಟುಮಾಡಿಕೊಂಡಿದ್ದಾರೆ. ದೇಶದ ಎಲ್ಲ ಸ್ತರದ ಜನರೂ ಸೇರಿದ್ದಾರೆ. ಈ ರಾತ್ರಿ ಕಳೆದ ಮೇಲೆ, ಸೂರ್ಯೋದಯವಾಗುತ್ತಿದ್ದಂತೆಯೇ ಅವರೆಲ್ಲ ಅರಮನೆಗೆ ಬಂದು ನಿನ್ನನ್ನು ದೇಶದಿಂದ ಹೊರಗೆ ಹಾಕುತ್ತಾರೆ. ಇದು ತುಂಬ ದುಃಖದ ಸಂಗತಿ. ಆದರೆ ನಾನು ಏನೂ ಮಾಡಲಾರದವನಾಗಿದ್ದೇನೆ, ಎಚ್ಚರ'. ವೆಸ್ಸಂತರ ಕೇಳಿದ, 'ಬರೀ ಆನೆಯನ್ನು ದಾನ ಮಾಡಿದ್ದಕ್ಕೆ ಇಷ್ಟು ಕೋಪ ಏಕೆ ಜನರಿಗೆ? ದೇಶದಿಂದ ಹೊರಗೆ ಹಾಕುವಂಥ ಅಪರಾಧ ಇದಲ್ಲವಲ್ಲ? ಅದಲ್ಲದೆ ನಾನು ಬಾಲ್ಯದಲ್ಲಿಯೇ ಮಹಾಪ್ರತಿಜ್ಞೆ ಮಾಡಿಬಿಟ್ಟಿದ್ದೇನೆ. ಚಿನ್ನ, ಮುತ್ತು, ಮಾಣಿಕ್ಯ ಮುಂತಾದ ಬಾಹ್ಯವಸ್ತುಗಳು ಮಾತ್ರವಲ್ಲ ನನ್ನ ಹೃದಯ, ಕಣ್ಣು, ದೇಹವನ್ನೇ ದಾನವಾಗಿ ಕೊಡಬಲ್ಲೆ. ನಾನು ಅದಕ್ಕೆ ಹೆದರಲಾರೆ. ನನ್ನನ್ನು ಜನ ದೇಶದಿಂದ ಹೊರಗೆ ಹಾಕಲಿ ಅಥವಾ ದೇಹವನ್ನು ತುಂಡುತುಂಡು ಮಾಡಲಿ, ನಾನು ದಾನ ಮಾಡುವುದನ್ನು ಮಾತ್ರ ನಿಲ್ಲಿಸಲಾರೆ. ನಾಳೆ ಬೆಳಿಗ್ಗೆ ಜನ ಬರಲಿ. ಅವರಿಗೆ ಸರಿಯಾದ ಉತ್ತರವನ್ನು ನೀಡಿ, ದೇಶದಿಂದ ಹೊರಗೆ ನಡೆಯುತ್ತೇನೆ. ದಯವಿಟ್ಟು ರಾಜರು ಚಿಂತೆ ಮಾಡುವುದು ಬೇಡ' ಹೀಗೆ ಹೇಳುವಾಗಲೂ ವೆಸ್ಸಂತರ ನಿರಾಳವಾಗಿಯೇ ಇದ್ದ. ❖

ಪದಬಂಧ 4629


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉತ್ತೇಜನ ನೀಡುವ ವರ್ತಕ! (4)
2.ಹೋಲಿಕೆಗೆ ಮೀರಿದ್ದು (4)
4.ಬೆಳದಿಂಗಳನ್ನು ಸೇವಿಸಿ ಜೀವಿಸುವುದೆಂದು ನಂಬಲಾದ ಹಕ್ಕಿ (4)
7.ಉಕ್ಕಡದ ಬಳಿಕೊಡುವ ತೆರಿಗೆ (3)
8.ಕಬ್ಬಿನ ರಸವನ್ನು ತೆಗೆಯುವ ಯಂತ್ರ (2)
9.ಬಲ್ಲವನ ಹತ್ತಿರವಿರುವ ಪತಿ (3)
10.ಆರ್ಭಟದಿಂದ ಹೋರಾಡುತ್ತಿರುವ ಯೋಧ! (2)
11.ಹಸೆ ಹಾಕುವಲ್ಲಿ ಬೆಳೆದ ಪಾಚಿ (3)
12.ಶಿರದ ರಕ್ಷಣೆಗಾಗಿ ಧರಿಸುವ ಟೊಪ್ಪಿಗೆ (4)
14.ತನಗೆ ಬೇಡವಾದವರ ಮೇಲಿನ ಶತ್ರುತ್ವ (4)
15.ಜಪ ಮಾಡುವಾಗ ಮಂತ್ರಗಳನ್ನು ಲೆಕ್ಕವಿಡಲು ಬಳಸುವ ಮಾಲೆ (4)

ಮೇಲಿಂದ ಕೆಳಕ್ಕೆ

1.ಪಂಚರು ನೋಡಿರುವ ಜಗತ್ತು (3)
3.ಸಂಪ್ರದಾಯ ಅಥವಾ ರೂಢಿ (3)
5.ಹಂತ ಹಂತವಾಗಿ ಎಂದು ಹೀಗೆನ್ನಿ (3)
6.ಖಡ್ಗದಿಂದ ಮಾಡುವ ಸಾಧನೆ (5)
7.ಈತ ಬಲು ಆಲಸಿ (5)
10.ತಿರುಗಿದ ಕತ್ತೆ (3)
11.ಮರದ ಮೆಟ್ಟು ಇಲ್ಲಿದೆ (3)
13.ಒಣಗಿದ ಸಣ್ಣ ಕಟ್ಟಿಗೆ (3)



4628ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಪಗೋಡ 3.ಕೆಸರು 5.ಕ್ಷೇತ್ರ 6.ಅಧಮ 7.ಅವಧಾನಿ 8.ಸತ್ಯವಾನ 10.ಗರಂದುಚ 11.ಚಾಡಿಕೋರ 13.ನೀಹಾರ 14.ಭಯ 15.ಅಗಸೆ 17.ವಿಭವ

ಮೇಲಿಂದ ಕೆಳಕ್ಕೆ: 1.ಶಂಕೆ 2.ಪತ್ರ 4.ಸದ್ಭಾವ 5.ಕ್ಷೇಮಸಮಾಚಾರ 6.ಅನಿವರ್ಚನೀಯ 7.ಅಣುಗ 9.ನಶ್ವರ 12.ಕೋಡಗ 14.ಭವ 16.ಸೆಲೆ

ಸುಡೊಕು 5015

		1			7		3	
			2	3				
5		2		1		9		7
2		5					7	
				5	3	8		9
	9		8				5	
4		3			2			
	5			4		7	9	2
7		9	6		5		1	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5014 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

4.54 ಲಕ್ಷ ಮಕ್ಕಳ ಅಪೌಷ್ಟಿಕತೆ ನಿವಾರಣೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಹಾವೇರಿ: 'ರಾಜ್ಯದಲ್ಲಿ 7,751 ಮಕ್ಕಳು 'ತೀವ್ರ ಅಪೌಷ್ಟಿಕತೆ' ಹಾಗೂ 4.47 ಲಕ್ಷ ಮಕ್ಕಳು 'ಅಪೌಷ್ಟಿಕತೆ' ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಅವರು, 'ಮಕ್ಕಳ ಮೇಲೆ ಕೋವಿಡ್ ಮೂರನೇ ಅಲೆ ಪರಿಣಾಮ ತಡೆಯಲು ಸಿದ್ಧತೆ ನಡೆಸಲಾಗಿದೆ. ಅಂಗನವಾಡಿ ಮಕ್ಕಳಿಗೆ ಮನೆ ಬಾಗಿಲಿಗೆ ಪೌಷ್ಟಿಕ ಆಹಾರ ಒದಗಿಸಲಾಗುತ್ತಿದೆ' ಎಂದರು.

'4.67 ಲಕ್ಷ ಗರ್ಭಿಣಿಯರು ಮತ್ತು 4.54 ಲಕ್ಷ ಬಾಣಂತಿಯರಿಗೂ ಪೌಷ್ಟಿಕ ಆಹಾರ ವಿತರಿಸಲಾಗುತ್ತಿದೆ. ಪ್ರತಿ ಜಿಲ್ಲೆಯಲ್ಲೂ ಮಕ್ಕಳಿಗೆ ಪ್ರತ್ಯೇಕ 'ಕೋವಿಡ್ ಆರೈಕೆ ಕೇಂದ್ರ'ಗಳನ್ನು ಜಿಲ್ಲಾಡಳಿತ ತೆರೆಯುತ್ತಿದೆ. ನವಜಾತ ಶಿಶುಗಳ ತೀವ್ರ ನಿಗಾ ಘಟಕ ಮತ್ತು ಮಕ್ಕಳ ತೀವ್ರ ನಿಗಾ ಘಟಕ ತೆರೆಯಲು ಕ್ರಮ ಕೈಗೊಳ್ಳಲಾಗಿದೆ' ಎಂದರು.

43 ಮಕ್ಕಳು ಅನಾಥ: 'ಕೋವಿಡ್ 2ನೇ ಅಲೆಯಲ್ಲಿ ರಾಜ್ಯದಲ್ಲಿ 43 ಮಕ್ಕಳು ತಂದೆ ಮತ್ತು ತಾಯಿ ಇಬ್ಬರನ್ನೂ ಕಳೆದುಕೊಂಡಿದ್ದಾರೆ. ಕೆಲ ಮಕ್ಕಳು ಏಕಪೋಷಕರ ಆರೈಕೆಯಲ್ಲಿವೆ. ಇಂಥ ಮಕ್ಕಳಿಗೆ 'ಬಾಲ ಸೇವಾ ಯೋಜನೆ'ಯಡಿ ಮಾಸಿಕ ₹3,500 ಸಹಾಯಧನ ನೀಡಲಾಗುವುದು' ಎಂದರು.

'ವಸತಿ ಶಾಲೆಗಳಲ್ಲಿ ಉಚಿತ ಶಿಕ್ಷಣ, ಉನ್ನತ ಶಿಕ್ಷಣಕ್ಕೆ ಉಚಿತ ಲ್ಯಾಪ್‌ಟಾಪ್ ಹಾಗೂ 21 ವರ್ಷ ಮೇಲ್ಪಟ್ಟ ಹೆಣ್ಣುಮಕ್ಕಳಿಗೆ ಮದುವೆ ಮತ್ತು ಉನ್ನತ ಶಿಕ್ಷಣಕ್ಕೆ ₹1 ಲಕ್ಷ ನೀಡಲಾಗುವುದು. ಅನಾಥ ಮಕ್ಕಳ ಭವಿಷ್ಯ ರೂಪಿಸಲು ಮಠಾಧೀಶರು, ದಾನಿಗಳು ಮುಂದೆ ಬಂದರೆ ಇಲಾಖೆ ಅಗತ್ಯ ಸಹಕಾರ ನೀಡಲಿದೆ' ಎಂದರು.

ಸಾಂತ್ವನ ಕೇಂದ್ರ ಮುಂದುವರಿಸಲು ಚರ್ಚೆ

'ಸರ್ಕಾರದ ಅನುದಾನದಡಿ 193 ಮಹಿಳಾ ಸಾಂತ್ವನ ಕೇಂದ್ರಗಳು ತಾಲ್ಲೂಕು ಮಟ್ಟದಲ್ಲಿ ನಡೆಯುತ್ತಿವೆ. ಕೇಂದ್ರ ಸರ್ಕಾರದ 'ಒನ್ ಸ್ಟಾಪ್ ಸೆಂಟರ್' ಇರುವ ಕಡೆ ಸಾಂತ್ವನ ಕೇಂದ್ರಗಳು ಬೇಡ ಎಂಬ ಆದೇಶ ಬಂದಿದೆ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ಸಕಾರಾತ್ಮಕ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು' ಎಂದು ಸಚಿವೆ ಜೊಲ್ಲೆ ಭರವಸೆ ನೀಡಿದರು.

ಕೊರೊನಾ ಸೋಂಕಿನಿಂದ ತಂದೆಯ ಸಾವು • ಅಜ್ಜಿಯೇ ಈಗ ಆಸರೆ

ಅಮ್ಮ ಇಲ್ಲದ ಮಗುವಿಗೆ ಈಗ ಅಪ್ಪನೂ ಇಲ್ಲ

• ಬಾಲಕೃಷ್ಣ ಪಿ.ಎಚ್.



ಮಕ್ಕಳ ಆಸರೆ ಕಸಿದ ಕೊರೊನಾ

ದಾವಣಗೆರೆ: 'ಮೊಮ್ಮಗಳು ಹತ್ತು ತಿಂಗಳ ಕೂಸು ಆಗಿರುವಾಗ ತಾಯಿಯನ್ನು ಕಳೆದುಕೊಂಡಿದ್ದಳು. ಇದೀಗ ಕೊರೊನಾದಿಂದ ತಂದೆಯನ್ನೂ ಕಳೆದುಕೊಂಡಿದ್ದಾಳೆ. ಈಗ ನನಗೆ ಅವಳು, ಅವಳಿಗೆ ನಾನು ಆಸರೆ...'

ಹೊನ್ನಾಳಿ ತಾಲ್ಲೂಕು ದೊಡ್ಡೇರಿಹಳ್ಳಿಯ ಅಜ್ಜಿ ವೀರಮ್ಮ ಹೇಳಿದ ಮಾತಿದು. ವೀರಮ್ಮ ಅವರ ಒಬ್ಬನೇ ಮಗ ನಿತ್ಯಾನಂದ ಬೆಂಗಳೂರಿನಲ್ಲಿ ಕಾರು ಚಾಲಕನಾಗಿದ್ದರು. 12 ವರ್ಷಗಳ ಹಿಂದೆ ರಾಧಾ ಎಂಬಾಕೆಯನ್ನು ಮದುವೆಯಾಗಿದ್ದರು. ಯುಕ್ತಿ ಎಂಬ ಹೆಣ್ಣು ಮಗಳು ಜನಿಸಿದ್ದಳು. ಬಳಿಕ ಕೆಲವೇ ತಿಂಗಳಲ್ಲಿ ರಾಧಾ ಮೃತಪಟ್ಟಿದ್ದರು.

ಅಜ್ಜಿ ವೀರಮ್ಮ ಮತ್ತು ತಂದೆ ನಿತ್ಯಾನಂದ ಅವರೇ 10 ತಿಂಗಳ ಮಗುವನ್ನು 11 ವರ್ಷ ಬೆಳೆಸಿದ್ದರು. ಮಗುವಿಗೆ ತಂದೆಯಾದರೂ ಇದ್ದಾರಲ್ಲ ಎಂಬ ನೆಮ್ಮದಿಯನ್ನು ಕೊರೊನಾ ಉಳಿಸಲಿಲ್ಲ. ಒಂದು ತಿಂಗಳ ಹಿಂದೆ ಕೊರೊನಾ ಸೋಂಕಿನಿಂದ ನಿತ್ಯಾನಂದ ಮೃತಪಟ್ಟಿದ್ದಾರೆ.

ದಿಕ್ಕು ತೋಚದ ಅಜ್ಜಿ ವೀರಮ್ಮ ಮೊಮ್ಮಗಳನ್ನು ಕರೆದುಕೊಂಡು ಹೊನ್ನಾಳಿ ತಾಲ್ಲೂಕು ದೊಡ್ಡೇರಿಯಲ್ಲಿ ಇರುವ ತಮ್ಮನ ಮನೆಗೆ ಬಂದಿದ್ದಾರೆ. ಇದೀಗ ಮೊಮ್ಮಗಳಿಗೆ ಅಜ್ಜಿ ಆಸರೆಯಾದರೆ, ಅಜ್ಜಿ ಮತ್ತು ಮೊಮ್ಮಗಳಿಬ್ಬರಿಗೂ ಅಜ್ಜಿಯ ತಮ್ಮ ಪ್ರಭು ದಂಪತಿ ಆಸರೆಯಾಗಿದ್ದಾರೆ.

'ನನಗೆ ಇಬ್ಬರು ಹೆಣ್ಣುಮಕ್ಕಳು. ಅವರಿಬ್ಬರೂ ಮದುವೆಯಾಗಿದೆ. ಇಲ್ಲಿ ನಾವಿಬ್ಬರೇ ಗಂಡ–ಹೆಂಡತಿ ಇದ್ದೆವು. ಈಗ ಅಕ್ಕ ಮತ್ತು ಮೊಮ್ಮಗಳೂ ಜತೆಗೂಡಿದ್ದಾರೆ' ಎಂದು ಪ್ರಭು 'ಪ್ರಜಾವಾಣಿ'ಗೆ ತಿಳಿಸಿದರು.

'ತಾಯಿಯ ಮುಖದ ನೆನಪು ಉಳಿಯುವ ಮೊದಲೇ ಆಕೆಯನ್ನು ಕಳೆದುಕೊಂಡಿದ್ದಾಳೆ. ಈಗ ತಂದೆಯನ್ನೂ ಕಳೆದುಕೊಂಡಿದ್ದಾಳೆ. ಆ ನೋವನ್ನು ಅರ್ಥ ಮಾಡಿಕೊಳ್ಳುವಷ್ಟು ದೊಡ್ಡವಳಾಗಿಲ್ಲ. ತಂದೆ–ತಾಯಿಯ ಪ್ರೀತಿಯನ್ನು ನಾವೇ ನೀಡಿ ಬೆಳೆಸುತ್ತಿದ್ದೇವೆ' ಎಂದರು.

'ನಾನು ಬೆಂಗಳೂರಿನಲ್ಲಿದ್ದೆ. ಅಲ್ಲಿ ಐದನೇ ತರಗತಿವರೆಗೆ ಓದಿದ್ದೇನೆ. ಈಗ ಊರಿಗೆ ಬಂದಿದ್ದೇನೆ. ಯಾವ ಶಾಲೆಗೆ ಕಳುಹಿಸುತ್ತಾರೋ ಅಲ್ಲಿ ಹೋಗುತ್ತೇನೆ' ಎಂದು ಯುಕ್ತಿ ಮುಗ್ಧವಾಗಿ ಹೇಳುತ್ತಾಳೆ.

ಅಜ್ಜಿ, ಮೊಮ್ಮಗಳ ಸಂಪರ್ಕಕ್ಕೆ: 7259714674



ತಂದೆ–ತಾಯಿ ಇಲ್ಲ. ಯುಕ್ತಿಯ ವಿದ್ಯಾಭ್ಯಾಸಕ್ಕೆ ನವೋದಯ ಅಥವಾ ಒಳ್ಳೆಯ ವ್ಯವಸ್ಥೆಯನ್ನು ಸರ್ಕಾರ ಮಾಡಿದರೆ ಚೆನ್ನಾಗಿತ್ತು.
ಪ್ರಭು, ಮೊಮ್ಮಗಳು–ಅಜ್ಜಿಯ ಆಸರೆದಾತ



ಅಜ್ಜಿ ವೀರಮ್ಮ ಜತೆಗೆ ಮೊಮ್ಮಗಳು ಯುಕ್ತಿ

'ಮಗುವಿನ ಪೋಷಣೆಗೆ ಎಲ್ಲ ಕ್ರಮ'



ಕೆ.ಎಚ್. ವಿಜಯಕುಮಾರ್

10ನೇ ತರಗತಿವರೆಗೆ ಉಚಿತ ಶಿಕ್ಷಣ ಇದೆ. ಮಕ್ಕಳ ಕಲ್ಯಾಣ ಸಮಿತಿಯು ಪರಿಶೀಲಿಸಿ ಅಜ್ಜಿ ವೀರಮ್ಮ ಅವರನ್ನೇ ಅರ್ಹ ವ್ಯಕ್ತಿ ಎಂದು ಗುರುತಿಸಿ ಅವರ ಸುಪರ್ದಿಯಲ್ಲೇ ಮಗುವನ್ನು ಬಿಡಲಾಗಿದೆ. ಇಲಾಖೆಯಿಂದ ಪ್ರಾಯೋಜಕತ್ವ ಯೋಜನೆಯಡಿ ಮೂರು ವರ್ಷ ಪ್ರತಿ ತಿಂಗಳು ₹ 1 ಸಾವಿರ ನೀಡಲು ಕ್ರಮ ಕೈಗೊಳ್ಳಲಾಗಿದೆ. ಬಾಲ ಸೇವಾ ಬಾಲ ಸ್ವರಾಜ್ ಯೋಜನೆ ಅಳವಡಿಸಲಾಗಿದೆ. ಮುಂದಿನ ಆದೇಶ ಬಂದ ಮೇಲೆ ಎಲ್ಲ ಕ್ರಮ ಕೈಗೊಳ್ಳಲಾಗುವುದು. ಅಜ್ಜಿಗೆ ನೋಡಿಕೊಳ್ಳಲು ಸಾಧ್ಯವಿಲ್ಲ ಎಂಬ ಸನ್ನಿವೇಶದಲ್ಲಿ ಬಾಲಕಿಗೆ ಸೂಕ್ತ ರಕ್ಷಣೆ ಮತ್ತು ಪೋಷಣೆ ನೀಡಲು ಇಲಾಖೆ ಬದ್ಧವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಕೆ.ಎಚ್. ವಿಜಯಕುಮಾರ್ ತಿಳಿಸಿದ್ದಾರೆ.

ಮಗು, ಅಜ್ಜಿ ಜತೆ ಮಾತನಾಡಿದ ಸಚಿವೆ



ಶಶಿಕಲಾ ಜೊಲ್ಲೆ

ಕೊರೊನಾದಿಂದ ಹೆತ್ತವರನ್ನು ಕಳೆದುಕೊಂಡ ಮಗುವಿನ ಜತೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ಅವರೇ ಕರೆ ಮಾಡಿ ಮಾತನಾಡಿದ್ದಾರೆ. ಮಗು ಮತ್ತು ಅಜ್ಜಿಗೆ ಸಾಂತ್ವನ ಹೇಳಿದ್ದಾರೆ. ಮಗುವಿನ ಭವಿಷ್ಯಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲು ಇಲಾಖೆಗೆ ತಿಳಿಸಿದ್ದಾರೆ.

ನದಿಯಲ್ಲಿ ನೀರಿನ ಹರಿವು ಹೆಚ್ಚಳ: ಸೇತುವೆ ಬಿರುಕು

ಒಂದನೇ ಪುಟದಿಂದ

ಬಣಕಲ್ ಬಳಿಯ ಅತ್ತಿಗೆರೆಯಲ್ಲಿ ಮನೆ ಮೇಲೆ ತೆಂಗಿನ ಮರ ಬಿದ್ದು ಚಾವಣಿ ಮುರಿದಿದೆ.

ಮೂಡಿಗೆರೆ ತಾಲ್ಲೂಕಿನ ಜನ್ನಾಪುರ ಭಾಗದಲ್ಲಿ 15 ಹಾಗೂ ದಾರದಹಳ್ಳಿ ಪ್ರದೇಶದಲ್ಲಿ 6 ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನಲ್ಲಿ ಹದಿನಾರು ವಿದ್ಯುತ್ ಕಂಬಗಳು, ಮೂರು ಪರಿವರ್ತಕಗಳು, ಅಂಕೋಲಾದಲ್ಲಿ ಎರಡು ವಿದ್ಯುತ್ ಕಂಬಗಳು, ಎರಡು ಪರಿವರ್ತಕಗಳು ಮಳೆಯಿಂದ ಹಾನಿಗೀಡಾಗಿವೆ.

ಸಿದ್ದಾಪುರ ತಾಲ್ಲೂಕಿನ ನಿಲ್ಕುಂದ ಗ್ರಾಮದ ಮುಂಡಿಗೆ ಜಡ್ಡಿಯಲ್ಲಿ ಮರ ಬಿದ್ದು ವಿದ್ಯುತ್ ಕಂಬ ಮುರಿದಿದೆ. ಹೊನ್ನಾವರ ತಾಲ್ಲೂಕಿನ ವಿವಿಧೆಡೆ ಐದು ಮನೆಗಳಿಗೆ ಹಾನಿಯಾಗಿದೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಲಿಂಗನಮಕ್ಕಿ ಒಳಹರಿವು ಹೆಚ್ಚಳ: ಶಿವಮೊಗ್ಗ ಜಿಲ್ಲೆಯ ಹೊಸನಗರ, ತೀರ್ಥಹಳ್ಳಿ ತಾಲ್ಲೂಕು ವ್ಯಾಪಕ ಮಳೆ ಸುರಿಯುತ್ತಿದೆ. ಲಿಂಗನಮಕ್ಕಿ ಜಲಾಶಯಕ್ಕೆ 13,173 ಕ್ಯುಸೆಕ್ ನೀರು ಹರಿದುಬರುತ್ತಿದೆ. ಗರಿಷ್ಠ 1,819 ಅಡಿ ನೀರಿನ ಮಟ್ಟ ಹೊಂದಿರುವ ಲಿಂಗನಮಕ್ಕಿ ಜಲಾಶಯ ನೀರಿನ ಮಟ್ಟ ಮಂಗಳವಾರ 1,776.6 ಅಡಿಗೆ ತಲುಪಿದೆ.

ಭದ್ರಾ ಹಿನ್ನೀರಿನ ಪ್ರದೇಶದಲ್ಲಿ ಸಹ ವ್ಯಾಪಕವಾಗಿ ಮಳೆ ಸುರಿಯುತ್ತಿದ್ದು, ಜಲಾಶಯಕ್ಕೆ 6,073 ಕ್ಯುಸೆಕ್ ನೀರು ಹರಿದುಬರುತ್ತಿದೆ. ಗರಿಷ್ಠ 186 ಅಡಿ ನೀರಿನ ಮಟ್ಟ ಹೊಂದಿರುವ ಭದ್ರಾ ಡ್ಯಾಂನಲ್ಲಿ 141.2 ಅಡಿ ನೀರು ಸಂಗ್ರಹಗೊಂಡಿದೆ.

ತೀರ್ಥಹಳ್ಳಿ ಭಾಗದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಗಾಜನೂರಿನ ತುಂಗಾ ಜಲಾಶಯ ಭರ್ತಿಯಾಗಿದ್ದು, ಜಲಾಶಯದಿಂದ 7,535 ಕ್ಯುಸೆಕ್ ನೀರು ಹೊರಬಿಡಲಾಗುತ್ತಿದೆ.

ಬೆಳಗಾವಿ, ಕೊಡಗು, ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಮಳೆಯಾಗಿದೆ. ಕೊಡಗು ಜಿಲ್ಲೆಯ ಮಲ್ಲಳ್ಳಿ ಜಲಪಾತವು ಮೈದುಂಬಿಕೊಂಡಿದೆ.

ಮುಂಗಾರು:16 ಜಿಲ್ಲೆಗಳಲ್ಲಿ ಅಲರ್ಟ್ ಮುಂದುವರಿಕೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿರುವುದರಿಂದ ಕರಾವಳಿ ಹಾಗೂ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಜೂ.18ರವರೆಗೆ ವ್ಯಾಪಕ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಭಾಗದಲ್ಲಿ ಇದೇ 20ರವರೆಗೆ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ. ಶಿವಮೊಗ್ಗ, ಕೊಡಗು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಜೂ.16 ಮತ್ತು 17ರಂದು 'ಆರೆಂಜ್ ಅಲರ್ಟ್' ಮುಂದುವರಿಸಲಾಗಿದೆ.

ಬಳ್ಳಾರಿ, ಯಾದಗಿರಿ, ವಿಜಯಪುರ, ರಾಯಚೂರು, ಕಲಬುರ್ಗಿ, ಹಾವೇರಿ, ಧಾರವಾಡ, ಬೀದರ್, ಬೆಳಗಾವಿ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನಗಳವರೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಕರಾವಳಿಯಲ್ಲಿ ಗಂಟೆಗೆ ಗರಿಷ್ಠ 60 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿರುವುದರಿಂದ ಇದೇ 17ರವರೆಗೆ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದೂ ಇಲಾಖೆಯು ಎಚ್ಚರಿಸಿದೆ.

ಕೊಲ್ಲೂರಿನಲ್ಲಿ 12 ಸೆಂ.ಮೀ ಮಳೆಯಾಗಿದೆ. ಬೆಳ್ತಂಗಡಿ, ಸುಳ್ಯ 6, ವಿರಾಜಪೇಟೆ 3, ರಾಯಚೂರು, ಸಂಕೇಶ್ವರ, ಸಾಗರದಲ್ಲಿ ತಲಾ 2 ಸೆಂ.ಮೀ ಮಳೆಯಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	395
ಅಡಿಕೆ	
ಬಂಟ್ವಾಳ	
ಹೊಸತು	23500-40500
ಹಳತು	42500-50500
ಚಿತ್ರದುರ್ಗ	
ಅಪಿ	43219-43629
ಬೆಟ್ಟೆ	33610-34099
ಕೆಂಪುಗೋಟು	27609-28059
ರಾಶಿ	42739-43169
ಸಿದ್ದಾಪುರ	
ಬಿಳಿಗೋಟು	26899-32099
ಚಾಲಿ	35099-38599
ಕೋಕ	25599-30669
ಕೆಂಪುಗೋಟು	24899-31399
ರಾಶಿ	39899-41699
ತಟ್ಟಿಬೆಟ್ಟೆ	37099-37099
ಯಲ್ಲಾಪುರ	
ಬಿಳಿಗೋಟು	26899-32009
ಚಾಲಿ	32612-38669
ಕೋಕ	21899-29699
ಕೆಂಪುಗೋಟು	28742-32209
ರಾಶಿ	39592-44599
ತಟ್ಟಿಬೆಟ್ಟೆ	33499-38700
ರಾಮನಗರ ರೇಷ್ಮೆ	
ಮಿಶ್ರತಳಿ	308-386
ದ್ವಿತಳಿ	401-478

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11000	10700	10600	154.10 ಸೆಂಟ್ಸ್
ಎಸಿ	4675	4300	4100	
ಆರ್‌ಪಿ	5250	5150	5200	ಲಂಡನ್
ಆರ್‌ಸಿ	3125	3070	3075	1569 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ
15-6-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1450 (1425)
ಒಂದು ವಾರದ ಡೆಲಿವರಿ	1445 (1420)
ಸೋಯಾ ಕಚ್ಚಾ	1260 (1255)
ಪಾಮ್ ವಾರದ ಡೆಲಿವರಿ	1138 (1128)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10 ಗ್ರಾಂ 48,300 (48,200)
ಬೆಳ್ಳಿ ಕೆ.ಜಿ 71,250 (71,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು

222



ಎನ್ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,811
ಇಂದಿನ ಅಂತ್ಯ	15,869
▲	58
ದಿನದ ಗರಿಷ್ಠ	15,901

ವಿನಿಮಯ ದರ

$ ಡಾಲರ್	73.31
£ ಪೌಂಡ್	103.18
€ ಯುರೊ	88.89
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹553

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1440 (1415)
ಸೋಯಾ (ರಿಫೈನ್ಡ್)	₹1310 (1310)
ಸೂರ್ಯಕಾಂತಿ (ರಿಫೈನ್ಡ್)	₹1440(1440)
ಪಾಮೋಲಿನ್	₹1140 (1130)

ಟಿವಿಎಸ್ ಐಕ್ಯೂಬ್ ಬೆಲೆ ₹ 11,250ರಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಟಿವಿಎಸ್ ಮೋಟರ್ ಕಂಪನಿಯು ತನ್ನ ವಿದ್ಯುತ್ ಚಾಲಿತ ಸ್ಕೂಟರ್ 'ಐಕ್ಯೂಬ್' ಬೆಲೆಯನ್ನು ₹ 11,250ರಷ್ಟು ಕಡಿತ ಮಾಡಿದೆ.

ಬೆಂಗಳೂರಿನಲ್ಲಿ ಈ ಸ್ಕೂಟರ್ ಬೆಲೆ ಮೊದಲು ₹ 1,21,756 ಇತ್ತು. ಈಗ ₹ 1,10,506ಕ್ಕೆ ಇಳಿಕೆ ಆಗಿದೆ.

ಕೇಂದ್ರ ಸರ್ಕಾರವು ಫೇಮ್–2 ಯೋಜನೆಯಡಿ ಇ–ಸ್ಕೂಟರ್‌ಗಳ ಮೇಲಿನ ಸಬ್ಸಿಡಿಯಲ್ಲಿ ಹೆಚ್ಚಳ ಮಾಡಿದೆ. ಇದಕ್ಕೆ ಅನುಗುಣವಾಗಿ ಈ ಬದಲಾವಣೆ ಮಾಡಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಚಿನ್ನದ ಇಟಿಎಫ್: ಮೇನಲ್ಲಿ ಹೂಡಿಕೆ ಶೇ 57ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ ಮೇ ತಿಂಗಳಿನಲ್ಲಿ ಆಗಿರುವ ಹೂಡಿಕೆಯು ಏಪ್ರಿಲ್‌ಗೆ ಹೋಲಿಸಿದರೆ ಶೇ 57ರಷ್ಟು ಇಳಿಕೆ ಆಗಿದೆ. ಏಪ್ರಿಲ್‌ನಲ್ಲಿ ₹ 680 ಕೋಟಿಗಳಷ್ಟು ಹೂಡಿಕೆ ಆಗಿತ್ತು. ಮೇ ತಿಂಗಳಿನಲ್ಲಿ ₹ 288 ಕೋಟಿಗಳಿಗೆ ಇಳಿಕೆ ಕಂಡಿದೆ.

ಮೇನಲ್ಲಿ ಹೂಡಿಕೆ ತಗ್ಗಿದ್ದರೂ ಚಿನ್ನದ ಇಟಿಎಫ್‌ನ ನಿರ್ವಹಣಾ ಸಂಪತ್ತು ಮೌಲ್ಯವು ₹ 16,625 ಕೋಟಿಗಳಿಗೆ ಏರಿಕೆಯಾಗಿದೆ. ಏಪ್ರಿಲ್ ತಿಂಗಳ ಅಂತ್ಯಕ್ಕೆ ನಿರ್ವಹಣಾ ಸಂಪತ್ತು ಮೌಲ್ಯವು ₹ 15,629 ಕೋಟಿಗಳಷ್ಟಿತ್ತು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ ತಿಳಿಸಿದೆ.

ಬಿಎಸ್‌ಇ ಬಂಡವಾಳ ಮೌಲ್ಯ ₹ 231 ಲಕ್ಷ ಕೋಟಿಗೆ ಏರಿಕೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳು ಮಂಗಳವಾರ ದಾಖಲೆ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿವೆ. ಮುಂಬೈ ಷೇರುಪೇಟೆ ಸೂಚ್ಯಂಕ 222 ಅಂಶ ಹೆಚ್ಚಾಗಿ 52,773 ಅಂಶಗಳ ಗರಿಷ್ಠ ಮಟ್ಟ ತಲುಪಿತು. ಇದರಿಂದ ಷೇರುಪೇಟೆಯ ಬಂಡವಾಳ ಮೌಲ್ಯ ₹ 231 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 58 ಅಂಶ ಹೆಚ್ಚಾಗಿ ದಾಖಲೆಯ 15,869 ಅಂಶಗಳಿಗೆ ತಲುಪಿತು.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಚಂದ್ರಮೋಹನ್, ಬಳ್ಳಾರಿ

• **ಪ್ರಶ್ನೆ: ನನಗೆ ಅಪಘಾತದ ನಂತರ ₹ 7 ಲಕ್ಷ ಹಣವು ಕೋರ್ಟ್ ಮುಖಾಂತರ ಬಂದಿದೆ. ಇದರಲ್ಲಿ ₹ 1 ಲಕ್ಷ ವಕೀಲರಿಗೆ ಕೊಡಬೇಕಾಗುತ್ತದೆ. ಅಪಘಾತದಿಂದಾಗಿ ಸ್ವಲ್ಪ ಅಂಗವೈಕಲ್ಯ ಆಗಿದೆ. ನನ್ನ ವೃತ್ತಿ ಖಾಸಗಿ ಕಂಪನಿಯಲ್ಲಿ. ತಿಂಗಳ ಸಂಬಳ ₹ 52 ಸಾವಿರ. ₹ 7 ಲಕ್ಷವು ನನ್ನ ಖಾತೆಗೆ ಜಮಾ ಆಗಿದೆ. ನನಗೆ ತೆರಿಗೆ ಬರಬಹುದೇ? ಹೀಗೆ ಬಂದ ಹಣವನ್ನು ನನ್ನ ತಾಯಿಯ ಹೆಸರಿನಲ್ಲಿ ಅಂಚೆ ಕಚೇರಿ ಅಥವಾ ಬ್ಯಾಂಕ್ ಠೇವಣಿಯಲ್ಲಿ ಇರಿಸಬಹುದೇ? ತಾಯಿಯ ವಯಸ್ಸು 63 ವರ್ಷ.**

ಉತ್ತರ: ನಿಮಗೆ ಬಂದಿರುವುದು ಪರಿಹಾರ ರೂಪದ ಹಣ. ಇದನ್ನು ಆದಾಯವೆಂದು ಪರಿಗಣಿಸಬೇಕಿಲ್ಲ. ಜೊತೆಗೆ, ತೆರಿಗೆ ಕೊಡುವ ಅವಶ್ಯಕತೆಯೂ ಇಲ್ಲ. ನಿಮ್ಮ ವಾರ್ಷಿಕ ಸಂಬಳ ₹ 6,24,000ದಲ್ಲಿ ಸ್ಟ್ಯಾಂಡರ್ಡ್ ಡಿಡಕ್ಷನ್ ಸೆಕ್ಷನ್ 16(ಎ) ಹಾಗೂ ಅಂಗವೈಕಲ್ಯದ ಸೆಕ್ಷನ್ 80 ಯು ಒಟ್ಟಾರೆ ₹ 1.25 ಲಕ್ಷ ಕಳೆದಾಗ ಬರುವ ಮೊತ್ತ ₹ 4.99 ಲಕ್ಷಕ್ಕೆ ತೆರಿಗೆ ಬರುವುದಿಲ್ಲ. ಆದರೆ, ರಿಟರ್ನ್ಸ್ ಸಲ್ಲಿಸಬೇಕು. ನಿಮಗೆ ಬಂದಿರುವ ₹ 7 ಲಕ್ಷದಲ್ಲಿ ₹ 1 ಲಕ್ಷ ವಕೀಲರಿಗೆ ಕೊಟ್ಟು ಉಳಿದ ₹ 6 ಲಕ್ಷವನ್ನು ಅಂಚೆ ಕಚೇರಿ ಹಿರಿಯ ನಾಗರಿಕರ ಠೇವಣಿಯಲ್ಲಿ ತಾಯಿಯ ಹೆಸರಿನಲ್ಲಿ ಇರಿಸಿ. ಸದ್ಯ ಶೇಕಡ 7.4ರಷ್ಟು ಬಡ್ಡಿ ಇದೆ. ಮುಂದೆ ಇದು ಕಡಿಮೆ ಆಗುವ ಸಾಧ್ಯತೆ ಇರುವುದರಿಂದ ಈಗಲೇ ಠೇವಣಿ ಮಾಡಿದರೆ, ಮುಂದಿನ ಐದು ವರ್ಷಗಳ ತನಕ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ.

ಹೆಸರು, ಊರು ಬೇಡ

• **ಪ್ರಶ್ನೆ: ನನ್ನ ವಯಸ್ಸು 45 ವರ್ಷ. ಖಾಸಗಿ ಕಂಪನಿಯಲ್ಲಿ ಕೆಲಸ. ಸಂಬಳ ₹ 47 ಸಾವಿರ. ನನಗೆ 4 ಹಾಗೂ 8 ವರ್ಷ ವಯಸ್ಸಿನ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ಎಲ್ಲಾ ಖರ್ಚು ಕಳೆದು ₹ 25 ಸಾವಿರ ಉಳಿಯುತ್ತದೆ. ಇಬ್ಬರು ಹೆಣ್ಣುಮಕ್ಕಳ ಸಲುವಾಗಿ ಉಳಿತಾಯ ಯೋಜನೆ ತಿಳಿಸಿ.**

ಉತ್ತರ: ನಿಮ್ಮ ಇಬ್ಬರು ಹೆಣ್ಣು ಮಕ್ಕಳ ಸಲುವಾಗಿ ಅಂಚೆ ಕಚೇರಿ ಅಥವಾ ಆಯ್ದ ಸರ್ಕಾರಿ ಬ್ಯಾಂಕ್‌ನ ಶಾಖೆಯಲ್ಲಿ ತಿಂಗಳಿಗೆ ತಲಾ ₹ 10 ಸಾವಿರವನ್ನು ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಇರಿಸುತ್ತಾ ಬನ್ನಿ. ಇಂದಿನ ಬಡ್ಡಿದರ ಶೇ 7.6 ಇದೆ. ಕೇಂದ್ರ ಸರ್ಕಾರ ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ರೂಪಿಸಿರುವ ಯೋಜನೆ ಇದು. ಖಾತೆ ಪ್ರಾರಂಭವಾದ 14 ವರ್ಷಗಳವರೆಗೆ ಮಾತ್ರ ಹಣ ಜಮಾ ಮಾಡಬಹುದು. ಹೆಣ್ಣು ಮಕ್ಕಳಿಗೆ 18 ವರ್ಷ ತುಂಬಿದ ಬಳಿಕ ವಿದ್ಯಾಭ್ಯಾಸಕ್ಕೆ ಅಥವಾ ಮದುವೆಗೆ ಶೇ 50ರಷ್ಟು ಹಣವನ್ನು ಹಿಂಪಡೆಯಬಹುದು. ಈ ಖಾತೆ ಪ್ರಾರಂಭವಾದ ತಾರೀಕಿನಿಂದ ಮಕ್ಕಳಿಗೆ 21 ವರ್ಷ ವಯಸ್ಸಾಗುವವರೆಗೆ ಮಾತ್ರ ಇರುತ್ತದೆ. 21 ವರ್ಷ ತುಂಬಿದಾಗ ಕಟ್ಟಿದ ಹಣ ಹಾಗೂ ಬಡ್ಡಿ ಸಂಪೂರ್ಣ ವಾಪಸ್ ಪಡೆಯಬಹುದು. ಹೀಗೆ ಠೇವಣಿ ಮಾಡಿ ಉಳಿದ ₹ 5 ಸಾವಿರ ಒಂದು ವರ್ಷದ ಆರ್.ಡಿ. ಮಾಡಿ. ವರ್ಷಾಂತ್ಯಕ್ಕೆ ಬಂಗಾರದ ನಾಣ್ಯ ಕೊಂಡು ಬ್ಯಾಂಕ್ ಲಾಕರಿನಲ್ಲಿ ಇಡಿ. ಈ ಪ್ರಕ್ರಿಯೆ ಮಕ್ಕಳ ಮದುವೆ ತನಕ ನಿಲ್ಲಿಸದಿರಿ.

ಕೃಷ್ಣಮೂರ್ತಿ, ಸಾಗರ

• **ಪ್ರಶ್ನೆ: ಜಂಟಿ ಖಾತೆ, ಜಂಟಿ ಠೇವಣಿ, ಇವುಗಳಿಗೆ ನಾಮನಿರ್ದೇಶನದ ಅಗತ್ಯ ಇದೆಯೇ? ಠೇವಣಿ ಬಾಂಡ್ ಕಳೆದುಹೋದರೆ, ಬ್ಯಾಂಕ್‌ನಿಂದ ಬಾಂಡ್‌ನ ಹಣ ಹಿಂದಕ್ಕೆ ಪಡೆಯುವುದು ಹೇಗೆ?**

ಉತ್ತರ: ನಿಮ್ಮ ಪ್ರಶ್ನೆ ಅರ್ಥಪೂರ್ಣವಾಗಿದೆ. ಇದೇ ವಿಚಾರದಲ್ಲಿ ಬಹಳಷ್ಟು ಜನರಿಗೆ ಗೊಂದಲ ಇದೆ. ಜಂಟಿ ಖಾತೆ ಹಾಗೂ ಠೇವಣಿಯಲ್ಲಿ ಕನಿಷ್ಠ ಎರಡು ಜನರಿರುವಾಗ ಓರ್ವ ವ್ಯಕ್ತಿ ಮರಣ ಹೊಂದಿದರೆ ಉಳಿದ ವ್ಯಕ್ತಿ ಸಹಜವಾಗಿ ಠೇವಣಿಯ ವಾರಸುದಾರ ಆಗುತ್ತಾರೆ. ಜಂಟಿ ಖಾತೆದಾರ ಅಥವಾ ಠೇವಣಿದಾರರು ವಿಮಾನ ಅಥವಾ ಇನ್ನಿತರ ಅಪಘಾತಕ್ಕೆ ತುತ್ತಾದಲ್ಲಿ ನಾಮನಿರ್ದೇಶನ ಇಲ್ಲದೇ ಇದ್ದರೆ ಬ್ಯಾಂಕ್‌ನವರು ಯಾರಿಗೆ ಹಣ ಕೊಡಬೇಕು ಎನ್ನುವ ಪ್ರಶ್ನೆ ಎದುರಾಗುತ್ತದೆ. ಇಂತಹ ಸಮಸ್ಯೆಗಳಿಂದ ಪಾರಾಗಲು ಜಂಟಿ ಖಾತೆ ಅಥವಾ ಜಂಟಿ ಠೇವಣಿದಾರರು ನಾಮ ನಿರ್ದೇಶನ ಮಾಡುವುದು ಉತ್ತಮ. ನಾಮ ನಿರ್ದೇಶನದ ವಿಚಾರದಲ್ಲಿ ಠೇವಣಿದಾರರಿಗೆ ಸಲಹೆ; ಒಂದು ಠೇವಣಿಗೆ ಓರ್ವ ವ್ಯಕ್ತಿ ಮಾತ್ರ ನಾಮ ನಿರ್ದೇಶನ ಹೊಂದಬಹುದು. ಓರ್ವ ವ್ಯಕ್ತಿಗೆ ಒಂದಕ್ಕಿಂತ ಹೆಚ್ಚಿನ ಮಕ್ಕಳಿರುವಲ್ಲಿ ಠೇವಣಿ ಮೊತ್ತ ವಿಂಗಡಿಸಿ ಬೇರೆ ಬೇರೆ ಠೇವಣಿ ಮಾಡಿ ಎಲ್ಲರಿಗೂ ಪ್ರತ್ಯೇಕ ನಾಮನಿರ್ದೇಶನ ಮಾಡಿ. ಇದರಿಂದ ಠೇವಣಿದಾರ ಮರಣ ಹೊಂದಿದ ನಂತರ ಸಮಸ್ಯೆ ಎದುರಾಗುವುದಿಲ್ಲ. ನಿಮ್ಮ ಇನ್ನೊಂದು ಪ್ರಶ್ನೆ; ಠೇವಣಿ ಬಾಂಡ್ ಕಳೆದಲ್ಲಿ ಬ್ಯಾಂಕಿಗೆ ಒಡಂಬಡಿಕೆ ಪತ್ರ ಕೊಟ್ಟು ನಕಲು ಪತ್ರ ಪಡೆಯಬಹುದು. ಹಾಗೂ ಠೇವಣಿ ಮೊತ್ತ ಹಿಂದಕ್ಕೆ ಪಡೆಯಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಪೂರ್ವ ಲಡಾಖ್‌ನ ಹಿಂಸಾತ್ಮಕ ಗಡಿ ಸಂಘರ್ಷಕ್ಕೆ ಒಂದು ವರ್ಷ

ಗಾಲ್ವನ್ ಹುತಾತ್ಮರಿಗೆ ಗೌರವ

ಪ್ರಜಾವಾಣಿ ವಾರ್ತೆ

ಶ್ರೀನಗರ: ಸರಿಯಾಗಿ ಒಂದು ವರ್ಷದ ಹಿಂದೆ ಪೂರ್ವ ಲಡಾಖ್‌ನ ಗಾಲ್ವನ್ ಕಣಿವೆಯಲ್ಲಿ ಚೀನಾದ ಸೈನಿಕರೊಂದಿಗೆ ನಡೆದ ಕಾದಾಟದಲ್ಲಿ ಹುತಾತ್ಮರಾದ ಭಾರತದ 20 ಯೋಧರಿಗೆ ಸೇನಾಪಡೆಯು ಮಂಗಳವಾರ ಗೌರವ ಸಲ್ಲಿಸಿತು.

2020ರ ಜೂನ್ 15ರಂದು ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯಲ್ಲಿ (ಎಲ್‌ಎಸಿ) ಇರುವ ಗಾಲ್ವನ್ ಕಣಿವೆಯಲ್ಲಿ 16ನೇ ಬಿಹಾರ ರೆಜಿಮೆಂಟ್‌ಗೆ ಸೇರಿದ ಕರ್ನಲ್ ಸಂತೋಷ್ ಬಾಬು ಸೇರಿದಂತೆ 20 ಯೋಧರು ಮೃತಪಟ್ಟಿದ್ದರು. ಚೀನಾ ಸೈನಿಕರ ಜೊತೆ ಹಿಂಸಾತ್ಮಕ ಹೊಡೆದಾಟ ನಡೆದಿತ್ತು. ಈ ಘರ್ಷಣೆಯಲ್ಲಿ ನೂರಾರು ಸೈನಿಕರು ಕಲ್ಲು, ದೊಣ್ಣೆ, ಕಬ್ಬಿಣದ ಸಲಾಕೆ ಹಾಗೂ ಇತರೆ ಪರಿಕರಗಳನ್ನು ಹಿಡಿದು ಸೆಣಸಿದ್ದರು.

ಘರ್ಷಣೆಯ ಮೊದಲ ವಾರ್ಷಿಕದ ದಿನ ಫೈರ್ ಅಂಡ್ ಫ್ಯೂರಿ ಕೋರ್ ಕಡೆಯಿಂದ ಹುತಾತ್ಮರಿಗೆ ಗೌರವ ಸಲ್ಲಿಸಲಾಯಿತು ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ. 'ಫೈರ್ ಅಂಡ್ ಫ್ಯೂರಿ ಕೋರ್‌ನ ಮೇಜರ್ ಜನರಲ್ ಆಕಾಶ್ ಕೌಶಿಕ್ ಅವರು ಯುದ್ಧ ಸ್ಮಾರಕಕ್ಕೆ ಮಾಲಾರ್ಪಣೆ ಮಾಡಿದರು' ಎಂದು ಹೇಳಿದ್ದಾರೆ.

ಅತ್ಯಂತ ಕಡಿದಾದ ಎತ್ತರದ ಭೂಪ್ರದೇಶದಲ್ಲಿ ಹೋರಾಡಿದ ಮತ್ತು ರಾಷ್ಟ್ರದ ಸೇವೆಯಲ್ಲಿ ಅಪ್ರತಿಮ ತ್ಯಾಗ ಮಾಡಿದ ಧೀರ ಸೈನಿಕರಿಗೆ ರಾಷ್ಟ್ರವು ಎಂದಿಗೂ ಕೃತಜ್ಞವಾಗಿರುತ್ತದೆ ಎಂದು ಹೇಳಿದ್ದಾರೆ.

ಸೈನಿಕರ ಹತ್ಯೆಯ ಬಳಿಕ ಭಾರತ ಹಾಗೂ ಚೀನಾ ನಡುವೆ ಯುದ್ಧದ ಕಾರ್ಮೋಡ ಆವರಿಸಿತ್ತು. 11 ಸುತ್ತಿನ ಮಾತುಕತೆಯ ಬಳಿಕ ಉಭಯ ಪಡೆಗಳು ಒಮ್ಮತಕ್ಕೆ ಬಂದವು. ಆದರೂ ಎರಡೂ ಪಡೆಗಳು ವಿವಾದಿತ ಜಾಗದ ತಮ್ಮ ನೆಲೆಗಳಲ್ಲಿ ಸೈನಿಕರು ಹಾಗೂ ಕಣ್ಗಾವಲು ಹೆಚ್ಚಿಸಿದ್ದವು.



ಫೈರ್ ಅಂಡ್ ಫ್ಯೂರಿ ಕೋರ್‌ನ ಮೇಜರ್ ಜನರಲ್ ಆಕಾಶ್ ಕೌಶಿಕ್ ಅವರು ಲೇಹ್‌ನ ಯುದ್ಧ ಸ್ಮಾರಕದಲ್ಲಿ ಗಾಲ್ವನ್ ಹುತಾತ್ಮರಿಗೆ ಪುಷ್ಪ ನಮನ ಸಲ್ಲಿಸಿದರು—ಪಿಟಿಐ ಚಿತ್ರ

'ವರ್ಷ ಕಳೆದರೂ ಸ್ಪಷ್ಟತೆಯಿಲ್ಲ'

ನವದೆಹಲಿ: ಪೂರ್ವ ಲಡಾಖ್‌ನಲ್ಲಿ ಯಾವುದೇ ಅತಿಕ್ರಮಣ ನಡೆದಿಲ್ಲ ಎಂಬ ಪ್ರಧಾನಿ ನರೇಂದ್ರ ಮೋದಿಯವರ ಸಮರ್ಥನೆ ಬಗ್ಗೆ ವರ್ಷ ಕಳೆದರೂ ಸ್ಪಷ್ಟತೆ ಇಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹೇಳಿದ್ದಾರೆ.

ಗಾಲ್ವನ್ ಕಣಿವೆಯಲ್ಲಿ ಭಾರತೀಯ ಪಡೆಗಳು ಮಾಡಿದ ಸರ್ವೋಚ್ಚ ತ್ಯಾಗವನ್ನು ಸೋನಿಯಾ ನೆನಪಿಸಿಕೊಂಡರು. ವಿವಾದಿತ ಜಾಗದಲ್ಲಿ ಯಥಾಸ್ಥಿತಿ ಮರುಸ್ಥಾಪನೆಗೆ ತೆಗೆದುಕೊಂಡ ಕ್ರಮಗಳನ್ನು ಇಡೀ ದೇಶಕ್ಕೆ ತಿಳಿಸಬೇಕು ಎಂದು ಪ್ರಧಾನಿಗೆ ಅವರು ಜ್ಞಾಪಿಸಿದರು.

'ಘಟನೆ ನಡೆದ ಸಂದರ್ಭಗಳ ಬಗ್ಗೆ ಸರ್ಕಾರವು ವಿವರವಾದ ಮಾಹಿತಿಯನ್ನು ರಾಷ್ಟ್ರದ ಜನರಿಗೆ ತಿಳಿಸುತ್ತದೆ ಎಂದು ತಾಳ್ಮೆಯಿಂದ ಕಾಯುತ್ತಿದ್ದೇವೆ. ಯಾವುದೇ ಉಲ್ಲಂಘನೆ ಕೂಡ ಅತಿಕ್ರಮಣ ಎಂದು ಪ್ರಧಾನಿ ಕೊನೆಯದಾಗಿ ಹೇಳಿದ್ದರು. ಆದರೆ ಇನ್ನೂ ಯಾವುದೇ ಸ್ಪಷ್ಟತೆ ಲಭ್ಯವಿಲ್ಲ' ಎಂದು ಅವರು ಹೇಳಿದ್ದಾರೆ.

ಸಂತೋಷ್ ಬಾಬು ಪ್ರತಿಮೆ ಅನಾವರಣ

ಸೂರ್ಯಪೇಟೆ, (ತೆಲಂಗಾಣ): ಗಾಲ್ವನ್ ಘರ್ಷಣೆಯಲ್ಲಿ ಹುತಾತ್ಮರಾದ ಕರ್ನಲ್ ಸಂತೋಷ್ ಬಾಬು ಅವರ ಪ್ರತಿಮೆಯನ್ನು ತೆಲಂಗಾಣದ ಸೂರ್ಯಪೇಟೆಯಲ್ಲಿ ಸಚಿವ ಕೆ.ಟಿ. ರಾಮರಾವ್ ಅವರು ಮಂಗಳವಾರ ಅನಾವರಣ ಮಾಡಿದರು.

ಸಂತೋಷ್ ಬಾಬು ಅವರ ಕುಟುಂಬಕ್ಕೆ ತೆಲಂಗಾಣ ಸರ್ಕಾರ ₹5 ಕೋಟಿ ನೆರವು, ಅವರ ಪತ್ನಿಗೆ ಸರ್ಕಾರಿ ಉದ್ಯೋಗ ಹಾಗೂ ಹೈದರಾಬಾದ್‌ನಲ್ಲಿ ಫ್ಲಾಟ್ ನೀಡಿದೆ.

ಬದುಕು ಕತ್ತಲೆಯಲ್ಲಿದೆ. ಇದು ನನಗೆ ಮತ್ತು ಮಕ್ಕಳಿಗೆ ವೈಯಕ್ತಿಕ ನಷ್ಟ. ಆದರೆ, ಭಾರತಕ್ಕಾಗಿ ಅವರು ಮಾಡಿದ ತ್ಯಾಗ ಹೆಮ್ಮೆ ಮೂಡಿಸಿದೆ

ವನತಿ ದೇವಿ, ಹುತಾತ್ಮ ಹವಾಲ್ದಾರ್ ಕೆ. ಪಳನಿ ಅವರ ಪತ್ನಿ

ಕೆಚ್ಚು ಸ್ಮರಿಸಿದ ಸೇನಾ ಮುಖ್ಯಸ್ಥ

ಚೀನಾದ ಆಕ್ರಮಣ ಮೆಟ್ಟನಿಂತು ದೇಶದ ಸಮಗ್ರತೆ ಕಾಪಾಡಿ ಪ್ರಾಣ ತ್ಯಜಿಸಿದ 20 ಸೈನಿಕರ ಶೌರ್ಯವನ್ನು ಸೇನಾ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಮಂಗಳವಾರ ಕೊಂಡಾಡಿದರು.

'ಕಷ್ಟಕರ ಭೂಪ್ರದೇಶದಲ್ಲಿ ಎದುರಾಳಿಯೊಂದಿಗೆ ಹೋರಾಡಿದ ಸೈನಿಕರ ಸರ್ವೋಚ್ಚ ತ್ಯಾಗವನ್ನು ದೇಶ ಎಂದಿಗೂ ಮರೆಯುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಪ್ರತಿರೋಧವನ್ನು ಭಯೋತ್ಪಾದನೆ ಎನ್ನದಿರಿ'

ಪ್ರತಿಭಟನಕಾರರಿಗೆ ಜಾಮೀನು: ಕೇಂದ್ರದ ಕಿವಿ ಹಿಂಡಿದ ದೆಹಲಿ ಹೈಕೋರ್ಟ್

ನವದೆಹಲಿ (ಪಿಟಿಐ): ಪ್ರತಿಭಟಿಸುವುದು ಮೂಲಭೂತ ಹಕ್ಕು. ಅದನ್ನು ಭಯೋತ್ಪಾದನಾ ಕೃತ್ಯ ಎನ್ನಲಾಗದು ಎಂದು ದೆಹಲಿ ಹೈಕೋರ್ಟ್ ಮಂಗಳವಾರ ಹೇಳಿದೆ.

ದೆಹಲಿ ಗಲಭೆಗೆ ಸಂಬಂಧಿಸಿ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಮೇ 2020ರಿಂದಲೇ ಬಂಧನದಲ್ಲಿದ್ದ ಪಿಂಜ್ರಾ ತೋಡ್ (ಸಂಕೋಲೆ ಮುರಿಯಿರಿ ಅಭಿಯಾನ) ಕಾರ್ಯಕರ್ತರಾದ ನತಾಶಾ ನರ್ವಾಲ್ ಮತ್ತು ದೇವಾಂಗನಾ ಕಾಲಿತಾ ಹಾಗೂ ಇನ್ನೊಬ್ಬ ವಿದ್ಯಾರ್ಥಿ ಆಸಿಫ್ ಇಕ್ಬಾಲ್ ತನ್ಹಾ ಅವರಿಗೆ ದೆಹಲಿ ಹೈಕೋರ್ಟ್‌ನ ಪೀಠವು ಜಾಮೀನು ನೀಡಿದೆ.

ಸರ್ಕಾರ ಅಥವಾ ಸಂಸತ್ತಿನ ನಡೆಗಳ ಬಗ್ಗೆ ವ್ಯಾಪಕ ವಿರೋಧ ಇದ್ದಾಗ ಆಕ್ರೋಶಭರಿತ ಭಾಷಣಗಳು, ರಸ್ತೆ ತಡೆಯಂತಹ ಕೃತ್ಯಗಳು ಅಸಾಮಾನ್ಯ ಏನಲ್ಲ. ಸರ್ಕಾರ ಅಥವಾ ಸಂಸತ್ತಿನ ನಡವಳಿಕೆಯ ವಿರುದ್ಧ ಪ್ರತಿಭಟನೆ ನಡೆಸುವುದು ಕಾನೂನುಬಾಹಿರವೂ ಅಲ್ಲ. ಇಂತಹ ಪ್ರತಿಭಟನೆಗಳು ಶಾಂತಿಯುತವಾಗಿ, ಅಹಿಂಸಾತ್ಮಕವಾಗಿ ಇರಬೇಕು. ಆದರೆ, ಪ್ರತಿಭಟನಕಾರರು ಕಾನೂನಿನ ಮಿತಿಯನ್ನು ಮೀರುವುದೂ ಅಸಾಮಾನ್ಯ ಅಲ್ಲ ಎಂದು ನ್ಯಾಯಮೂರ್ತಿಗಳಾದ ಸಿದ್ಧಾರ್ಥ ಮೃದುಲ್ ಮತ್ತು ಅನೂಪ್ ಜೆ. ಭಂಭಾನಿ ಅವರ ಪೀಠವು ಹೇಳಿದೆ.

'ಈಗಿನ ಪ್ರಕರಣದಲ್ಲಿ, ಆಕ್ರೋಶಭರಿತ ಭಾಷಣ ಮಾಡಲಾಗಿದೆ, ಮಹಿಳಾ ಪ್ರತಿಭಟನಕಾರರಿಗೆ ಕುಮ್ಮಕ್ಕು ನೀಡಲಾಗಿದೆ ಎಂದು ವಾದಕ್ಕೆ ಒಪ್ಪಿಕೊಂಡು, ಸಂವಿಧಾನವು ನೀಡಿದ ಪ್ರತಿಭಟನೆಯ ಮಿತಿಯನ್ನು ಇದು ಮೀರಿದೆ ಎಂದು ಭಾವಿಸಿದರೂ ಇದನ್ನು ಕಾನೂನುಬಾಹಿರ ಕೃತ್ಯಗಳ ತಡೆ ಕಾಯ್ದೆಯಲ್ಲಿ ವಿವರಿಸಿರುವ ಭಯೋತ್ಪಾದನಾ ಕೃತ್ಯ ಅಥವಾ ಷಡ್ಯಂತ್ರ ಎಂದು ಪರಿಗಣಿಸಲು ಸಾಧ್ಯವಿಲ್ಲ' ಎಂದು ಪೀಠವು ವಿವರಿಸಿದೆ.

ಆರೋಪಿಗಳ ಮೇಲೆ ಹೊರಿಸಲಾಗಿರುವ ಆರೋಪಗಳಿಗೂ ಆರೋಪಪಟ್ಟಿ ಮತ್ತು ಅದರ ಜತೆಗೆ ಇರಿಸಿದ್ದ ದಾಖಲೆಗಳಿಗೂ ಯಾವುದೇ ಸಂಬಂಧ ಇರುವುದು ಮೇಲ್ನೋಟಕ್ಕೆ ಕಾಣಿಸುತ್ತಿಲ್ಲ ಎಂದೂ ಪೀಠವು ಹೇಳಿದೆ.

ಭಿನ್ನಮತವನ್ನು ದಮನಿಸುವ ಕಾತರ ಮತ್ತು ಪರಿಸ್ಥಿತಿಯು ಕೈಮೀರಿ ಹೋಗಬಹುದು ಎಂಬ ಅನಾರೋಗ್ಯಕರ ಭೀತಿಯಿಂದಾಗಿ, ಸಂವಿಧಾನವು ಖಾತರಿಪಡಿಸಿರುವ ಪ್ರತಿಭಟನೆಯ ಹಕ್ಕು ಮತ್ತು ಭಯೋತ್ಪಾದನೆಯ ನಡುವಣ ರೇಖೆಯನ್ನು ಸರ್ಕಾರವು ಮಸುಕಾಗಿಸಿದೆ. ಈ ಮನಸ್ಥಿತಿಯೇ ಗಟ್ಟಿಗೊಂಡರೆ ಅದು ಪ್ರಜಾಪ್ರಭುತ್ವಕ್ಕೆ ವಿಷಾದದ ದಿನ ಎಂದು ಹೇಳದೆ ವಿಧಿಯಿಲ್ಲ ಎಂದು ಪೀಠವು ಹೇಳಿದೆ.

ತನ್ಹಾ ಅವರು ಜಾಮಿಯಾ ಮಿಲಿಯಾ ಇಸ್ಲಾಮಿಯಾದ ವಿದ್ಯಾರ್ಥಿ. ನರ್ವಾಲ್ ಮತ್ತು ಕಾಲಿತಾ ಅವರು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪಿಎಚ್‌ಡಿ ವಿದ್ಯಾರ್ಥಿಗಳು.

ಪೌರತ್ವ ತಿದ್ದುಪಡಿ ಕಾಯ್ದೆಯ (ಸಿಎಎ) ವಿರುದ್ಧ ದೆಹಲಿಯಲ್ಲಿ ಪ್ರತಿಭಟನೆ ನಡೆಯುತ್ತಿದ್ದ ಸಂದರ್ಭದಲ್ಲಿ 2020ರ ಫೆಬ್ರುವರಿಯಲ್ಲಿ ನಡೆದ ಕೋಮುಗಲಭೆಗೆ ಸಂಬಂಧಿಸಿ ಇವರನ್ನು ಬಂಧಿಸಲಾಗಿತ್ತು.

ಎಲ್‌ಜೆಪಿ: ಪರಸ್ಪರರನ್ನು ಉಚ್ಚಾಟಿಸಿದ ಬಣಗಳು

ನವದೆಹಲಿ (ಪಿಟಿಐ): ಎಲ್‌ಜೆಪಿಯ ಚಿರಾಗ್ ಪಾಸ್ವಾನ್ ಬಣ ಹಾಗೂ ಪಶುಪತಿ ಕುಮಾರ್ ಪಾರಸ್ ಬಣಗಳು ಮಂಗಳವಾರ ಪರಸ್ಪರರನ್ನು ಉಚ್ಚಾಟಿಸುವ ಮೂಲಕ ಪಕ್ಷದ ಮೇಲೆ ಹಿಡಿತ ಸಾಧಿಸುವ ಪ್ರಯತ್ನ ನಡೆಸಿವೆ.

ಚಿರಾಗ್ ಪಾಸ್ವಾನ್ ಬಣವು ರಾಷ್ಟ್ರೀಯ ಕಾರ್ಯಕಾರಿಣಿಯನ್ನು ನಡೆಸಿ, ಐವರು ಬಂಡಾಯ ಸಂಸದರನ್ನು ಉಚ್ಚಾಟಿಸುವ ತೀರ್ಮಾನ ಕೈಗೊಂಡಿತು. ಇನ್ನೊಂದೆಡೆ ಪಾರಸ್ ನೇತೃತ್ವದ ಬಣವು ಪಾಸ್ವಾನ್ ಅವರನ್ನು ಪಕ್ಷದ ಅಧ್ಯಕ್ಷ ಸ್ಥಾನದಿಂದ ಉಚ್ಚಾಟಿಸಿದೆ. ತಮ್ಮದೇ ನಿಜವಾದ ಲೋಕ ಜನಶಕ್ತಿ ಪಕ್ಷ ಎಂದು ಎರಡೂ ಬಣಗಳು ವಾದಿಸಿವೆ.

ಪಕ್ಷದ ಆರು ಮಂದಿ ಸಂಸದರಲ್ಲಿ ಐವರು ಪಾರಸ್ ಅವರ ಬಣದಲ್ಲಿ ಗುರುತಿಸಿಕೊಂಡಿದ್ದಾರೆ. ಆದರೆ, ಚಿರಾಗ್ ಅವರು ಮಂಗಳವಾರ ವರ್ಚುವಲ್ ಮಾಧ್ಯಮದಲ್ಲಿ ಪಕ್ಷದ ಸಭೆ ಆಯೋಜಿಸಿದ್ದು, 76ರಲ್ಲಿ 41 ಮಂದಿ ಸದಸ್ಯರು ಆ ಸಭೆಯಲ್ಲಿ ಪಾಲ್ಗೊಂಡಿದ್ದರು. ಪಕ್ಷವಿರೋಧಿ ಚಟುವಟಿಕೆ ನಡೆಸಿದ ಐವರು ಸಂಸದರನ್ನು ಉಚ್ಚಾಟಿಸಲು ಸಭೆಯಲ್ಲಿ ಅವಿರೋಧವಾಗಿ ತೀರ್ಮಾನಿಸಲಾಗಿದೆ ಎಂದು ಪಕ್ಷದ ಬಿಹಾರ ಘಟಕದ ಕಾರ್ಯನಿರ್ವಾಹಕ ಅಧ್ಯಕ್ಷ ರಾಜು ತಿವಾರಿ ತಿಳಿಸಿದ್ದಾರೆ.

ಇನ್ನೊಂದೆಡೆ, ಸಂಸದರೂ ಆಗಿರುವ ಚಿರಾಗ್ ಅವರನ್ನು ಪಕ್ಷದ ಅಧ್ಯಕ್ಷ ಸ್ಥಾನದಿಂದ ಉಚ್ಚಾಟಿಸಲು ತುರ್ತಾಗಿ ಆಯೋಜಿಸಿದ್ದ ರಾಷ್ಟ್ರೀಯ ಕಾರ್ಯಕಾರಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. 'ಒಬ್ಬ ವ್ಯಕ್ತಿಗೆ ಒಂದು ಹುದ್ದೆ' ಎಂಬ ನಿಯಮಾನುಸಾರ ಈ ತೀರ್ಮಾನ ಕೈಗೊಳ್ಳಲಾಗಿದೆ. ಐದು ದಿನದೊಳಗೆ ಪಕ್ಷದ ರಾಷ್ಟ್ರೀಯ ಮಂಡಳಿಯ ಸಭೆ ಕರೆಯಲಾಗುವುದು ಎಂದು ಪಾರಸ್ ಬಣ ತಿಳಿಸಿದೆ.

ಈ ಬೆಳವಣಿಗೆಗಳ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿದ ಪಾಸ್ವಾನ್, 'ಪಕ್ಷ ತಾಯಿ ಇದ್ದಂತೆ. ಅದಕ್ಕೆ ದ್ರೋಹ ಬಗೆಯಬಾರದು' ಎಂದಿದ್ದಾರೆ.

ಕಳೆದ ಮಾರ್ಚ್ 29ರಂದು ಚಿಕ್ಕಪ್ಪ ಪಾರಸ್ ಅವರಿಗೆ ತಾವು ಬರೆದಿದ್ದ ಪತ್ರವೊಂದನ್ನು ಚಿರಾಗ್ ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಅದರಲ್ಲಿ ಪಾರಸ್ ಅವರು ಪಕ್ಷದ ನೀತಿಯನ್ನು ಉಲ್ಲಂಘಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಲ್ಲದೆ, ತಮ್ಮ ಕುಟುಂಬ ಹಾಗೂ ಪಕ್ಷಕ್ಕೆ ನಿಷ್ಠೆಯನ್ನು ಪ್ರದರ್ಶಿಸುವಂತೆ ಸೂಚಿಸಿದ್ದರು.

ಕ್ಯಾಲಿಫೋರ್ನಿಯಾ: ಲಾಕ್‌ಡೌನ್ ಸಂಪೂರ್ಣ ತೆರವು

ಸ್ಯಾನ್ ಫ್ರಾನ್ಸಿಸ್ಕೋ (ಎಪಿ): ಕೋವಿಡ್ 19 ಸಾಂಕ್ರಾಮಿಕ ನಿಯಂತ್ರಣಕ್ಕೆ ಬಂದ ಹಿನ್ನೆಲೆಯಲ್ಲಿ ಕ್ಯಾಲಿಫೋರ್ನಿಯಾದಲ್ಲಿ ಈಗ ಸಂಪೂರ್ಣ ಲಾಕ್ ಡೌನ್ ತೆರವುಗೊಳಿಸಲಾಗಿದ್ದು, ಜನಜೀವನ ಸಹಜ ಸ್ಥಿತಿಗೆ ಮರಳಿದೆ. ಲಾಕ್‌ಡೌನ್ ತೆರವುಗೊಳಿಸಿದ ಅಮೆರಿಕದ ಮೊದಲ ರಾಜ್ಯ ಎನಿಸಿಕೊಂಡಿದೆ.

ಹೆಚ್ಚಿನ ರಾಜ್ಯಗಳಲ್ಲಿ ಮಂಗಳವಾರದಿಂದಲೇ ರೆಸ್ಟೋರೆಂಟ್, ಬಾರ್‌ಗಳು, ಸೂಪರ್ ಮಾರ್ಕೆಟ್‌ಗಳು, ಜಿಮ್ಸ್, ಕ್ರೀಡಾಂಗಣಗಳು ಹಾಗೂ ಉಳಿದ ಸ್ಥಳಗಳು ಸಾಮಾಜಿಕ ಅಂತರ ಕಾಪಾಡುವ ಮತ್ತು ಜನದಟ್ಟಣೆಗೆ ಮಿತಿ ವಿಧಿಸುವಂತಹ ನಿಯಮಗಳಿಂದ ಮುಕ್ತವಾಗಿವೆ. ಆದರೆ, ಜನರು ಮಾಸ್ಕ್ ಧರಿಸಿಕೊಂಡಿರುವುದು ಸಾಂಕ್ರಾಮಿಕದ ವಿರುದ್ಧದ ಹೋರಾಟದ ಸಂಕೇತವಾಗಿ ಕಾಣಿಸುತ್ತದೆ. ಇನ್ನು ಮುಂದೆ ಲಸಿಕೆ ಹಾಕಿಸಿಕೊಂಡವರಷ್ಟೇ ವ್ಯವಹಾರಗಳಲ್ಲಿ ಭಾಗವಹಿಸುವುದು ಕಡ್ಡಾಯ ಎನ್ನುವ ನಿಯಮವೂ ಇಲ್ಲವಾಗಲಿದೆ.

'ಲಸಿಕೆ ಅಡ್ಡಪರಿಣಾಮ: 1 ಸಾವು'

ನವದೆಹಲಿ (ಪಿಟಿಐ): 'ಕೋವಿಡ್ ಲಸಿಕೆಯ ಅಡ್ಡಪರಿಣಾಮದಿಂದ ದೇಶದಲ್ಲಿ ಒಂದು ಸಾವು ಸಂಭವಿಸಿದೆ. ಲಸಿಕೆಯಿಂದ ಉಂಟಾದ ಗಂಭೀರ ಅಲರ್ಜಿ ಸಮಸ್ಯೆಯಿಂದ (ಅನಾಫಿಲಾಕ್ಸಿಸ್) ಈ ಸಾವು ಸಂಭವಿಸಿದೆ' ಎಂದು ಕೋವಿಡ್ ಲಸಿಕೆ ಅಡ್ಡಪರಿಣಾಮಗಳ ಅಧ್ಯಯನಕ್ಕೆ ರಚಿಸಿದ್ದ ಸಮಿತಿ ಹೇಳಿದೆ.

ಕೋವಿಡ್ ಲಸಿಕೆ ಪಡೆದುಕೊಂಡ ನಂತರ ವರದಿಯಾದ ಗಂಭೀರ ಅಡ್ಡಪರಿಣಾಮಗಳ 31 ಪ್ರಕರಣಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಸಮಿತಿಯು ಈ ವರದಿ ನೀಡಿದೆ.

'2021ರ ಮಾರ್ಚ್ 8ರಂದು ಲಸಿಕೆ ಪಡೆದುಕೊಂಡ ನಂತರ ಅನಾಫಿಲಾಕ್ಸಿಸ್ ಕಾಣಿಸಿಕೊಂಡಿದ್ದರಿಂದ 68 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಲಸಿಕೆ ಪಡೆದುಕೊಂಡ 30 ನಿಮಿಷಗಳ ಒಳಗೆ ಇಂತಹ ಅಡ್ಡಪರಿಣಾಮಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಹೀಗಾಗಿ ಲಸಿಕೆ ಪಡೆದುಕೊಂಡ 30 ನಿಮಿಷಗಳ ನಂತರದವರೆಗೂ ಎಲ್ಲರನ್ನು ನಿಗಾದಲ್ಲಿ ಇರಿಸಬೇಕು ಎಂಬುದನ್ನು ಈ ಅಧ್ಯಯನವು ಒತ್ತಿ ಹೇಳುತ್ತದೆ' ಎಂದು ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

'ಲಸಿಕೆ ಪಡೆದುಕೊಂಡ ನಂತರ ಕಾಣಿಸಿಕೊಳ್ಳುವ ಗಂಭೀರ ಅಡ್ಡಪರಿಣಾಮಗಳಿಗೆ ಲಸಿಕೆಯೇ ಕಾರಣವಾಗಿರುವುದಿಲ್ಲ ಎಂಬುದನ್ನೂ ಈ ಅಧ್ಯಯನ ಸಾಬೀತು ಮಾಡಿದೆ. ಏಪ್ರಿಲ್ ಮೊದಲ ವಾರದವರೆಗಿನ ದತ್ತಾಂಶಗಳನ್ನು ಪರಿಶೀಲಿಸಲಾಗಿದೆ. ಲಸಿಕೆ ಪಡೆದುಕೊಂಡ ಪ್ರತಿ 10 ಲಕ್ಷ ಮಂದಿಯಲ್ಲಿ, 2.7ರಷ್ಟು ಮಂದಿ ಮಾತ್ರ ಮೃತಪಟ್ಟಿದ್ದಾರೆ. ಲಸಿಕೆ ಹಾಕಿಸಿಕೊಂಡ ಪ್ರತಿ 10 ಲಕ್ಷ ಜನರಲ್ಲಿ ಕೇವಲ 4.8ರಷ್ಟು ಮಂದಿ ಮಾತ್ರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಲಸಿಕೆಯಿಂದ ಇರುವ ಪ್ರಯೋಜನಕ್ಕೆ ಹೋಲಿಸಿದರೆ, ಅದರಿಂದ ಸಂಭಾವ್ಯ ಹಾನಿ ನಗಣ್ಯ. ಹೀಗಾಗಿ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು' ಎಂದು ಸಮಿತಿಯು ಸಲಹೆ ನೀಡಿದೆ.

ಮೈಸೂರು: ವಾರದಲ್ಲಿ 156 ಸಾವು

ಮೈಸೂರು: ಮೈಸೂರಿನಲ್ಲಿ ಕೊರೊನಾ ಸೋಂಕಿನ ಪ್ರಮಾಣದಲ್ಲಿ ಇಳಿಕೆಯಾಗುತ್ತಿದೆಯಾದರೂ, ಸಾವಿನ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬರುತ್ತಿದೆ.

ಆರೋಗ್ಯ ಇಲಾಖೆಯ ಮಂಗಳವಾರದ ವರದಿ ಪ್ರಕಾರ, ಜಿಲ್ಲೆಯಲ್ಲಿ 26 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಕಳೆದ ಒಂದು ವಾರದಲ್ಲಿ ಒಟ್ಟು 156 ಮಂದಿ ಮೃತಪಟ್ಟಿದ್ದಾರೆ. ಸತತ ಐದು ದಿನವೂ ಸಾವಿನ ಸಂಖ್ಯೆ 20ಕ್ಕಿಂತ ಹೆಚ್ಚು ವರದಿಯಾಗಿದೆ. ಜೂನ್ ತಿಂಗಳ ಈ ಹದಿನೈದು ದಿನಗಳಲ್ಲಿಯೇ 286 ಮಂದಿ ಮೃತಪಟ್ಟಿದ್ದು, ಆತಂಕಕ್ಕೆ ಕಾರಣವಾಗಿದೆ.

ಸಾವಿನ ಸಂಖ್ಯೆ ಹೆಚ್ಚಳದ ಬಗ್ಗ ಸ್ಪಷ್ಟನೆ ನೀಡಿರುವ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಶಿವಪ್ರಸಾದ್, 'ಕೋವಿಡ್ ದೃಢಪಟ್ಟು ಮನೆಯಲ್ಲಿ ಮೃತಪಟ್ಟವರನ್ನೂ ಸೇರಿದಂತೆ ಹಲವು ಕೋವಿಡ್ ಸಾವುಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿರುವುದರಿಂದ ಕೆಲ ದಿನಗಳಿಂದ ಸಾವಿನ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ' ಎಂದಿದ್ದಾರೆ.

'ಮನೆಯಲ್ಲೇ ಸಾವು ಸಂಭವಿಸಿದ ಸಂದರ್ಭದಲ್ಲಿ, ಕಮ್ಯುನಿಟಿ ಡೆತ್ ಆಡಿಟ್‌ನಲ್ಲಿ ವರದಿ ಮಾಡಿಕೊಳ್ಳಲಾಗಿದೆ. ಕೆಲವು ಆಸ್ಪತ್ರೆಗಳು ಕೋವಿಡ್‌ನಿಂದ ಮೃತರಾದವರ ಒಂದು ವಾರದ ಪಟ್ಟಿಯನ್ನು ತಡವಾಗಿ ಒಂದೇ ಬಾರಿಗೆ ಜಿಲ್ಲಾ ಸರ್ವೇಕ್ಷಣಾ ಘಟಕಕ್ಕೆ ನೀಡುತ್ತಿವೆ. ಸಿಟಿ ಸ್ಕ್ಯಾನ್ ಮೂಲಕ ದೃಢೀಕರಿಸಿದ ಮರಣದ ವರದಿ ಕೂಡ ಸಲ್ಲಿಸಲಾಗುತ್ತಿದೆ. ಈ ಕಾರಣದಿಂದ ಸಾವಿನ ಸಂಖ್ಯೆ ಹೆಚ್ಚಳವಾದಂತೆ ಕಂಡುಬರುತ್ತಿದೆ' ಎಂದಿದ್ದಾರೆ.

ಸಾವಿನ ಸಂಖ್ಯೆ ಏರಿಕೆಯಾಗುತ್ತಿರುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, 'ಸಿಟಿ ಸ್ಕ್ಯಾನ್ ಮೂಲಕ ದೃಢಪಟ್ಟ ಕೊರೊನಾ ಸೋಂಕಿತರ ಸಾವನ್ನು ಕೂಡಾ ಕೋವಿಡ್ ಸಾವಿನಲ್ಲಿ ಸೇರಿಸಲಾಗುತ್ತಿದೆ. ಇದರಿಂದ ಸಾವಿನ ಪ್ರಮಾಣದಲ್ಲಿ ಏರಿಕೆಯಾಗಿರುವ ಸಾಧ್ಯತೆಯಿದೆ' ಎಂದಿದ್ದಾರೆ.

ರಾಜ್ಯದಲ್ಲಿ ಬೆಂಗಳೂರು ಬಳಿಕ, ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಮೈಸೂರಿನಲ್ಲಿ ಹೆಚ್ಚು ಇದೆ. ಜಿಲ್ಲೆಯಲ್ಲಿ ಇದುವರೆಗೆ ಒಟ್ಟು 1,910 ಮಂದಿ ಮೃತಪಟ್ಟಿದ್ದಾರೆ.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 27 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 33 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
**(Canara Bank, Cantonment Branch;
A/C NO.0404101200385, IFSC CODE : CNRB0000404)**

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3iaryCA**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ-ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಡಾ.ಉಷಾ ರಾವ್,** 113, ಕಿಚನರ್ ಸ್ಟ್ರೀಟ್, ಗರ್‍ರನ್ ಕ್ಯಾನ್‌ಬೆರಾ ಎಸಿಟಿ, ಆಸ್ಟ್ರೇಲಿಯಾ	50,000
2	**ಚನ್ನಬಸವರಾಜ ಶಿವಮೂರ್ತಯ್ಯ ಹಿರೇಮಠ,** ಪಂಚಾಕ್ಷರಿ ನಗರ, 5ನೇ ಬಿ ಅಡ್ಡರಸ್ತೆ, ವೀರೇಶ್ವರ ಪುಣ್ಯಾಶ್ರಮ, ಗದಗ	25,000
3	**ಎಂ.ಎ.ತರುಣ್ ತಿಮ್ಮಯ್ಯ,** ವ್ಯವಸ್ಥಾಪಕ ನಿರ್ದೇಶಕ, ಈಗಲ್ ಸೆಕ್ಯುರಿಟಿ ಏಜೆನ್ಸಿ ಪ್ರೈವೆಟ್ ಲಿಮಿಟೆಡ್, ನಂ 10, ಆಲ್ಪೈನ್ ಆರ್ಕ್, ಲ್ಯಾಂಗ್‌ಫೋರ್ಡ್ ರಸ್ತೆ, ಬೆಂಗಳೂರು	15,000
4	**ಎಸ್.ಎಂ.ಗೋಪಾಲ ರೆಡ್ಡಿ,** 186, 27ನೇ ಮುಖ್ಯ ರಸ್ತೆ, 19ನೇ ಅಡ್ಡರಸ್ತೆ, ಎಚ್‌ಎಸ್‌ಆರ್ ಬಡಾವಣೆ ಸೆಕ್ಟರ್ 2, ಬೆಂಗಳೂರು	10,001
5	**ಕಂದಸ್ವಾಮಿ ಷಣ್ಮುಗಮ್,** ಜಿ6, ಎನ್‌ವಿಟಿ ಆರ್ಕಿಡ್ ಗಾರ್ಡನ್, ಸರ್ಜಾಪುರ ರಸ್ತೆ, ಬೆಂಗಳೂರು	10,000
6	**ಬಿ.ವಿ.ರವಿ ಕುಮಾರ್,** ಎಚ್‌ಎಎಲ್, ಬೋಧನಹೊಸಹಳ್ಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು	10,000
7	**ಸುಬ್ರಮಣ್ಯ, ಬಸವನಗುಡಿ,** ಬೆಂಗಳೂರು	6,000
8	**ಆಶಾ, ಉಷಾ, ಆಶಾ ಪಾಪಣ್ಣ,** 1654/ಎ, 5ನೇ ಅಡ್ಡರಸ್ತೆ, ಹಂಪಿನಗರ, ಬೆಂಗಳೂರು	5,000
9	**ಕಣ್ಣನ್ ಕಸ್ತೂರಿ,** 238/1, ಪಾಮ್ ಮಿಡೋಸ್, ಓಲ್ಡ್ ಏರ್‌ಪೋರ್ಟ್ ವರ್ತೂರು ರಸ್ತೆ, ರಾಮಗೊಂಡನಹಳ್ಳಿ, ಬೆಂಗಳೂರು	5,000
10	**ನೀತಿ,** 291, 12ನೇ ಅಡ್ಡರಸ್ತೆ, ರೈಲ್ವೆ ಬಡಾವಣೆ, ವಿಜಯನಗರ, 2ನೇ ಹಂತ, ಮೈಸೂರು	5,000
11	**ಪ್ರಭಾಕರನ್ ಕೆ.ಎ.,** ಸಿ25, 'ವುಡ್‌ಸಾಂಗ್ ಅರೌಂಡ್ ದಿ ಮ್ಯಾಂಗೋಸ್', ಗುಂಜೂರು ರಸ್ತೆ, ಗುಂಜೂರು, ಬೆಂಗಳೂರು	5,000
12	**ಎಂ.ಕೇಶವ ರೆಡ್ಡಿ,** ನಂ 18, 2ನೇ ಅಡ್ಡರಸ್ತೆ, ಹಳೆ ಉಜಾಲಾ ಕಾರ್ಖಾನೆ ಸಮೀಪ, ಹೊಸಪಾಳ್ಯ, ಬೆಂಗಳೂರು	5,000
13	**ರವೀಂದರ್ ಮಂದಯಂ,** 1355, 9ನೇ ಅಡ್ಡರಸ್ತೆ, ಜೆ.ಪಿ.ನಗರ 1ನೇ ಹಂತ, ಬೆಂಗಳೂರು	5,000
14	**ಶಿವಾನಂದ ಸಾಸ್ವೆಹಳ್ಳಿ,** ನಂ 56, ಎಚ್.ಟಿ.ಲೈನ್ ರಸ್ತೆ, ಹಾವನೂರು ಎಕ್ಸ್‌ಟೆನ್ಷನ್, ಬಾಗಲಗುಂಟೆ, ಬೆಂಗಳೂರು	5,000
15	**ಯೋಗೇಂದ್ರ ಕುಮಾರ್,** 4013/31, 14ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, 2ನೇ ಹಂತ, ರಾಜಾಜಿನಗರ, ಬೆಂಗಳೂರು	5,000
16	**ಎಚ್.ನಂಜುಂಡಪ್ಪ,** ಅಧ್ಯಕ್ಷರು, ಶ್ರೀ ಸಿದ್ಧೇಶ್ವರ ಪ್ರಾಥಮಿಕ ಮತ್ತು ಪ್ರೌಢಶಾಲೆ, ಎಚ್. ನಂಜುಂಡಪ್ಪ ನಗರ, ಆನಗೋಡು, ದಾವಣಗೆರೆ	5,000
17	**ಜಿ.ಡಿ.ದಯಾಕರ್ ರಾವ್,** 33/4, 4ನೇ ಅಡ್ಡರಸ್ತೆ, ನಂಜಪ್ಪ ಬಡಾವಣೆ, 1ನೇ ಮುಖ್ಯರಸ್ತೆ, ಆಡುಗೋಡಿ, ಬೆಂಗಳೂರು	3,000
18	**ಗೋವಿಂದ ರಾಜ್ ಎನ್.,** ನಂ 231/12, 14ನೇ ಮುಖ್ಯರಸ್ತೆ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು	3,000
19	**ಆನಂದ್,** ಯುವ ಇಕೆಎ ಅಪಾರ್ಟ್‌ಮೆಂಟ್, ಫ್ಲ್ಯಾಟ್ ನಂ–ಬಿ311, ಐಶ್ವರ್ಯ ಕ್ರಿಸ್ಟಲ್ ಬಡಾವಣೆ, ಮಣಿಪಾಲ್ ಕೌಂಟಿ ರಸ್ತೆ, ಬೆಂಗಳೂರು	2,500
20	**ಅಬಿದ್ ಮೊಹಿಯುದ್ದೀನ್,** ಕೋರಮಂಗಲ, ಬೆಂಗಳೂರು	2,500
21	**ಯಶ್‌ಕರಣ್ ಕೆ.,** ಎ2 ಬಿಳಿಗಿರಿ, ಆಂಜನೇಯ ಬಡಾವಣೆ, ದಾವಣಗೆರೆ	2,500
22	**ಸಿ.ಚಿದಂಬರ ಶೆಟ್ಟಿ,** ಡಾ. ವಸ್ತ್ರದ ಮನೆ ಎದುರು, ಬಸವೇಶ್ವರ ಬಡಾವಣೆ, ಹೊಸಪೇಟೆ,	2,222
23	**ಪರಶುರಾಮ ಬೊಂಬಳೆ,** ಅಗರ ಮುಖ್ಯರಸ್ತೆ, ಹೊರಮಾವು, ಬೆಂಗಳೂರು	2,132
24	**ಕೆ.ಚಂದ್ರಮೌಳಿ,** 4ನೇ ಎ ಅಡ್ಡರಸ್ತೆ, ಮಾರುತಿನಗರ, ತುಮಕೂರು	2,001
25	**ಮುರಳಿ ಕೃಷ್ಣನ್,** ಎಫ್–202, ಮಂತ್ರಿ ಎಸ್ಪಾನಾ, ಹೊರ ವರ್ತುಲ ರಸ್ತೆ, ಬೆಳ್ಳಂದೂರು, ಬೆಂಗಳೂರು	2,000
26	**ಎಂ.ಕೆ.ಶ್ರೀಕಾಂತ್,** ಎಫ್- 304, ಬ್ರಿಗೇಡ್ ಗೇಟ್‌ವೇ, ಬೆಂಗಳೂರು	2,000
27	**ಚನ್ನಪ್ಪಗೌಡ ಪಾಟಿಲ್,** 244, 6ನೇ ಅಡ್ಡರಸ್ತೆ, 6ನೇ ಬ್ಲಾಕ್, ಬೆಂಗಳೂರು	2,000
28	**ರಾಜಾರಾಂ ಕಲ್ವತಿ,** ಕೊಮರ್ಲಾ ಬ್ರಿಗೇಡ್ ರೆಸಿಡೆನ್ಸಿ, ಚಿಕ್ಕಲಸಂದ್ರ, ಬೆಂಗಳೂರು	2,000
29	**ಗುರುರಾಜ್ ಮಹಾಜನ್,** ಶಿವಾನಂದ ನಗರ, ಬೈಲಹೊಂಗಲ	2,000
30	**ಶಿವಕುಮಾರ್,** ನಂ 8, 6ನೇ ಅಡ್ಡರಸ್ತೆ, ಪರ್ವತವಾಣಿ ರಸ್ತೆ, ಎಸ್.ವಿ.ಜಿ. ನಗರ, ನಾಗರಬಾವಿ ಅಂಚೆ, ಬೆಂಗಳೂರು	2,000
31	**ನಾಗರಾಜ ಎಚ್.,ಎನ್,** ನಂ 002, ಎಂ.ಜಿ ಸೋನಾ, 42, ಕೆ.ಆರ್.ರಸ್ತೆ, ಬಸವನಗುಡಿ, ಬೆಂಗಳೂರು	2,000
32	**ನೋಯೆಲ್ ಮೋಸೆಸ್ ಚೆಲ್ಲಿ,** ಕಾಡಸಿದ್ದೇಶ್ವರ ಕಾಲೊನಿ, 1ನೇ ಅಡ್ಡರಸ್ತೆ, ಕೇಶ್ವಾಪುರ, ಹುಬ್ಬಳ್ಳಿ	2,000
33	**ಕಾಮೇಶ್ ಕೆ.** ನಂ 11, 12ನೇ ಅಡ್ಡರಸ್ತೆ, ಕತ್ರಿಗುಪ್ಪೆ ಮುಖ್ಯರಸ್ತೆ, ಅಶೋಕನಗರ, ಬನಶಂಕರಿ 1ನೇ ಹಂತ, ಬೆಂಗಳೂರು	1,501
34	**ನಾಗಭೂಷಣ ರಾವ್ ಬಿ.ಎಸ್.** 1082, 42ನೇ ಅಡ್ಡರಸ್ತೆ, ಕೆ.ಎಸ್. ಬಡಾವಣೆ, ಬೆಂಗಳೂರು	1,500
35	**ಗುರುಸಿದ್ದಪ್ಪ ವಿ. ಕಲ್ಲಾಳ,** ನಂ 43, 33ನೇ ಅಡ್ಡರಸ್ತೆ, ಲಿಂಗರಾಜನಗರ (ದಕ್ಷಿಣ), ಹುಬ್ಬಳ್ಳಿ	1,111
36	**ಜಿ.ಎಂ.ರವಿ ಕುಮಾರ್,** ಮಹದೇವ ನಿಲಯ, ಲಿಂಗಾಯತ ರಸ್ತೆ, ಜನ್ನಾಪುರ, ಭದ್ರಾವತಿ, ಶಿವಮೊಗ್ಗ ಜಿಲ್ಲೆ	1,100
37	**ಅರ್ಪಣ್ ಚಟರ್ಜಿ,** ಅಜಯ್ ಅಪಾರ್ಟ್‌ಮೆಂಟ್, ಎಸ್.ವಿ.ರಸ್ತೆ, ಮುಂಬೈ	1,001
38	**ಬಿ.ಎಂ.ಈಶ್ವರ,** ನಂ 1250, 12ನೇ ಅಡ್ಡರಸ್ತೆ, ಎಇಸಿಎಸ್ ಬಡಾವಣೆ, ಎ ಬ್ಲಾಕ್, ಸಿಂಗಸಂದ್ರ, ಬೆಂಗಳೂರು	1,001
39	**ಪರಮೇಶ್ವರಾಚಾರ್ ಬಿ.ಕೆ.,** ನಂ 48, ಅನಘ, ಡಿ.ವಿ.ಸಿ ಬಡಾವಣೆ, ರಾಮಕೃಷ್ಣ ನಗರ, ಮೈಸೂರು	1,001
40	**ಕಿರಣ್ ಕೆ., c/o** ಚಂದ್ರಮೌಳಿ ಕೆ, 4ನೇ ಎ ಅಡ್ಡರಸ್ತೆ, ಮಾರುತಿ ನಗರ, ಎಸ್‌ಐಟಿ, ತುಮಕೂರು	1,001
41	**ರವೀಂದ್ರ ಎಸ್.ಡಿ** 3, ಶಾಕಾಂಬರಿ, 1ನೇ ಅಡ್ಡರಸ್ತೆ, 1ನೇ ಬ್ಲಾಕ್, ದೊಡ್ಡಬೊಮ್ಮಸಂದ್ರ, ಜಯಕೃಷ್ಣ ಕಾಂಪ್ಲೆಕ್ಸ್ ಬಳಿ, ಬೆಂಗಳೂರು	1,000
42	**ಅಬ್ದುಸ್ ಸುಭಾನ್,** ನಂ 508, 6ನೇ ಅಡ್ಡರಸ್ತೆ, 2ನೇ ಹಂತ, ರಾಜೀವ ನಗರ, ಮೈಸೂರು	1,000
43	**ಅಲ್ವಿನ್ ಮಿತ್ರ,** ಯಾದಗಿರಿ	1,000
44	**ಅಶೋಕ ಶ್ರೀವಾಸ್ತವ,** ಜೆ–1108, ಬ್ರಿಗೇಡ್ ಮೆಟ್ರೊಪೊಲಿಸ್, 73/1, ಗರುಡಾಚಾರಪಾಳ್ಯ, ಮಹದೇವಪುರ ಅಂಚೆ, ವೈಟ್‌ಫೀಲ್ಡ್ ರಸ್ತೆ, ಬೆಂಗಳೂರು	1,000
45	**ವಿನಯ್ ಭಾರದ್ವಾಜ್ ಎಂ,** ನಂ 35, 3ನೇ ಅಡ್ಡರಸ್ತೆ, ಆಕಾಶವಾಣಿ ಬಡಾವಣೆ, ವಿದ್ಯಾರಣ್ಯಪುರ, ಬೆಂಗಳೂರು	1,000
46	**ನಿಹಾರ್ ಪಟ್ನಾಯಕ್,** ಸೇಂಟ್ ಜಾನ್ ವುಡ್ಸ್, ತಾವರೆಕೆರೆ ರಸ್ತೆ, ಬೆಂಗಳೂರು	1,000
47	**ಕೋಯಾ ಸಾಂತಾ ಮೇರಿ ರತ್ನಂ,** 14–30–3311, ಎಲ್‌ಐಸಿ ಕಚೇರಿ ಹಿಂಭಾಗ, ಅಯೋಧ್ಯ ರಾಮಯ್ಯ ನಗರ, ತಾಡೆಪಳ್ಳಿಗೂಡಂ, ಪಶ್ಚಿಮ ಗೋದಾವರಿ ಜಿಲ್ಲೆ, ಆಂಧ್ರಪ್ರದೇಶ	1,000
48	**ಕರುಣಾ ಕೋಯಾ,** 106, ವರ್ಸ್ ಕಾಸಾ ರೋಸಾ, 1ನೇ ಮುಖ್ಯರಸ್ತೆ, ಪೈ ಬಡಾವಣೆ, ಬೆಂಗಳೂರು	1,000
49	**ವೇಣುಗೋಪಾಲ ಕೆ.** 402, ಮರ್ಕ್ಯುರಿ ಅಪಾರ್ಟ್‌ಮೆಂಟ್,ಬೆಜೈ ಚರ್ಚ್ ರಸ್ತೆ, ಮಂಗಳೂರು	1,000
50	**ಡಾ.ಶ್ರೀಪಾದ್,** ನಂ 514, 26ನೇ ಮುಖ್ಯರಸ್ತೆ, 1ನೇ ಹಂತ, 2ನೇ ಘಟ್ಟ, ಬೆಂಗಳೂರು	1,000
	ಇದುವರೆಗಿನ ಒಟ್ಟು ಮೊತ್ತ: 1,11,66,772	

ಸೊಮಾಲಿಯಾ- ಆತ್ಮಹತ್ಯಾ ಬಾಂಬ್ ದಾಳಿ: 15 ಸಾವು

ಮೊಗದಿಶು (ಎಪಿ): ಸೊಮಾಲಿಯಾ ರಾಜಧಾನಿ ಮೊಗದಿಶು ನಗರದಲ್ಲಿರುವ ಮಿಲಿಟರಿ ತರಬೇತಿ ಕೇಂದ್ರದ ಮೇಲೆ ನಡೆದ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ 15 ಜನರು ಮೃತಪಟ್ಟು, 20ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

'ನಗರದ ಮೇದಿನಾ ಜಿಲ್ಲೆಯಲ್ಲಿ ಈ ತರಬೇತಿ ಕೇಂದ್ರವಿದೆ. ಸ್ಫೋಟಕಗಳಿದ್ದ ಒಳ ಉಡುಪು ಧರಿಸಿದ್ದ ವ್ಯಕ್ತಿ, ತರಬೇತಿ ಪಡೆಯುವ ಸೋಗಿನಲ್ಲಿ ಈ ಕೇಂದ್ರದೊಳಗೆ ಬಂದು ಸ್ಫೋಟಿಸಿಕೊಂಡಿದ್ದಾನೆ' ಎಂದು ಪೊಲೀಸ್ ಇಲಾಖೆ ವಕ್ತಾರ ಸಾದಿಕ್ ಅಲಿ ಅಡೆನ್ ತಿಳಿಸಿದರು.

ಅಲ್ ಕೈದಾ ಉಗ್ರ ಸಂಘಟನೆಯ ಸಂಪರ್ಕ ಹೊಂದಿರುವ ಅಲ್-ಶಬಾಬ್ ಸಂಘಟನೆ ದಾಳಿಯ ಹೊಣೆ ಹೊತ್ತಿದೆ.

ಏಳು ವರ್ಷಗಳ ಬಳಿಕ ಮಿಥಾಲಿ ರಾಜ್ ಸಾರಥ್ಯದ ತಂಡ ಕಣಕ್ಕೆ

ಭಾರತದ ಮಹಿಳೆಯರಿಗೆ ಇಂಗ್ಲೆಂಡ್ 'ಟೆಸ್ಟ್'

ಬ್ರಿಸ್ಟಲ್ (ಪಿಟಿಐ): ಏಳು ವರ್ಷಗಳ ಬಳಿಕ ಭಾರತ ಮಹಿಳಾ ತಂಡವು ಟೆಸ್ಟ್ ಕ್ರಿಕೆಟ್ ಪಂದ್ಯ ಆಡಲು ಸಿದ್ಧವಾಗಿದೆ. ಬುಧವಾರ ಆತಿಥೇಯ ಇಂಗ್ಲೆಂಡ್ ಎದುರು ಇಲ್ಲಿ ಭಾರತ ತಂಡವು ಕಣಕ್ಕಿಳಿಯಲಿದೆ.

ನವೆಂಬರ್ 2014ರ ಬಳಿಕ ಕೆಂಪು ಚೆಂಡಿನ ಪಂದ್ಯದಲ್ಲಿ ಆಡಲಿರುವ ಮಿಥಾಲಿ ರಾಜ್ ನಾಯಕತ್ವದ ಭಾರತ ತಂಡ, ತವರು ಹಾಗೂ ಇಂಗ್ಲೆಂಡ್‌ನಲ್ಲಿ ಕ್ವಾರಂಟೈನ್‌ಗಳನ್ನು ಪೂರ್ಣಗೊಳಿಸಿದೆ. ತಂಡದ ಅಭ್ಯಾಸಕ್ಕೆ ಕೇವಲ ಒಂದು ವಾರ ಸಮಯ ಸಿಕ್ಕಿತ್ತು. ಏಳು ವರ್ಷಗಳ ಹಿಂದೆ ಮೈಸೂರಿನಲ್ಲಿ ನಡೆದ ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯವನ್ನು ಭಾರತ ಗೆದ್ದುಕೊಂಡಿತ್ತು. ಆಗ ಮಿಥಾಲಿ ಸೇರಿದಂತೆ ಈಗಿರುವ ತಂಡದ ಏಳು ಮಂದಿ ಸದಸ್ಯರು ಆಡಿದ್ದರು.

ಅನುಭವಿ ಆಟಗಾರ್ತಿಯರಾದ ಮಿಥಾಲಿ, ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ ಹಾಗೂ ಜೂಲನ್ ಗೋಸ್ವಾಮಿ ಮತ್ತು ಇತ್ತೀಚೆಗೆ ಯಾವುದೇ ಪ್ರಥಮ ದರ್ಜೆ ಪಂದ್ಯಗಳಲ್ಲೂ ಆಡದ ಯುವ ಆಟಗಾರ್ತಿಯರು ಕಣಕ್ಕಿಳಿಯಲಿದ್ದಾರೆ.



ಮಿಥಾಲಿ ರಾಜ್ (ಎಡ) ಹಾಗೂ ಹೀದರ್ ನೈಟ್– ಪಿಟಿಐ ಸಂಗ್ರಹ ಚಿತ್ರ

'ಈ ಟೆಸ್ಟ್ ಪಂದ್ಯಕ್ಕೆ ಸಜ್ಜುಗೊಳ್ಳಲು ನಮಗೆ ಸಿಕ್ಕ ಸಮಯ ಕಡಿಮೆ. ಆದರೆ ಮಾನಸಿಕ ಸಿದ್ಧತೆಯೊಂದಿಗೆ ನಾವು ಇಂಗ್ಲೆಂಡ್‌ಅನ್ನು ಎದುರಿಸಲಿದ್ದೇವೆ. ಪುರುಷರ ತಂಡದ ಉಪನಾಯಕ ಅಜಿಂಕ್ಯ ರಹಾನೆ ಅವರಿಂದ ಅಮೂಲ್ಯ ಸಲಹೆಗಳನ್ನು ಪಡೆದಿದ್ದೇವೆ' ಎಂದು ಹರ್ಮನ್‌ಪ್ರೀತ್ ಕೌರ್ ಹೇಳಿದ್ದಾರೆ.

17 ವರ್ಷದ ಶೆಫಾಲಿ ವರ್ಮಾ ಅವರು ಸ್ಮೃತಿ ಮಂದಾನ ಜೊತೆ ಇನಿಂಗ್ಸ್ ಆರಂಭಿಸುವ ಸಾಧ್ಯತೆಯಿದೆ. ಮಿಥಾಲಿ, ಹರ್ಮನ್‌ಪ್ರೀತ್, ಪೂನಂ ರಾವತ್ ಮೇಲೆ ನಿರೀಕ್ಷೆಯಿದೆ. ಜೂಲನ್ ಗೋಸ್ವಾಮಿ ಮತ್ತು ಶಿಖಾ ಪಾಂಡೆ ಅವರು ದೀರ್ಘ ಬೌಲಿಂಗ್ ಸ್ಪೆಲ್ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಇವರ ಮೇಲೆ ತಂಡದ ನಿರೀಕ್ಷೆಯ ಭಾರ ಹೆಚ್ಚಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ನೆಟ್‌ವರ್ಕ್

ಬುಧವಾರ • ಜೂನ್ 16, 2021 ಪ್ರಜಾವಾಣಿ

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್: ಮಯಂಕ್, ರಾಹುಲ್‌ಗಿಲ್ಲ ಅವಕಾಶ

ಉಮೇಶ್, ಹನುಮ, ಶಮಿಗೆ ಸ್ಥಾನ

ಸೌತಾಂಪ್ಟನ್ (ಪಿಟಿಐ): ವೇಗಿಗಳಾದ ಉಮೇಶ್ ಯಾದವ್, ಮೊಹಮ್ಮದ್ ಶಮಿ ಮತ್ತು ಬ್ಯಾಟ್ಸ್‌ಮನ್ ಹನುಮ ವಿಹಾರಿ ಭಾರತ ಟೆಸ್ಟ್ ತಂಡಕ್ಕೆ ಮರಳಿದ್ದಾರೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯಕ್ಕೆ 15 ಆಟಗಾರರ ತಂಡವನ್ನು ಮಂಗಳ ವಾರ ಪ್ರಕಟಿಸ ಲಾಗಿದ್ದು ಕರ್ನಾಟಕದ ಕೆ.ಎಲ್. ರಾಹುಲ್ ಮತ್ತು ಮಯಂಕ್ ಅಗರ ವಾಲ್ ಅವರನ್ನು ಕೈಬಿಡಲಾಗಿದೆ.

ಬ್ರಿಸ್ಬೇನ್ ಟೆಸ್ಟ್ ಪಂದ್ಯದ ಹೀರೊ ಶಾರ್ದೂಲ್ ಠಾಕೂರ್ ಸ್ಥಾನ ಕಳೆ ದುಕೊಂಡಿದ್ದಾರೆ. ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಅವರಿಗೂ ಅವಕಾಶ ಸಿಗಲಿಲ್ಲ. ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಮಿಂಚಿದ್ದ ಅಕ್ಷರ್ ಪಟೇಲ್ ಕೂಡ ಸ್ಥಾನ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಲಿಲ್ಲ.

ಜೂನ್ 18ರಿಂದ ನಡೆಯಲಿರುವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ಸೆಣಸಲಿದೆ.

ತಂಡವನ್ನು ಎರಡು ವಿಭಾಗಗಳಾಗಿ ವಿಂಗಡಿಸಿ ಅಭ್ಯಾಸ ಮಾಡಿದ್ದ ಸಂದರ್ಭದಲ್ಲಿ ವಿರಾಟ್ ಕೊಹ್ಲಿ ಬಳಗದ ಎದುರಾಳಿ ತಂಡದ ನಾಯಕತ್ವ ರಾಹುಲ್ ಅವರಿಗೆ ನೀಡಲಾಗಿತ್ತು. ಆದರೆ ತಂಡದ ಆಯ್ಕೆ ವೇಳೆ ಅವರನ್ನು ಕಡೆಗಣಿಸಲಾಗಿದೆ. ಆಸ್ಟ್ರೇಲಿಯಾ ವಿರುದ್ಧ ನಡೆದ ಸರಣಿಯಲ್ಲಿ ಆಡಿದವರಿಗೆ ಆದ್ಯತೆ ನೀಡಲಾಗಿದೆ. ಕಾಯ್ದಿರಿಸಿದ ಪಟ್ಟಿಯ ಲ್ಲಿದ್ದವರಿಗೆ ಅವಕಾಶ ನಿರಾಕರಿಸಲಾಗಿದೆ.



ನಾಯಕ ವಿರಾಟ್ ಕೊಹ್ಲಿ (ಬಲ) ಜೊತೆ ಉಮೇಶ್ ಯಾದವ್ –ಎಎಫ್‌ಪಿ ಚಿತ್ರ

ಬ್ರಿಸ್ಬೇನ್ ಟೆಸ್ಟ್‌ನಲ್ಲಿ ಅರ್ಧಶತಕ ಗಳಿಸಿದ್ದಲ್ಲದೆ ಏಳು ವಿಕೆಟ್‌ಗಳನ್ನೂ ಕಬಳಿಸಿದ್ದ ಶಾರ್ದೂಲ್ ಬದಲಿಗೆ ಉಮೇಶ್ ಯಾದವ್‌ಗೆ ಸ್ಥಾನ ನೀಡ ಲಾಗಿದೆ. ಉಮೇಶ್, ಶಮಿ ಮತ್ತು ಹನುಮ ವಿಹಾರಿ ಆಸ್ಟ್ರೇಲಿಯಾ ಪ್ರವಾಸದ ವೇಳೆ ಗಾಯಗೊಂಡಿದ್ದರು. ರವಿಚಂದ್ರನ್ ಅಶ್ವಿನ್ ಮತ್ತು ರವೀಂದ್ರ ಜಡೇಜ ತಂಡದಲ್ಲಿರುವುದರಿಂದ ಅಕ್ಷರ್ ಪಟೇಲ್ ಸ್ಥಾನ ಕಳೆದು ಕೊಂಡಿದ್ದಾರೆ.

ತಂಡ: ವಿರಾಟ್ ಕೊಹ್ಲಿ (ನಾಯಕ), ಶುಭಮನ್ ಗಿಲ್, ರೋಹಿತ್ ಶರ್ಮಾ, ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ, ರಿಷಭ್ ಪಂತ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ, ಇಶಾಂತ್ ಶರ್ಮಾ, ಮೊಹಮ್ಮದ್ ಸಿರಾಜ್, ವೃದ್ಧಿಮಾನ್ ಸಹಾ (ವಿಕೆಟ್ ಕೀಪರ್), ಉಮೇಶ್ ಯಾದವ್, ಹನುಮ ವಿಹಾರಿ.

ಮುಖ್ಯಾಂಶಗಳು

- ಸ್ಪಿನ್ನರ್ ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್‌ಗೂ ಇಲ್ಲ ಸ್ಥಾನ
- ಜೂನ್ 18ರಿಂದ ನಡೆಯಲಿರುವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್



ಶಮಿ – ಎಎಫ್‌ಪಿ ಚಿತ್ರ



ಹನುಮ – ಪಿಟಿಐ ಚಿತ್ರ

ಕ್ರೀಡಾಗ್ರಾಮದಲ್ಲಿ ಕಾಂಡೋಮ್ ಬಳಸುವಂತಿಲ್ಲ!

ಟೋಕಿಯೊ (ರಾಯಿಟರ್ಸ್): ಈ ಬಾರಿ ಒಲಿಂಪಿಕ್ಸ್ ವೇಳೆ ಆಯೋಜಕರು ಒಂದೂವರೆ ಲಕ್ಷ ಕಾಂಡೋಮ್ ವಿತ ರಿಸುವ ಬಗ್ಗೆ ಚಿಂತನೆ ನಡೆಸಿದ್ದಾರೆ. ಆದರೆ ಅವುಗಳನ್ನು ಕ್ರೀಡಾಗ್ರಾಮ ದಲ್ಲಿ ಬಳಸದೆ, ಮನೆಗೆ ತೆಗೆದುಕೊಂಡು ಹೋಗಿ ಎಂದು ಹೇಳುತ್ತಿದ್ದಾರೆ.

ಎಚ್‌ಐವಿ ಹಾಗೂ ಏಡ್ಸ್ ಕುರಿತು ಜಾಗೃತಿ ಮೂಡಿಸಲು, 1988ರ ಸೋಲ್ ಒಲಿಂಪಿಕ್ ಕೂಟದಿಂದ ಇದುವರೆಗೆ ಹೆಚ್ಚಿನ ಸಂಖ್ಯೆಯ ಕಾಂಡೋಮ್‌ಗಳನ್ನು ವಿತರಿಸಿಕೊಂಡು ಬರಲಾಗುತ್ತಿದೆ.

‘ಕ್ರೀಡಾಗ್ರಾಮದಲ್ಲಿ ಬಳಸಲು ಈ ಬಾರಿ ಕಾಂಡೋಮ್ ವಿತರಿಸು ತ್ತಿಲ್ಲ. ಏಡ್ಸ್ ಹಾಗೂ ಎಚ್‌ಐವಿ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಮನೆಗೆ ಕೊಂಡೊಯ್ಯುವಂತೆ ಹೇಳಲಾಗುತ್ತಿದೆ. ಕೋವಿಡ್ ಕಾರಣದಿಂದ ವೈಯಕ್ತಿಕ ಅಂತರ ಕಾಪಾಡಿಕೊಳ್ಳುವುದನ್ನು ಕಡ್ಡಾಯ ಮಾಡಲಾಗಿದೆ’ ಎಂದು ಆಯೋಜಕರು ತಿಳಿಸಿದ್ದಾರೆ.

ಒಬ್ಬೊಬ್ಬರೇ ಕುಳಿತು ಊಟ ಮಾಡುವಂತೆಯೂ ಊಟದ ಬಳಿಕ ತಾವು ಕುಳಿತ ಜಾಗವನ್ನು ಸ್ವಚ್ಛಗೊಳಿ ಸುವಂತೆಯೂ ಹೇಳಲಿದ್ದಾರೆ.

ಮುಂಬೈಗೆ ಬಂದಿಳಿದ ಶಿಖರ್ ಧವನ್ ಬಳಗ

ಮುಂಬೈ (ಪಿಟಿಐ): ಶ್ರೀಲಂಕಾ ವಿರುದ್ಧದ ಕ್ರಿಕೆಟ್ ಸರಣಿಯಲ್ಲಿ ಆಡಲಿರುವ ಶಿಖರ್ ಧವನ್ ನಾಯಕತ್ವದ ಭಾರತ ತಂಡದ ಆಟಗಾರರು ಮಂಗಳವಾರ ಇಲ್ಲಿಗೆ ಬಂದಿಳಿದಿದ್ದು, ಎರಡು ವಾರಗಳ ಕಾಲ ಕ್ವಾರಂಟೈನ್‌ನಲ್ಲಿರುವರು.

ಶ್ರೀಲಂಕಾ ವಿರುದ್ಧದ ಆರು ಪಂದ್ಯಗಳ ಸರಣಿ ಜುಲೈ 13ರಂದು ಆರಂಭವಾಗಲಿದೆ. ಕ್ವಾರಂಟೈನ್ ವೇಳೆ ಆಟಗಾರರಿಗೆ ಆರು ಬಾರಿ ಕೋವಿಡ್ ಸಂಬಂಧಿತ ಆರ್‌ಟಿ–ಪಿಸಿಆರ್ ಪರೀಕ್ಷೆ ಗಳನ್ನು ಮಾಡಲಾಗುತ್ತದೆ.



ಶಿಖರ್ ಧವನ್ –ಟ್ವಿಟರ್ ಚಿತ್ರ

‘ಭಾರತ ತಂಡದಲ್ಲಿ ಕೆಲವು ಹೊಸ ಮತ್ತು ಸಂತಸ ತುಂಬಿರುವ ಮುಖಗಳನ್ನು ನೋಡಲು ಖುಷಿಯಾಗುತ್ತದೆ’ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಟ್ವೀಟ್ ಮಾಡಿದೆ. ಶಿಖರ್ ಧವನ್ ಸೇರಿದಂತೆ ಕೆಲವು ಆಟಗಾರರ ಚಿತ್ರಗಳನ್ನು ಅದು ಹಂಚಿಕೊಂಡಿದೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಮತ್ತು ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಸರಣಿಗಾಗಿ ಪ್ರಸ್ತುತ ಇಂಗ್ಲೆಂಡ್‌ನಲ್ಲಿರುವ ವಿರಾಟ್ ಕೊಹ್ಲಿ ನೇತೃತ್ವದ ತಂಡ ಮತ್ತು ಲಂಕಾ ಪ್ರವಾಸಕ್ಕೆ ಆಯ್ಕೆಯಾಗಿರುವ ತಂಡಕ್ಕೂ ಒಂದೇ ರೀತಿಯ ಕ್ವಾರಂಟೈನ್ ಮಾರ್ಗಸೂಚಿಗಳು ಇರಲಿವೆ’ ಎಂದು ತಿಳಿದುಬಂದಿದೆ.

ರೊನಾಲ್ಡೊ ದಾಖಲೆ ಗೋಲು

ಬುಡಾಪೆಸ್ಟ್/ಸೇಂಟ್ ಪೀಟರ್ಸ್‌ಬರ್ಗ್/ಗ್ಲಾಸ್ಗೊ (ಎಎಫ್‌ಪಿ): ಕ್ರಿಸ್ಟಿಯಾನೊ ರೊನಾಲ್ಡೊ ಎರಡು ಬಾರಿ ಚೆಂಡನ್ನು ಗುರಿ ಮುಟ್ಟಿಸಿ ಯೂರೊ ಕಪ್‌ನಲ್ಲಿ ಅತ್ಯಧಿಕ (11) ಗೋಲು ಗಳಿಸಿದ ಆಟಗಾರ ಎಂಬ ದಾಖಲೆ ಬರೆದರು.



ರೊನಾಲ್ಡೊ

ಅವರ ಅಮೋಘ ಸಾಧನೆಯ ಬಲದಿಂದ ಹಾಲಿ ಚಾಂಪಿಯನ್ ಪೋರ್ಚುಗಲ್ 3–0 ಅಂತರದಲ್ಲಿ ಹಂಗರಿ ವಿರುದ್ಧ ಜಯ ಗಳಿಸಿತು.

ಮಂಗಳವಾರ ರಾತ್ರಿ ನಡೆದ ಪಂದ್ಯದ 84ನೇ ನಿಮಿಷದಲ್ಲಿ ರಫೆಲ್ ಗುರೇರೊ ಮೊದಲ ಗೋಲು ಗಳಿಸಿದರು. 87ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶವನ್ನು ಗೋಲಾಗಿಸಿದ ರೊನಾಲ್ಡೊ ಇಂಜುರಿ ಅವಧಿಯಲ್ಲಿ ಮತ್ತೊಮ್ಮೆ ಚೆಂಡನ್ನು ಗುರಿ ಮುಟ್ಟಿಸಿದರು.

ಸೋಮವಾರ ಮಿಲಾನ್ ಕ್ರಿನಿಯಾರ್ ಅವರ ಅಮೋಘ ಆಟದ ಬಲದಿಂದ ಸ್ಲೊವಾಕಿಯಾ 2–1ರಲ್ಲಿ ಪೋಲೆಂಡ್ ವಿರುದ್ಧ ಜಯ ಸಾಧಿಸಿತು.

ಎದುರಾಳಿ ತಂಡದ ಒಸೀಚ್ ಸೆಜೆನಿ ಅವರ ಉಡುಗೊರೆ ಗೋಲಿನಿಂದ 18ನೇ ನಿಮಿಷದಲ್ಲಿ ಸ್ಲೊವಾಕಿಯಾ ಮುನ್ನಡೆ ಸಾಧಿಸಿತು. 46ನೇ ನಿಮಿಷ ದಲ್ಲಿ ಕರೋಲ್ ಲಿನೆಟಿ ಚೆಂಡನ್ನು ಗುರಿ ಮುಟ್ಟಿಸಿ ಪೋಲೆಂಡ್‌ಗೆ ಸಮಬಲ ತಂದುಕೊಟ್ಟರು. ಮಿಲಾನ್ ಕ್ರಿನಿಯಾರ್ 69ನೇ ನಿಮಿಷ ದಲ್ಲಿ ಮೋಹಕ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು.

ಗ್ಲಾಸ್ಗೊದಲ್ಲಿ ನಡೆದ ‘ಇ’ ಗುಂಪಿನ ಮತ್ತೊಂದು ಪಂದ್ಯದಲ್ಲಿ ಸ್ಪೇನ್ ಮತ್ತು ಸ್ವೀಡನ್ ಗೋಲುರಹಿತ ಡ್ರಾ ಸಾಧಿಸಿತು.

ಫುಟ್‌ಬಾಲ್: 3ನೇ ಸುತ್ತಿಗೆ ಭಾರತ

ದೋಹಾ: ಗಳಿಸಿದ ಮುನ್ನಡೆಯನ್ನು ಉಳಿಸಿಕೊಳ್ಳಲಾಗದ ಭಾರತ ತಂಡವು ವಿಶ್ವಕಪ್ ಮತ್ತು ಏಷ್ಯಾಕಪ್ ಅರ್ಹತಾ ಟೂರ್ನಿಯ ಪಂದ್ಯದಲ್ಲಿ ಅಫ್ಗಾನಿಸ್ತಾನ ಎದುರು 1–1 ಅಂತರದ ಡ್ರಾ ಸಾಧಿಸಿತು.

ಆದರೆ ಏಷ್ಯಾಕಪ್ ಅರ್ಹತೆಯ ಮೂರನೇ ಸುತ್ತಿಗೆ ಭಾರತ ಪ್ರವೇಶಿಸಿತು.

ಮಂಗಳವಾರ ಇಲ್ಲಿ ನಡೆದ ಹಣಾ ಹಣಿಯ 75ನೇ ನಿಮಿಷದಲ್ಲಿ ಅಫ್ಗಾನಿ ಸ್ತಾನದ ಗೋಲ್‌ಕೀಪರ್ ಒವಾಯಿಸ್ ಅಜೀಜಿ ಭಾರತಕ್ಕೆ ‘ಉಡುಗೊರೆ ಗೋಲು’ ನೀಡಿದರು. ಹಿಡಿತಕ್ಕೆ ಪಡೆದ ಚೆಂಡನ್ನು ನಿಯಂತ್ರಿಸಲಾಗದ್ದರಿಂದ ಅದು ಗೋಲುಪೆಟ್ಟಿಗೆಯೊಳಗೆ ಸೇರಿತು.

ಆದರೆ 82ನೇ ನಿಮಿಷದಲ್ಲಿ ಹುಸೇನ್ ಜಾಮನಿ ಗಳಿಸಿದ ಗೋಲಿನ ಬಲದಿಂದ ಸಮಬಲ ಸಾಧಿಸುವಲ್ಲಿ ಅಫ್ಗಾನಿಸ್ತಾನ ಯಶಸ್ವಿಯಾಯಿತು.

ಕೆಎಸ್‌ಎಫ್‌ಎ: ವಿಶ್ವನಾಥನ್ ನಿಧನ

ಬೆಂಗಳೂರು: ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಮಾಜಿ ಉಪಾಧ್ಯಕ್ಷ ಮತ್ತು ಕರ್ನಾಟಕ ಫುಟ್‌ಬಾಲ್ ಸಂಸ್ಥೆಯ ಆಜೀವ ಸದಸ್ಯರಾಗಿದ್ದ ಸಿ.ಆರ್. ವಿಶ್ವನಾಥನ್ (85) ಮಂಗಳವಾರ ಚೆನ್ನೈನಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.



ಸದ್ಯ ಊಟಿ ಫುಟ್‌ಬಾಲ್ ಸಂಸ್ಥೆಯ ಅಧ್ಯಕ್ಷರಾಗಿದ್ದ ಅವರು, ತಮಿಳುನಾಡು, ಕೊಯಮತ್ತೂರು ಸಂಸ್ಥೆಗಳಲ್ಲೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

2004ರಿಂದ 2008ರ ಅವಧಿಯಲ್ಲಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ಗೆ ಉಪಾಧ್ಯಕ್ಷರಾಗಿದ್ದರು.

ದಕ್ಷಿಣ ವಲಯದಿಂದ ಹಲವು ಆಟಗಾರರು ಭಾರತ ತಂಡಕ್ಕೆ ಆಯ್ಕೆ-ಯಾಗುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.